ಸತ್ತ ಸೋದರನ

ಸಾವಿಲ್ಲದ ಕಣ್ಣುಗಳು



ಸ್ಟೆಫಾನ್ ಸ್ಜ್ವೇಗ್ ನ

ವಿಖ್ಯಾತ ಜರ್ಮನ್ ನೀಳ್ಗತೆ

ಕನ್ನಡರೂಪ

ಎಂ.ಆರ್.ಚಂದ್ರಮೌಳಿ

ಸರ್ವದಾ ಹಸನ್ಮುಖಿಯಾಗಿ, ನಮ್ಮ ಕುಟುಂಬದ ಮೂರು ತಲೆಮಾರಿನ ಅನುರಾಗದ ಅನ್ನಪೂರ್ಣೆಯಾಗಿ, ಬಂಧುಗಳ ಕಣ್ಮಣಿಯಾಗಿ, ಮಕ್ಕಳಿಗೆ ಮಮತೆಯ ಮಾತೃಮೂರ್ತಿಯಾಗಿ, ಸಾರ್ಥಕ ಬದುಕನ್ನು ಸಾಗಿಸಿ, ದೇಹತ್ಯಾಗಮಾಡಿದ ಧನ್ಯಜೀವಿ ನನ್ನ ತಾಯಿಯ ಶಾಶ್ವತ ಮಧುರಸ್ಮೃತಿಗಾಗಿ ಈ ಪುಟ್ಟ ಹೊತ್ತಿಗೆ ಸಮರ್ಪಿತ :

ಕೀ.ಶೇ.ಮತ್ತಕೂರು ರಾಜಣ್ಣನವರ ಧರ್ಮಪತ್ನಿ ಲಲಿತಮ್ಮನವರು

(5.1.1932 – 7.12.2024)

ಸಾವಿಲ್ಲದ ಕಣ್ಣುಗಳು

ಸ್ಟೆಫಾನ್ ಜ್ವೇಗ್ ನ

ವಿಖ್ಯಾತ ಜರ್ಮನ್ ನೀಳ್ಗತೆ

ಕನ್ನಡರೂಪ

ಎಂ.ಆರ್.ಚಂದ್ರಮೌಳಿ

ಸತ್ತ ಸೋದರನ ಸಾವಿಲ್ಲದ ಕಣ್ಣುಗಳು

ಕರ್ಮಾನುಷ್ಠಾನದಿಂದಾಗಲೀ ಕರ್ಮತ್ಯಾಗದಿಂದಾಗಲೀ ಮೋಕ್ಷಪ್ರಾಪ್ತಿಯಾಗದು

(ಗೀತೆ ೩-೪)

ಯಾವನೂ ಎಂದಿಗೂ ಒಂದು ಕ್ಷಣಮಾತ್ರವಾದರೂ ಕೆಲಸಮಾಡದೆ ಇರಲಾರ

(ಗೀತೆ ೩-೫)

ಕರ್ಮ ಯಾವುದು? ಅಕರ್ಮ ಯಾವುದು ಎಂದು ನಿರ್ಧರಿಸುವಲ್ಲಿ ಪಂಡಿತರೂ ಸಹ ಭ್ರಾಂತರಾಗಿರುವರು (ಗೀತೆ ೪-೧೬)

ಕರ್ಮ, ಅಕರ್ಮ, ವಿಕರ್ಮಗಳ ಸ್ವರೂಪವನ್ನರಿಯುವುದು ಕಷ್ಟವಾದರೂ ಅದನ್ನು ತಿಳಿಯಬೇಕು

(ಗೀತೆ ೪-೧೭)

ಅದು, ಬುದ್ಧ ಈ ನೆಲದಮೇಲೆ ತನ್ನ ಶಿಷ್ಯರಲ್ಲಿ ಅರಿವಿನ ಬೆಳಕನ್ನು ತುಂಬುತ್ತಿದ್ದ ದಿನಗಳಿಗೂ ಬಹಳ ಹಿಂದಿನ ಕಾಲ. ರಾಜಾಸ್ಥಾನದ ಭಿಲ್ವಾರ ನಗರದಲ್ಲಿ ಪ್ರಾಮಾಣಿಕತೆ ಮತ್ತು ವಿವೇಕವೇ ಮೈವೆತ್ತ ಮಹಾವೀರ, ರಾಜಭಕ್ತ, ವಿರಾಟ. ”**ಪ್ರಜ್ವಲ ಖಡ್ಗ**" ಎಂದೇ ಅವನು ಪ್ರಖ್ಯಾತ. ಮಹಾ ಸಂಗ್ರಾಮಿ, ಶತ್ರುಭಯಂಕರ, ಬೇಟೆಯಲ್ಲಿ ನಿಷ್ಣಾತ. ವಿರಾಟನ ಬಾಣ ಎಂದೂ ಗುರಿತಪ್ಪಿದ್ದಲ್ಲ, ಎಸೆದ ಈಟಿ ಲಕ್ಷ್ಯವನ್ನು ಕತ್ತರಿಸದೆ ಎಂದೂ ಹಿಂದೆ ಬಂದದ್ದಿಲ್ಲ. ಖಡ್ಗವೋ ಕೈಯಲ್ಲಿ ಹಿಡಿದ ಸಿಡಿಲು. ನಿಲುವು, ಪ್ರಶಾಂತ ಸ್ವಾಂತ. ಎದುರಿನ ದೃಷ್ಟಿಗೆ ಕಿಂಚಿತ್ತೂ ಹಿಂದೆಗೆಯದ ಕಣ್ಣನೋಟ. ಎಂದೂ ಕೋಪದಿಂದ ಮುಷ್ಟಿ ಬಿಗಿದವನಲ್ಲ, ಧ್ವನಿಯೇರಿಸಿ ನುಡಿದವನಲ್ಲ. ಮಹಾರಾಜನಿಗೆ ಪರಮ ವಿಧೇಯತೆಯ ನಿಷ್ಠಾವಂತ ಸೇವಕ. ತನ್ನ ಸೇವಕರಿಂದಲೂ ಅತ್ಯಂತ ಗೌರವಯುತವಾಗಿ

ಸೇವಿತನಾದವನು. ಅಲ್ಲದೆ, ಪಂಚನದಿಗಳ ನಾಡಿನಾದ್ಯಂತ ಸರ್ವರಿಂದಲೂ ನ್ಯಾಯಕ್ಕೆ ಪರ್ಯಾಯವೆನಿಸಿದವನು. ತನ್ನ ಗೃಹದ ಮಾರ್ಗದಲ್ಲಿ ನಡೆಯುವಾಗ, ಆತನ ಹೊಳೆವ ಕಣ್ಣುಗಳನ್ನು ನೋಡಿ ಮಕ್ಕಳು ಅವನತ್ತ ಪ್ರೀತಿಯ ನಗೆಯನ್ನು ಬೀರಿದರೆ, ಎದುರಾದ ನಾಡಿನ ಪವಿತ್ರಾತ್ಮರು ಗೌರವದಿಂದ ನಡುಬಗ್ಗಿಸಿ ನಮಿಸುವರು.

ಆದರೆ ಆದಿನ ರಾಜನಿಗೆ, ಅಂದರೆ, ಆತನ ಧಣಿಗೆ ಒಂದು ದುರ್ದೈವ ಒದಗಿಬಂತು. ಅರ್ಧರಾಜ್ಯದ ಪಾಲನೆಗೆ ನೇಮಿಸಲ್ಪಟ್ಟ, ಮಹಾರಾಣಿಯ ಸೋದರ, ದುರಾಶಾವಶನಾಗಿ ಸಾಮ್ರಾಜ್ಯವನ್ನೆಲ್ಲಾ ತನ್ನದಾಗಿಸಿಕೊಳ್ಳುವ ಹೊಂಚಿನಿಂದ, ಸೈನ್ಯದ ಸರ್ವೋತ್ತಮರಿಗೆ ಗುಪ್ತವಾಗಿ ಬಹುಮಾನಗಳನ್ನಿತ್ತು ಅವರನ್ನೆಲ್ಲಾ ತನ್ನತ್ತ ಒಲಿಸಿಕೊಂಡಿದ್ದ. ಸಾವಿರಾರು ವರ್ಷಗಳ ಪರಂಪರೆಯ ರಾಜಲಾಂಛನವಾದ ಪವಿತ್ರ ಬಕಪಕ್ಷಿಗಳನ್ನು, ರಾಜಪುರೋಹಿತರ ಮೂಲಕ, ಅವರಿಗೆ ಧನದ ಆಮಿಷತೋರಿಸಿ, ಯಾರಿಗೂ ತಿಳಿಯದಂತೆ ತನ್ನಲ್ಲಿಗೆ ತರಿಸಿಕೊಂಡ. ಭಿಲ್ವಾರದ ಅಹಿತರನ್ನು ಬೆಟ್ಟದ ಮೇಲಿನಿಂದಿಳಿದು ಆಕ್ರಮಿಸಲು ಸಂಧಾನಿಸಿ, ತನ್ನ ಗಜಸೈನ್ಯವನ್ನು ಕೂಡಿಕೊಂಡು ರಾಜಧಾನಿಯಮೇಲೆ ಮುತ್ತಿಗೆ ಹಾಕಿದ.

ಅಂದು ಬೆಳಗಿನಿಂದ ಸಂಜೆಯವರೆಗೆ, ರಾಜಶಾಸನದಂತೆ, ಕಂಚಿನ ತಾಳವಾದ್ಯಗಳ ಧ್ವನಿ, ದಂತಾಲಂಕೃತ ಕಹಳೆಗಳ ಮೊಳಗು ಎಲ್ಲೆಡೆ ಆವರಿಸಿತು. ರಾತ್ರಿಯಲ್ಲಿ, ಗೋಪುರಗಳ ಮೇಲೆಲ್ಲಾ ದೀವಟಿಗೆಗಳು ಜ್ವಲಿಸುತ್ತಿದ್ದವು. ಮೀನಿನ ಎಲುಬುಗಳನ್ನು ಪಂಜಿನ ಕೆನ್ನಾಲಿಗೆಯಲ್ಲಿ ಹಾಕಿದ್ದರಿಂದ ಹಳದಿ ಬಣ್ಣದ ಉರಿಗಳೆದ್ದು ಬೆಳಗಿ, ಅಪಾಯದ ಸಂಕೇತವನ್ನು ಸೂಚಿಸುತ್ತಿದ್ದವು. ತುರ್ತಿನ ಕರೆಮುಟ್ಟಿದ ಹಲವರು ಅರಮನೆಯತ್ತ ಧಾವಿಸಿದರು. ರಾಜಲಾಂಛವಾದ ಪವಿತ್ರ ಪಕ್ಷಿಗಳು ಕಣ್ಮರೆಯಾದ ವಿಷಯವನ್ನರಿತ ನಾಯಕರ ಹೃದಯಗಳು ಕುಸಿದವು. ರಾಜ್ಯದ ಮಹಾಸೇನಾನಿ ಮತ್ತು ಅತ್ಯಂತ ವಿಶ್ವಾಸಪರನಾದ ಗಜಾಧ್ಯಕ್ಷನೂ ಸೇರಿದಂತೆ, ಮುಖ್ಯರೆಲ್ಲಾ ಶತ್ರುಗಳ ಕಡೆಗೆ ಸೇರಿಹೋಗಿದ್ದರು. ನಂಬಲರ್ಹವಾದ ಅಧಿಕಾರಿಗಳಿಗಾಗಿ ಮಹಾರಾಜ ವ್ಯರ್ಥಪ್ರಯತ್ನಮಾಡುತ್ತಿದ್ದ. ಕಠಿನವಾದ ಪರಿಪಾಲಕನಾಗಿ, ದ್ರೋಹಿಗಳನ್ನು ಕೂಡಲೇ ಶಿಕ್ಷಿಸುತ್ತಾ, ನಿರ್ಭಿಡೆಯಿಂದ ವಿಧಿಸಿದ ಕರಗಳನ್ನು ಪಡೆಯುತ್ತಿದ್ದ ರಾಜನ ಬಳಿ, ಇಂದು ಅಶಕ್ತರಾದ ಸೇವಕಪರಿವಾರ ಮಾತ್ರವೇ ಉಳಿದಿತ್ತು.

ಇಂಥ ದುಃಸ್ಥಿತಿಯಲ್ಲಿ ಮಹಾರಾಜನ ಮನಸ್ಸು ಹರಿದದ್ದು ವಿರಾಟನತ್ತ. ಅರಮನೆಯ ತುರ್ತಿನ ಕಹಳೆಯ ಮೊಳಗು ಆತನನ್ನಾಗಲೇ ಸೇವೆಗೆ ಪ್ರತಿಜ್ಞಾಬದ್ಧನಾಗಿಸಿ ಅಲ್ಲಿಗೆ ಕರೆತಂದಿತ್ತು. ವಿರಾಟ, ಸಿಂಹಾಸವನ್ನಿಳಿದು ಸನಿಹ ಬಂದ ಮಹಾರಾಜನ ಪಾದಗಳಿಗೆರಗಿದ. ರಾಜನಾದರೋ ಪ್ರಾರ್ಥನಾಭಾವದಿಂದ ಸೈನ್ಯದ ಆಧಿಪತ್ಯವನ್ನು ವಿರಾಟನಿಗೆ ವಹಿಸಿ ಶತ್ರುಗಳನ್ನೆದುರಿಸುವಂತೆ ಹೇಳಿದ. ವಿರಾಟ ಮತ್ತೊಮ್ಮೆ ವಂದಿಸಿ ನುಡಿದ.,

"ಅಪ್ಪಣೆ ಪ್ರಭು, ಪ್ರತೀಕಾರದ ಬೆಂಕಿಯನ್ನು ನಿಮ್ಮ ಸೇವಕರ ಪಾದಘಾತಗಳಲ್ಲಿ ನಂದಿಸದೆ ಮತ್ತೆ ಅರಮನೆಗೆ ಬರುವುದಿಲ್ಲ."

ಆನಂತರ ವಿರಾಟ ತನ್ನ ಮಕ್ಕಳನ್ನು ಕರೆಸಿ, ಸೇವಕರನ್ನು ಕೂಡಿಸಿ, ಪರಿವಾರವನ್ನು ಸಂಘಟಿಸಿ, ವಿಶ್ವಾಸಿಗಳಾದ ರಾಜಭಕ್ತಶೇಷ ಸೈನ್ಯವನ್ನು ಅಣಿಗೊಳಿಸಿದ. ಕಾಡಿನ ಮೂಲಕ ಸಾಗಿದ ಸೈನ್ಯ ಸಂಜೆಯವೇಳೆಗೆ, ನದಿಯ ದಡವನ್ನು ತಲುಪಿತು. ನದಿಯ ಮರುಬದಿಯಲ್ಲಿ ಅಪರಿಮಿತ ಶತ್ರುಸೈನ್ಯ ಬೀಡುಬಿಟ್ಟಿತ್ತು. ಹಲವರು ನದಿಯನ್ನು ದಾಟಲು ಸೇತುವೆಯ ನಿರ್ಮಾಣಕ್ಕೆ ಮರಗಳನ್ನು ಕಡಿದು ಕೆಡವುತ್ತಿದ್ದರು. ತಮ್ಮ ಸಂಖ್ಯಾಬಲದ ಧೈರ್ಯದಿಂದ ಮರುದಿನದ ಮುಂಜಾವಿಗೆ ಸೇತುವೆಯನ್ನು ನಿರ್ಮಿಸಿ, ನದಿಯನ್ನು ದಾಟಿ ನೆಲವನ್ನು ರಕ್ತದಲ್ಲಿ ತೋಯಿಸಲು ಹವಣಿಸುತ್ತಾ, ಸೈನ್ಯ ಆ ರಾತ್ರಿಯನ್ನು ಕಳೆಯುತ್ತಿತ್ತು.

ಆದರೆ ವಿರಾಟನಿಗೆ, ಸೇತುವೆ ನಿರ್ಮಾಣದ ಸ್ಥಳದ ತುಸು ಹತ್ತಿರದಲ್ಲೇ, ಹಿಂದೆ, ತಾನು ಹುಲಿಯೊಂದನ್ನು ಬೇಟೆಯಾಡುವಾಗ ನದಿಯ ನೀರಿನಲ್ಲಿಳಿದು ನಡೆದು ಸಾಗುವಂಥ‘’’ಕಾಲ್ಗಡ’’’ವೊಂದು ನೆನಪಿಗೆ ಬಂತು. ಕಾರ್ಗತ್ತಲಿನಲ್ಲಿ ತನ್ನ ವಿಶ್ವಾಸೀ ಸೈನ್ಯವನ್ನು ಕಾಲ್ಗಡದ ಮೂಲಕ ನಡೆಯಿಸಿ, ನದಿಯನ್ನು ದಾಟಿ ಎದುರಿಸಿದಾಗ, ಅನಿರೀಕ್ಷಿತವಾದ ಆಕ್ರಮಣದಿಂದ ಶತ್ರುಪಡೆ ದಿಗ್ಭ್ರಮೆಗೊಂಡಿತು. ವಿರಾಟನ ಪಡೆ, ಧಗಧಗಿಸುವ ಪಂಜುಗಳನ್ನು ಹೊತ್ತಿಸಿ ವಂಚಕರ ಗಜಸೈನ್ಯದೊಳಕ್ಕೆ ನುಗ್ಗಿದಾಗ, ಆ ದೈತ್ಯಪ್ರಾಣಿಗಳು ದೀಪಜ್ವಾಲೆಗೆ ಬೆದರಿ, ತಮ್ಮ ಯೋಜಿತ ಸ್ಥಾನಗಳಿಂದ ಅಸ್ತವ್ಯಸ್ತವಾಗಿ ನುಗ್ಗಿ, ಭಯದಿಂದ ಘೀಳಿಡುತ್ತಾ, ನಿದ್ರೆಯಲ್ಲಿದ್ದ ಸ್ವಪಕ್ಷೀಯರನ್ನೇ ತುಳಿಯುತ್ತಾ ಓಡತೊಡಗಿದವು. ರಾಜಚಿಹ್ನೆಯ ಪವಿತ್ರ ಪಕ್ಷಿಗಳ ಅಪಹಾರಕನಿದ್ದ ಡೇರೆಯತ್ತ ಮೊದಲಿಗೆ ಮುನ್ನುಗ್ಗಿದ್ದು ವಿರಾಟನೇ. ಡೇರೆಯ ಹೊರಗೆ ಆಗಲೇ ಎಚ್ಚೆತ್ತು

ಧಾವಿಸಿಬಂದ ಇಬ್ಬರನ್ನು ವಿರಾಟನ ಖಡ್ಗ ನುಂಗಿತು. ತನ್ನ ಆಯುಧವನ್ನು ಸೆಳೆಯಬೇಕೆಂದು ಯತ್ನಿಸಿದ ಮೂರನೆಯವನೂ ಖಡ್ಗಕ್ಕೆ ಬಲಿಯಾದ. ಮೇಲೆರಗಿದ ನಾಲ್ಕನೆಯವನ್ನು ಕತ್ತಲಲ್ಲೇ ನೂಕಿ ಕೆಡವಿದ. ವಿರಾಟನ ಬಲವಾದ ಮುಷ್ಟಿಘಾತದಿಂದ ಅವನು ತಲೆಯೊಡೆದು ಸತ್ತ. ಐದನೆಯವನ ಕವಚವಿಲ್ಲದ ಎದೆಯೊಳಕ್ಕೆ ವಿರಾಟನ ಕತ್ತಿ, ಕ್ಷಣದಲ್ಲಿಳಿದು ಹೊರಬಂತು. ಎಲ್ಲರೂ ನೆಲಕ್ಕುರುಳಿ ನಿಶ್ಚಲರಾಗಿ ಒಬ್ಬರಿಗೊಬ್ಬರು ತೆರೆಯಾಗಿ ಬಿದ್ದರು. ತಾನು, ರಾಜಲಾಂಛನವಾದ ಶ್ವೇತಬಕಪಕ್ಷಿಗಳನ್ನು ಸಂರಕ್ಷಿಸಿ ಪಡೆಯುವುದನ್ನು ಅಡ್ಡಗಿಸಲು ಮತ್ತಾರಾದರೂ ಎದುರಾಗುವರೇನೋ ಎಂದು ವಿರಾಟ ಡೇರೆಯ ಬಾಗಿಲಿನಲ್ಲೇ ನಿಂತು ಒಳಗೊಮ್ಮೆ ನಿಟ್ಟಿಸಿದ. ಯಾರೂ ಮುಂದೆ ಬರಲಿಲ್ಲ. ವಿರಾಟನ ವಿಶ್ವಾಸದ ಪಡೆ ಹಠಾತ್ತನೆ ವಿಜೃಂಭಿಸಿದಾಗ, ತಮ್ಮ ವಿಜಯೋತ್ಸಾಹದ ಧಾಳಿಗೆ ಶತ್ರುಸೈನ್ಯ ಏನೂಮಾಡಲಾಗದೆ ತಲ್ಲಣಗೊಂಡಿತ್ತು. ಕೆಲವೇ ಕ್ಷಣಗಳಲ್ಲಿ' ಸಮರ ಕೋಲಾಹಲವೇ ಅಡಗಿ ಕಣ್ಮುಂದೆ ಕುಳಿತಂತೆ, ವಿರಾಟ ಪ್ರಶಾಂತ ಭಂಗಿಯಲ್ಲಿ ಕತ್ತಿಯನ್ನು ಹಿಡಿದು ಡೇರೆಯ ಬಾಗಿಲಿನಲ್ಲಿ ತನ್ನವರು ಮರಳಿ ಬರಲು ಕಾಯುತ್ತಾ ಕುಳಿತಿದ್ದ.

ವನದ ಹಿನ್ನೆಲೆಯಲ್ಲಿ ದೇವನ ದಿವಸ ಮೂಡಿತು. ಕಾಡಿನ ಮರಗಳು, ತೆಂಗು –ತಾಳೆಗಳು ಎಳೆನೇಸರಿನ ಬೆಳಕು ಸೋಕಿ, ಬಂಗಾರದಂತೆ ಹೊಳೆದು, ನದಿಯಲ್ಲಿನ ಪಂಜುಗಳಂತೆ ಪ್ರತಿಫಲಿಸಿದವು. ಮೂಡಲಲ್ಲಿ ಸೂರ್ಯ, ಗಾಯಗೊಂಡು ಹತವಾದ ರಕ್ತರಂಜಿತ ಸೈನ್ಯವನ್ನು ಬೆಳಗಿ ಕಾಣಿಸಿಕೊಟ್ಟ. ವಿರಾಟ ಮೇಲೆದ್ದ. ತನ್ನ ಸಮರ ವಸ್ತ್ರಗಳನ್ನು ಕಳಚಿ ಬದಿಯಲ್ಲಿರಿಸಿ, ಕೈಮುಗಿದ ಭಂಗಿಯಲ್ಲಿ ಸಾಗಿ ಹೊಳೆಯ ಸಮೀಪಕ್ಕೆ ಹೊರಟ. ನದಿಯಲ್ಲಿಳಿದು ಪ್ರಜ್ವಲಿಸುವ ದೇವನಯನಕ್ಕೆ ಅಂಜಲಿಬದ್ಧನಾಗಿ, ತುಸು ಮುಂದೆ ಸಾಗಿ, ನದಿಯಲ್ಲಿ ಮುಳುಗಿ ಸ್ನಾನಮಾಡಿದ. ಮೈಗಾಯಗಳನ್ನು ತೊಳೆದುಕೊಂಡ. ಬೆಳಕಿನಲ್ಲೀಗ ದಡದತ್ತ ತಿರುಗಿ, ವಸ್ತ್ರವನ್ನು ಹೊದ್ದು, ನಿಧಾನಗತಿಯಿಂದ ಪ್ರಶಾಂತ ಮನಸ್ಕನಾಗಿ, ರಾತ್ರಿಯ ಘಟನೆಗಳನ್ನು ಸಮೀಕ್ಷಿಸಲು ಡೇರೆಯೊಳಕ್ಕೆ ನಡೆದ. ಭಯದ ಬಿಡುಗಣ್ಣಿನಿಂದ ನಿಶ್ಚೇಷ್ಟಿತವಾಗಿ ಅಲ್ಲಿ ಬಿದ್ದಿದ್ದ ಶವಗಳನ್ನು ವೀಕ್ಷಿಸಿದ. ಶತ್ರುನಾಯಕನ ತಲೆಯೊಡೆದು ಹೋಳಾಗಿತ್ತು. ದ್ರೋಹಿಯಾದ ಶತ್ರುಪಕ್ಷ ಸೇರಿಕೊಂಡಿದ್ದ ರಾಜ್ಯದ ಮಹಾಸೇನಾನಿಯ ಎದೆಗೆ ಕತ್ತಿಯಿಂದ ರಂಧ್ರವಾಗಿತ್ತು. ಅವರ ಕಣ್ಣುಗಳನ್ನು ಮುಚ್ಚಿ ಮುನ್ನಡೆಯುತ್ತಾ ಅರ್ಧ ಸುತ್ತಿದ ಚಾಪೆಯೊಳಗೆ ಮೃತಶರೀರಗಳನ್ನು ಕಂಡ. ಆ ಇಬ್ಬರು ತನಗ

ಅಪರಿಚಿತರಾದವರೇ ಹೌದು. ಒತ್ತುಕೂದಲಿನ ಕಪ್ಪುಬಣ್ಣದ ದಕ್ಷಿಣದೇಶದಿಂದ ಬಂದ ಶತ್ರುಸೈನದ ಸೇವಕರು. ಆದರೆ, ಅವನು? ಕೊನೆಯಲ್ಲಿ ಸತ್ತು ಬಿದ್ದಿದ್ದವನನ್ನು ನೋಡಿದೊಡನೆಯೇ ವಿರಾಟನ ದೃಷ್ಟಿ ಕಂದಿಹೋಯಿತು. ಅಲ್ಲಿ ಕಂಡಿದ್ದು ತನ್ನ ಅಣ್ಣ ಬೇಲಂಗೂರ, ಗಿರಿರಾಜ್ಯದ ಒಡೆಯ. ಅಪಹಾರಕನ ಸಹಾಯಕ್ಕೆ ಬಂದಿದ್ದ. ನಿಶೆಯಲ್ಲಿ ಯಾರು ಯಾರೆಂದು ತಿಳಿಯದೆ ಎಲ್ಲರೂ ವಿರಾಟನ ಖಡ್ಗಕ್ಕೆ ಬಲಿಯಾಗಿದ್ದರು. ನಡುಗುತ್ತಾ ಕುಸಿದು, ದುಸ್ಸಂಗದಿಂದ ವಂಚಿತನಾದ ಅಣ್ಣ ಬದುಕಿರುವನೇನೋ ಎಂದು ಎದೆಮಿಡಿತವನ್ನು ನೋಡಿದ. ಹೃದಯ ಚಿರವಾಗಿ ಸ್ಥಗಿತಗೊಂಡಿತ್ತು. ಸತ್ತವನ ಕಣ್ಣುಗಳು ಕಪ್ಪುಗಾಜಿನ ಗೋಲಿಗಳಂತೆ ವಿರಾಟನ ಆತ್ಮವನ್ನೇ ಸೀಳಿ ಒಳಹೊಗುವಂತೆ ನೋಡುತ್ತಿದ್ದವು. ಉಸಿರಾಡಲೂ ಅಶಕ್ತನಾಗಿ ಶವಗಳ ಮಧ್ಯೆ ತಾನೂ ಸತ್ತವನಂತೆ ಕುಳಿತುಬಿಟ್ಟ. ಆರೋಪಿಸುವಂತೆ ದಿಟ್ಟಿಸುತ್ತಿದ್ದ ತನ್ನ ತಾಯಿಯ ಪ್ರಥಮ ಪುತ್ರನ ಮುಖವನ್ನು ನೋಡಲಾಗದೆ ಅತ್ತ ತಿರುಗಿದ.

ಹೊರಗೆಲ್ಲಾ ಗಲಭೆ, ಕೋಲಾಹಲದ ಶಬ್ದ ಕೇಳಿಬಂತು. ಎದೆಯಲ್ಲಿ ಸಂತೋಷ ತುಂಬಿ, ಸಾಧನೆಯ ಹೆಮ್ಮೆಯಿಂದ, ಆಕ್ರಮಣಕ್ಕೊಳಗಾದ ಪಕ್ಷಿಸಂಕುಲದ ಕೇಕೆಯಂತೆ, ಅತ್ಯುತ್ಸಾಹದ, ವನ್ಯವೆನಿಸುವ ಜಯಧ್ವನಿಗೈಯುತ್ತಾ ಸೈನಿಕರು ಡೇರೆಯ ಬಳಿ ಬಂದರು. ಶತ್ರುನಾಯಕ ತನ್ನ ಜೊತೆಗಾರರಂತೆ ಹತನಾಗಿರುವುದನ್ನು ಕಂಡರು. ಪವಿತ್ರ ಪಕ್ಷಿಗಳ ರಾಜಲಾಂಛನ ಸುಕ್ಷೇಮವಾಗಿರುವುದನ್ನರಿತು, ಮೈಮರೆತು ಹಾರಿ, ಲಾಗಹಾಕಿ ಕುಣಿದು, ನಿರ್ಲಿಪ್ತನಾಗಿ ಕುಳಿತ ವಿರಾಟನ ವಸ್ತ್ರಕ್ಕೆ ಮುತ್ತಿಟ್ಟು **'ಪ್ರಜ್ವಲ ಖಡ್ಗ'** , **'ಪ್ರಜ್ವಲ ಖಡ್ಗ** ' ಎಂದು ವಿರಾಟನ ಬಿರುದನ್ನು ಉದ್ಘೋಷಿಸಿದರು. ಹಿಂದಿನಿಂದ ಮತ್ತಷ್ಟು ಮಂದಿ ಸೈನಿಕರು ಬಂದು, ಶತ್ರುಗಳ ವಸ್ತುಗಳನ್ನೆಲ್ಲಾ ಗಾಡಿಗಳಿಗೆ ತುಂಬಿಕೊಂಡರು. ಗಾಡಿಗಳು ಭಾರದಿಂದ ಜಗ್ಗಿ, ಅವುಗಳನ್ನು ಎಳೆಯುವ ಮಹಿಷಗಳು ಮುಂದೆ ಸಾಗದೆ, ಮುಳ್ಳಿನ ಕೋಲೇಟು ತಿಂದು ನಿಧಾನವಾಗಿ ಕ್ರಮಿಸಿದವು. ಇವನ್ನೆಲ್ಲಾ ತುಂಬಿಕೊಂಡ ದೋಣಿಗಳು ಮುಳುಗಿಹೋಗುವವೇನೋ ಎನ್ನಿಸುತ್ತಿತ್ತು. ಒಬ್ಬ ವಾರ್ತಾವಾಹಕನಾದ ದೂತ ರಾಜನಿಗೆ ವರ್ತಮಾನವನ್ನು ತಿಳಿಸಲು ಕಾಲ್ಗಡದಲ್ಲಿಳಿದು ಧಾವಿಸಿದ. ಉಳಿದ ಸೈನಿಕರು ಲೂಟಿಯ ಕಸದ ಪಕ್ಕದಲ್ಲೇ ವಿಜಯೋತ್ಸಾಹದಿಂದ ನಡೆದುಬರುತ್ತಿದ್ದರು.

ಆಗ, ವಿರಾಟ, ಸ್ವಪ್ನದಲ್ಲಿದ್ದಂತೆ ಸುಮ್ಮನೆ ಕುಳಿತಿದ್ದ. ಒಮ್ಮೆ ಮಾತ್ರ ಸೈನಿಕರು ಸತ್ತವರ ಬಟ್ಟೆಸುಲಿಯಲು ಉದ್ಯುಕ್ತರಾದಾಗ ಏರುದನಿಯಲ್ಲಿ ನುಡಿದು ಅದನ್ನು ನಿಲ್ಲಿಸಿದ. ನಂತರ ಮೇಲೆದ್ದು, ಮೃತರ ಆತ್ಮಮಾರ್ಗಕ್ರಮಣದ ಅನುಕೂಲತೆಗೆ, ಶವಸಂಸ್ಕಾರಕ್ಕಾಗಿ ಕಟ್ಟಿಗೆಯನ್ನು ಅಣಿಮಾಡುವಂತೆ ಆಜ್ಞಾಪಿಸಿದ. ಇಂಥ ಒಳಸಂಚನ್ನು ನಡೆಸಿದ ರಾಜದ್ರೋಹಿಗಳ, ವಂಚಕರ ಶವಗಳ ಅಂಗಾಂಗಳನ್ನು ಕತ್ತರಿಸಿಹಾಕಬೇಕು, ತೋಳ-ನರಿಗಳಿಗೆ ಆಹಾರವನ್ನಾಗಿಸಬೇಕು, ಅವರ ಮೂಳೆಗಳು ಸೂರ್ಯನ ಬಿಸಿಲಿಗೆ ಒಣಗಬೇಕು. ಹಾಗೆಮಾಡದೆ, ಇದೇನು ಈ ವಿರಾಟ ಅವರ ಬಗೆಗೆ ಇಷ್ಟು ಕೋಮಲವಾಗಿ ವರ್ತಿಸುತ್ತಿರುವನು ಎನ್ನಿಸಿದರೂ, ಅವನ ಆದೇಶದಂತೆ ನಡೆದುಕೊಂಡರು. ಚಿತೆಗಳು ಏರ್ಪಟ್ಟಮೇಲೆ ಸ್ವತಃ ವಿರಾಟನೇ ಅಗ್ನಿಯನ್ನು ಜ್ವಲಿಸಿ, ಕೆರಳಿಸಿ ಅಗತ್ಯ ಸಾಮಗ್ರಿಗಳನ್ನೂ, ಶ್ರೀಗಂಧದ ತುಂಡುಗಳನ್ನೂ ಜ್ವಾಲೆಗಳಿಗೆ ಹಾಕಿ ಒಟ್ಟುಗೂಡಿಸಿ ಅಂತ್ಯಕ್ರಿಯೆಯನ್ನು ನೆರವೇರಿಸಿದ. ಉರಿಗಳಾರಿ, ಚಿತೆಯಬೂದಿ ನೆಲದಲ್ಲಿಳಿಯುವವರೆಗೆ ಅಗ್ನಿಗೆ ವಿಮುಖನಾಗಿ ಮೌನವಾಗಿ ನಿಂತ.

ಇಷ್ಟರಲ್ಲಿ, ಹಿಂದಿನ ದಿನ ವಿದ್ರೋಹಿ ಸೈನಿಕರು ನದಿಗೆ ಸೇತುವೆ ಕಟ್ಟುವ ಸನ್ನಾಹಮಾಡಿಬಿಟ್ಟದ್ದನ್ನು ವಿರಾಟನ ಸೈನ್ಯ ಮುಂದುವರೆಸಿದ್ದಿತು. ಸೇತುವೆ ಸಿದ್ಧವಾಯಿತು. ಮೊದಲಿಗೆ ಪುಷ್ಪಾಲಂಕೃತ ಶಿರಸ್ತ್ರಾಣಗಳನ್ನು ಧರಿಸಿದ ಸೈನಿಕರು, ಹಿಂದೆ ಸೇವಕರು, ಅವರ ಹಿಂದೆ ಅಶ್ವಾರೋಹಿ ವೀರರು ಸಾಗಿ, ಸೇತುವೆಯನ್ನು ದಾಟಿದರು. ಕೇಕೆ ಹಾಕಿ ಕುಣಿದು, ಹಾಡಿ, ಗಲಭೆಮಾಡುವ ಸೈನಿಕರನ್ನು, ಪ್ರಶಾಂತತೆಯ ಭಂಗವಾಗದಂತೆ ವಿರಾಟ ಮೊದಲೇ ಹೊರಡಿಸಿದ್ದ. ಮಧ್ಯದಲ್ಲಿ ನಿಂತು ಸೇತುವೆಯ ಇಕ್ಕೆಲಗಳಲ್ಲಿ ದೀರ್ಘವಾಗಿ ದಿಟ್ಟಿಸಿ, ಹರಿಯುವ ನೀರನ್ನು ನೋಡುತ್ತಿದ್ದ. ಮುಂದಿನವರು ಸಾಗುತ್ತಿದ್ದಂತೆ, ವಿರಾಟನ ಹಿಂದೆ ಬರುತ್ತಿದ್ದವರು ಆತನನ್ನು ಗಮನಿಸುತ್ತಿದ್ದರು. ಸ್ವರ್ಗವನ್ನೇ ಬೆದರಿಸುತ್ತಿರುವನೋ ಎಂಬಂತೆ, ವಿರಾಟ ತನ್ನ ಖಡ್ಗವನ್ನು ಮೇಲೆತ್ತಿದ. ಆತನ ತೋಳು ಇಳಿಯುತ್ತಿದ್ದಂತೆ, ಬೆರಳುಗಳ ಹಿಡಿತ ಸಡಿಲವಾಗಿ, **ಅವನು ಹಿಡಿದ ಖಡ್ಗ ನದಿಗೆ ಬಿದ್ದು ಮುಳುಗಿಹೋಯಿತು**. ಅದು ಗಮನಿಸದೆ ಆದ ಅಚಾತುರ್ಯವೆಂದು ಭಾವಿಸಿ, ಖಡ್ಗವನ್ನು ಮೇಲೆತರಲೆಂದು ನದಿಯೊಳಕ್ಕೆ ಧುಮುಕಲು ಸಿದ್ಧರಾದ ಸೈನಿಕರನ್ನು ವಿರಾಟ ತಡೆದ. ಆಶ್ಚಯಚಕಿತರಾದ ಸೈನಕರಿಗೆ ಏನೊಂದನ್ನೂ ಹೇಳದೆ ಮುನ್ನಡೆದ.

ಸೈನ್ಯದ ಹರಿವಿನಿಂದ ದಾರಿಯಿಂದೆದ್ದ ಧೂಳಿನ ಮೊಡಗಳನ್ನು ಸೀಳಿಕೊಂಡು ಬರುತ್ತಿದ್ದ ಅಶ್ವಾರೋಹಿಗಳ ಕಣ್ಣಿಗೆ ಭಿಲ್ವಾರದ ರತ್ನಖಚಿತ ದ್ವಾರಗಳು, ಉತ್ತುಂಗ ಸ್ತಂಭಗಳು ಮಸುಕಾಗಿ ಕಂಡವು. ರಾಜರ ಪಾದಗಳು ಹುಟ್ಟಿದ ಕ್ಷಣದಿಂದ ದೇಹಾಂತ್ಯದನಂತರ ರಾಜೋಚಿತವಾಗಿ ಚಿತೆಗೆ ಸೇರುವವರೆಗೆ, ಬರಿನೆಲವನ್ನು ತಾಕಬಾರದ ಕಾರಣದಿಂದಾಗಿ, ದ್ವಾರದಬಳಿ ಮಹಾರಾಜರು ನಡೆದು ಬರಲು ರತ್ನಕಂಬಳಿಗಳನ್ನು ಹಾಸಲಾಯಿತು. ಈಗ ಗಜಸೈನ್ಯದ ಮುಂದೆ, ಸುತ್ತಲೂ ಯುವಸೈನ್ಯದೊಡನೆ ಬರುತ್ತಿದ್ದ ಸೈನ್ಯಾಧಿನಾಯಕ ವಿರಾಟನ ಆಗಮನವಾಯಿತು. ಮಾವಟಿಗನ ಅಂಕುಶಕ್ಕೆ ವಿಧೇಯವಾಗಿ ಆನೆ ಮಂಡಿಯೂರಿತು. ಅಂಬಾರಿಯನ್ನಿಳಿದ ಮಹಾರಾಜ ರತ್ನಗಂಬಳಿಯಮೇಲೆ ಪಾದಗಳನ್ನಿರಿಸಿದ. ಪಾದಾಭಿವಂದನೆಯನ್ನು ಮಾಡಲು ಉಪಕ್ರಮಿಸಿದ ವಿರಾಟನನ್ನು ತಡೆದು ಮಹಾರಾಜ ಗಾಢವಾಗಿ ಆಲಂಗಿಸಿದ. ಅಂಥ ಗೌರವ ಸಾಮನ್ಯನಿಗೆ ದುರ್ಲಭ. ವಿರಾಟ ತಂದ ರಾಜಲಾಂಛನವಾದ ಪಕ್ಷಿಗಳು ತಮ್ಮ ಶ್ವೇತವರ್ಣದ ರೆಕ್ಕೆಗಳನ್ನು ಬಡಿದು, ಸರ್ವರೂ ಆನಂದತುಂದಿಲರಾಗಿ, ಆ ಹರ್ಷಧ್ವನಿಗೆ ಬೆದರಿದ ಆನೆಗಳನ್ನು ಮಾವುತರು ನಿಯಂತ್ರಿಸಲು ಹೆಣಗಬೇಕಾಯಿತು. ಈ ವಿಜಯ ಸಂಕೇತಗಳ ಸಂಭ್ರಮದಲ್ಲಿ ಅತ್ಯಂತ ಹರ್ಷದಿಂದ ಮಹಾರಾಜ ವಿರಾಟನನ್ನು ಮತ್ತೊಮ್ಮೆ ಆಲಂಗಿಸಿ, ರಜಪೂತ ವಂಶದ ಆದಿಮಹಾವೀರನ ಖಡ್ಗವನ್ನು ಸುವರ್ಣಫಲಕದಲ್ಲಿರಿಸಿ ಹಿಡಿದು ನಿಂತ ರಾಜಪುರೋಹಿತರಿಗೆ ಸನ್ನೆಮಾಡಿದ. ಏಳು ತಲೆಮಾರುಗಳಿಂದ ಅರಮನೆಯ ಕೋಶಾಗಾರದಲ್ಲಿ ಸಂರಕ್ಷಿತವಾಗಿದ್ದ ಖಡ್ಗವದು. ಖಡ್ಗದ ಹಿಡಿಯಲ್ಲಿ ಹುದುಗಿಸಿದ ರತ್ನಗಳು ಹೊಳೆಯುತ್ತಿದ್ದವು. ಖಡ್ಗದ ಉದ್ದಕ್ಕೂ ಅದರ ಅದ್ಭುತ ವಿಜಯಪರಂಪರೆಯ ಕೆತ್ತನೆಯ ಪುರಾತನ ಬರೆಹವನ್ನು ಲಿಪಿಶಾಸ್ತ್ರವನ್ನು ಬಲ್ಲ ಪ್ರಮುಖ ದೇವಸ್ಥಾನದ ಪುರೋಹಿತರೇ ಓದಬಲ್ಲರು. ಮುಂದೆ ಈತನೇ ರಾಜ್ಯದ ಮಹಾಸೇನಾನಿ ಮತ್ತು ಸರ್ವಸೈನ್ಯಾಧಿಪತಿಯೆಂದು ಪ್ರಕಟಿಸಿದಂತೆ, ಆ ಪವಿತ್ರಖಡ್ಗವನ್ನು ಮಹಾರಾಜ ವಿರಾಟನಿಗೆ ನೀಡಿದ.

ಆದರೆ, ವಿರಾಟ ನಮ್ರತೆಯಿಂದ ವಂದಿಸಿ, ಹೇಳಿದ– ”ಘನತೆವೆತ್ತ ಮಹಾಪ್ರಭುಗಳಲ್ಲಿ ಈ ಸೇವಕನದೊಂದು ಬೇಡಿಕೆ.". ನತಮಸ್ತಕನನ್ನು ನೋಡಿ ದೊರೆ ಹೇಳಿದ "ನೀನು ಎದ್ದುನಿಂತು ನಮ್ಮಿಬ್ಬರ ದೃಷ್ಟಿಗಳು ಸೇರುವ ಮೊದಲೇ ನಿನ್ನ ಕೋರಿಕೆಯನ್ನು ಈಡೇರಿಸಲಾಗಿದೆ. ಅದೇನೆಂದು ನೀನು ಕೇಳಬೇಕು, ಅಷ್ಟೆ. ಅಲ್ಲದೆ, ಅರ್ಧ ರಾಜ್ಯವೇ ಈಗ ನಿನ್ನದಾಗಿದೆ.”

ವಿರಾಟನೆಂದ– ''ಹಾಗಾದರೆ ಮಹಾಪ್ರಭು, ಈ ರಾಜಖಡ್ಗವು ಮರಳಿ ಕೋಶಾಗಾರವನ್ನು ಸೇರಲಿ. ಮತ್ತೆಂದೂ ಕತ್ತಿಯನ್ನು ಹಿಡಿಯುವುದಿಲ್ಲವೆಂದು ಅಂತರಾತ್ಮನಲ್ಲಿ ಪ್ರತಿಜ್ಞೆಮಾಡಿಕೊಂಡಿದ್ದೇನೆ. ಈ ಸಮರದಲ್ಲಿ ನನ್ನ ಸೋದರನನ್ನು ಕೊಂದಮೇಲೆ, ನನ್ನ ಮಾತೃಗರ್ಭ ಪಡೆದ ಫಲಗಳಲ್ಲಿ, ಅವಳ ಮಡಿಲಲ್ಲಾಡಿ ಬೆಳೆದ ಮಕ್ಕಳಲ್ಲಿ ಈಗ ಉಳಿದಿರುವನು ನಾನೊಬ್ಬನೇ."

ಆಶ್ಚರ್ಯಚಕಿತನಾದ ರಾಜ ಹೇಳಿದ.''ಹಾಗಿದ್ದರೆ, ಖಡ್ಗವಿಲ್ಲದೆಯೇ ನನ್ನ ಸರ್ವಸೈನ್ಯಾಧಿಕಾರಿಯಾಗಿರು. ಇಂಥ ಕ್ಲಿಷ್ಟಕರ ಸಮರದಲ್ಲಿ ಅತಿ ಮೇಧಾವಿತನದಿಂದ ಸೈನ್ಯವನ್ನು ನಿರ್ವಹಿಸಿದ ನಿನ್ನಂಥ ಯಾವ ವೀರಾಗ್ರಣಿಯನ್ನೂ ಈ ದೇಶ ಕಂಡಿಲ್ಲ. ನಮ್ಮೆಲ್ಲಾ ಸೈನ್ಯಗಳ ಪರಮಾಧಿಕಾರಿ ನೀನೇ ಎಂದು ಜನಕ್ಕೆ ತಿಳಿಯುವಂತೆ, ಲಾಂಛನವಾಗಿ ಈ ಖಡ್ಗದ ಒರೆಯನ್ನಾದರೂ ಧರಿಸು."

ಆದರೆ ವಿರಾಟ ಮತ್ತೆ ರಾಜನಿಗೆ ವಂದಿಸಿ ಮುಂದುವರೆಸಿ, ''ಆ ಕಾಣದ ಶಕ್ತಿ ನನಗೆ ಸೂಚನೆಯನ್ನು ಕೊಟ್ಟಾಯಿತು. ಅದು ನನ್ನ ಹೃದಯದಲ್ಲಿಳಿದ ಅರಿವಾಗಿದೆ. ನನ್ನ ಸೋದರನನ್ನು ಕೊಂದ ಕೃತ್ಯ ನನಗೆ ಕಲಿಸಿದ ಸತ್ಯದ ಪಾಠವೆಂದರೆ, ಮನುಷ್ಯ ಯಾರನ್ನು ಕೊಂದರೂ ಅವನು ತನ್ನ ಸೋದರನನ್ನು ಕೊಂದಂತೆ ಎಂಬುದನ್ನು. ಸೈನ್ಯಬಲದ ಮೂರ್ತರೂಪವೇ ಖಡ್ಗ, ಸೇನಾಬಲವೇ ಶತ್ರುಗಳಿಗೆ ಸರಿಯಾದದ್ದು. ಹತ್ಯೆಯಲ್ಲಿ ಭಾಗಿಯಾದವನೂ ಹಂತಕನೇ. ಅನ್ಯರಲ್ಲಿ ಭಯವನ್ನುಂಟಮಾಡುವ ಕಾರ್ಯದಲ್ಲಿ ನನ್ನಿಚ್ಛೆಯಿಲ್ಲ. ಭಿಕ್ಷುಕನಂತೆ ಮುರುಕಲು ರೊಟ್ಟಿಯನ್ನು ತಿಂದಾದರೂ ಬಾಳಿಯೇನು. ಈ ಅಧಿಕಾರ, ಖಡ್ಗಲಾಂಛನ ನನಗೆ ಬೇಡ. ಸನ್ನಿವೇಶಗಳ ಪ್ರವಾಹದಂಥ ನಮ್ಮ ಜೀವನದ ಕನಿಷ್ಟ ಅವಧಿಯಲ್ಲಿ ಮತ್ತೆ ತಪ್ಪುಗಳನ್ನು ಮಾಡದಿರಲು ನಿರ್ಧರಿಸಿದ್ದೇನೆ ಪ್ರಭೂ"

ಕ್ಷಣಕಾಲ ರಾಜನ ಹುಬ್ಬುಗಳು ಗಾಢವಾದವು. ಅದೊಂದು ಸಂಧಿಗ್ಧತೆಯ ಭಯಾನಕ ಮೌನ. ರಾಜಪರಂಪರೆಯಲ್ಲೇ ಯಾವೊಬ್ಬ ಮಹಾವೀರನೂ ಸಮರಸನ್ಯಾಸ ಕೈಗೊಂಡ ಘಟನೆಗಳಿಲ್ಲ, ಮತ್ತು ಒಬ್ಬ ನಾಯಕಮಣಿ ರಾಜನಿತ್ತ ಕೊಡುಗೆಯನ್ನು ನಿರಾಕರಿಸಿದಂಥ ಘಟನೆಯೂ ನಡೆದಿಲ್ಲ. ರಾಜ, ಒಮ್ಮೆ ವಿರಾಟನ ವೀರವಿಹಾರದ ಕೊಡುಗೆಯಾದ ಬಕಪಕ್ಷಿಗಳನ್ನು ನೋಡಿದ. ಆ ಮಹಾವಿಜಯದ ಸಂಕೇತ ರಾಜನ ಮುಖದ ವಿವರ್ಣತೆಯನ್ನು ಮರೆಮಾಡಿತು.

ರಾಜ ನುಡಿದ– ”ಶತ್ರು ಭಯಂಕರನಾದ ನಿನ್ನ ಧೈರ್ಯ –ಸಾಹಸಗಳು ನನಗೆ ಮೊದಲಿನಿಂದ ತಿಳಿದದ್ದೇ. ನ್ಯಾಯಬದ್ಧವಾದ ನಡೆಯಲ್ಲಿ ನನ್ನೆಲ್ಲಾ ಸಹಾಯಕರಲ್ಲೂ ನೀನು ಅಗ್ರಮಾನ್ಯ. ಸರ್ವಸೈನ್ಯಾಧಿಪತ್ಯ ಬೇಡವೆಂದರೆ, ಮತ್ತೊಂದು ಕ್ಷೇತ್ರದಲ್ಲಿ ನಿನ್ನ ಸೇವೆಯನ್ನು ಸಲ್ಲಿಸಬಹುದು. ನೀನು ನಿಷ್ಪಕ್ಷಪಾತಿಯಾದ್ದರಿಂದ, ನಮ್ಮ ನ್ಯಾಯಮಂಡಳಿಗೆ ಅಧಿಕಾರಿಯಾಗು. ನಮ್ಮ ಅರಮನೆಯ ನ್ಯಾಯ ಸಿಂಹಾಸನದಲ್ಲಿ ಕುಳಿತ ನಿನ್ನಿಂದ ತೀರ್ಪುಗಳು ಹೊರಬಂದು, ಸತ್ಯ ನಮ್ಮ ಅರಮನೆಯ ಗೋಡೆಗಳಲ್ಲಿ ಅನುರಣಿಸಿ, ರಾಜ್ಯದಲ್ಲಿ ಧರ್ಮವು ಸುಸ್ಥಿರವಾಗಲಿ"

ವಂದಿಸಿ ಮೇಲೆದ್ದ ವಿರಾಟನ ಗಜಾರೋಹಣವಾಯಿತು. ಮಹಾರಾಜನ ಜೊತೆಯಲ್ಲೇ ಷಡ್ಗೋಪುರಗಳ ಆ ನಗರವನ್ನು ಪ್ರವೇಶಿಸಿದಾಗ ಜನರ ಹರ್ಷಧ್ವಾನ ಮುಗಿಲು ಮುಟ್ಟಿದ ಸಮುದ್ರಘೋಷದಂತೆ ಕೇಳಿಬಂತು.

ಅಂದಿನಿಂದ ಮುಂಜಾವಿನಿಂದ ಮಬ್ಬಿನವರೆಗೆ, ಅರಮನೆಯ ಗುಲಾಬಿಬಣ್ಣದ ಸೋಪಾನಮಾರ್ಗದ ಮೇಲ್ಭಾಗದಲ್ಲಿ ನೆರೆದ ನ್ಯಾಯಾಧೀಶರ ಸಭೆಯಲ್ಲಿ, ರಾಜನ ಹೆಸರಿನಮೇಲೆ ವಿರಾಟ ಕೊಡುವ ತೀರ್ಪುಗಳು ಧ್ವನಿಸುತ್ತಾ ಬಂದವು. ಅವನ ತೀರ್ಪುಗಳು, ತಕ್ಕಡಿಯ ಮುಳ್ಳು ಮಧ್ಯದಲ್ಲಿ ನಿಲ್ಲುವ ಮುನ್ನ, ಅತ್ತಿಂದಿತ್ತ ದೀರ್ಘವಾಗಿ ಹೊಯ್ದಾಡುವಂತೆ ಇರುತ್ತಿತ್ತು. ಅವನ ತಿಳಿಗಣ್ಣುಗಳು ಆಪಾದಿತನ ಅಂತರಾತ್ಮವನ್ನು ಶೋಧಿಸುವಂತೆ, ಅವನ ಪ್ರಶ್ನೆಗಳು ಮಹಾಮೇಧಾವಿತನದ ಆಳದಿಂದೆದ್ದು ಅಪರಾಧ ಶೋಧದಲ್ಲಿನ ಅಂಧಕಾರವನ್ನು ತಡಕಾಡುವಂತಿದ್ದವು. ತೀರ್ಪುಗಳು ಕಠಿನವಾಗಿದ್ದು ಅವನೆಂದೂ ವಿಚಾರಣೆಯ ದಿನದಂದೇ ತೀರ್ಪನ್ನು ನೀಡುತ್ತಿರಲಿಲ್ಲ. ಒಂದು ರಾತ್ರಿಯ ಅವಧಿಯಲ್ಲಿ ಪ್ರಶಾಂತ ಚಿಂತನೆ ನಡೆಸದೆ ಎಂದೂ ತೀರ್ಪುನೀಡಿರಲಿಲ್ಲ. ಸೂರ್ಯೋದಯವಾದ ಕೆಲವು ಕ್ಷಣಗಳಲ್ಲೇ, ಸರಿತಪ್ಪುಗಳನ್ನು ಪರಿಭಾವಿಸಿ ಉನ್ನತಾಸನದತ್ತ ನಡೆದು ಬರುವ ಅವನ ನಡಿಗೆಯ ಸಪ್ಪಳ ನ್ಯಾಯಾಸ್ಥಾನದ ಸಿಬ್ಬಂದಿಗೆ ಕೇಳಿಬರುತ್ತಿತ್ತು. ತೀರ್ಪು ಕೊಡುವ ಮುನ್ನ, ತನ್ನೆರಡು ಕೈಗಳನ್ನು ಉಜ್ಜಿ, ಹುಬ್ಬುಗಳನ್ನೊರೆಸಿಕೊಂಡು ನೀಡುವ ತನ್ನ ತೀರ್ಪು 'ಭಾವಾವೇಷದ ಬಿಸಿಯಿಂದ' ಹೊರತಾಗಿರುತ್ತಿತ್ತು. ತೀರ್ಪನ್ನು ನೀಡಿದ ಮೇಲೆ ಅಪರಾಧಿಯನ್ನು ತನ್ನ ನಿರ್ಣಯದ ಬಗೆಗೆ ಏನಾದರೂ ದೂರುಗಳಿದ್ದರೆ ಹೇಳಿಕೊಳ್ಳುವ ಅವಕಾಶವನ್ನು ಕೊಡುತ್ತಿದ್ದ. ಆದರೆ, ಕೊಟ್ಟ

ತೀರ್ಪನ್ನು ಒಪ್ಪದೆ ದೂರಿಡುವ ಸಂದರ್ಭಗಳು ಇಲ್ಲವೆನ್ನುವಷ್ಟು ವಿರಳವಾಗಿತ್ತು. ಅಪರಾಧಿಗಳು ಸದ್ದಿಲ್ಲದೆ ಬಂದು ನ್ಯಾಯಪೀಠಕ್ಕೆ ಶಿರವಿಟ್ಟು ವಂದಿಸಿ ದೈವನಿರ್ಣಯವನ್ನು ಅಂಗೀಕರಿಸಿದಂತೆ ವಿಧಿಸಿದ ಶಿಕ್ಷೆಯನ್ನು ಒಪ್ಪಿಕೊಳ್ಳುತ್ತಿದ್ದರು.

ಎಂಥ ಘೋರವಾದ ಅಪರಾಧವನ್ನು ಮಾಡಿದ್ದರೂ, ಮರಣದಂಡನೆ ವಿಧಿಸಲೇಬೇಕೆಂದು ನ್ಯಾಯಮಂಡಳಿ ಸಲಹೆನೀಡಿದರೂ, ಅದನ್ನು ಪರಿಗಣಿಸದೆ, ಅಪರಾಧಿಗಳಿಗೆ ಎಂದೂ ಮರಣದಂಡನೆಯನ್ನು ಅವನು ವಿಧಿಸಿರಲಿಲ್ಲ. ತನ್ನ ಕೈ ರಕ್ತಮಯವಾಗಲು ಮನಸ್ಸು ಹಿಂದೆಗೆಯುತ್ತಿತ್ತು. ರಜಪೂತರ ಪುರಾತನ ಚಿಲುಮೆಯ ದಂಡೆಯಮೇಲೆ ಮರಣದಂಡೆನೆಗೆ ಒಳಗಾದವರ ತಲೆಗಳಿಗೆ ಬೀರಿದ ಕಲ್ಲುಗಳು ರಕ್ತಸಿಕ್ತವಾಗಿ ಕಪ್ಪಾಗಿದ್ದು, ವಿರಾಟನ ನ್ಯಾಯಾಧಿಪತ್ಯದ ಕಾಲದಲ್ಲಿ, ಆ ಕಡುಗಪ್ಪು ಕಲ್ಲುಗಳು ತಿಳಿನೀರಿನಲ್ಲಿ ತಮ್ಮ ಕಳಂಕವನ್ನು ತೊಳೆದುಕೊಳ್ಳುತ್ತಿರುವಂತಿದ್ದವು. ಆದರೂ ರಾಜ್ಯದಲ್ಲಿ ಅಪರಾಧಗಳ ಸಂಖ್ಯೆಯೇನೂ ಏರಲಿಲ್ಲ. ಅಪರಾಧಿಗಳನ್ನು ಶಿಲಾವೃತವಾದ ಕಾರಗಾರದಲ್ಲಿ ಬಂಧಿಯಾಗಿಸಿಯೋ, ಬೆಟ್ಟದಾಚೆಗೆ, ಉದ್ಯಾನದ ಗೋಡೆಗಳಿಗಾಗಿ ಬಂಡೆಗಳನ್ನೊಡೆಯುವಂತೆ ನೇಮಿಸಿಯೋ, ಅಥವಾ, ನದಿಯ ಬದಿಯಲ್ಲಿ ಆನೆಗಳು ಎಳೆಯುತ್ತಾ ತಿರುಗುವ ಗಾಣಗಳೆಡೆಯಲ್ಲಿ ಚಾಕರಿ ಮಾಡುವಂತೆಯೋ ಅವನ ಶಿಕ್ಷೆಗಳ ಗೊತ್ತುಪಡಿ ನಡೆಯುತ್ತಿತ್ತು. ತಾನು ಜೀವನವನ್ನು ಗೌರವಿಸುತ್ತಿದ್ದ. ಜನ ಅವನನ್ನು ಗೌರವಿಸುತ್ತಿದ್ದರು. ಎಂದೂ ಅವನ ತೀರ್ಪುಗಳಲ್ಲಿ ದೋಷ ಕಂಡುಬರುತ್ತಿರಲಿಲ್ಲ; ಸತ್ಯಾನ್ವೇಷಣ ಕಾರ್ಯದಲ್ಲಿ ಎಂದೂ ಅವನು ಬಳಲಿದವನಲ್ಲ; ಅವನ ನುಡಿಗಳಲ್ಲೆಂದೂ ಮುನಿಸು ಕಂಡುಬರುತ್ತಿರಲಿಲ್ಲ. ದೇಶದ ಮೂಲೆಮೂಲೆಗಳಿಂದ ಮಹಿಷಗಳಿಂದ ಎಳೆಯಲ್ಪಟ್ಟ ಗಾಡಿಗಳಲ್ಲಿ ಜನರು ಬಂದು, ತಮ್ಮ ದೂರುಗಳನ್ನು ಸಲ್ಲಿಸುತ್ತಿದ್ದರು. ರಾಜ ಪುರೋಹಿತರು ವಿರಾಟನ ವಾಗ್ದಂಡನೆಗೆ ವಿಧೇಯರಾಗಿ, ರಾಜನೂ ಸಹ ಆ ವಿಚಾರಗಳನ್ನು ತಿಳಿದುಕೊಳ್ಳುತ್ತಾ, ನ್ಯಾಯಾಂಗವ್ಯವಸ್ಥೆ ಸಮರ್ಪಕಸ್ಥಿತಿಯಲ್ಲಿ ನಡೆಯುತ್ತಿತ್ತು. ಎಳೆಯ ಬಿದಿರು ಬೆಳೆದು ಹೆಮ್ಮೆಳೆಯಾಗಿ ತನ್ನ ಹಿಂದಿನ ರೂಪ ಮರೆಯಾಗುವಂತೆ, ವಿರಾಟನ '**ಪ್ರಜ್ವಲ ಖಡ್ಗ**' ವೆಂಬ ಆ ಕಾಲದ ಬಿರುದನ್ನು ಜನ ಮರೆತರು. ಈಗ ರಾಜಪುಟಾನದಲ್ಲಿ ಅವನು '**ನ್ಯಾಯದ ಚಿಲುಮೆ**'.

ಆರನೇ ವರ್ಷದ ತನ್ನ ನ್ಯಾಯಪಾಲನೆಯ ಕಾಲದಲ್ಲಿ, ಖಜಾರ ಪ್ರದೇಶದಲ್ಲಿನ ಅಲೆಮಾರಿ ಜನಾಂಗದ ಯುವಕನ ಬಗೆಗೆ ಒಂದು ಮೊಕದ್ದಮೆ ವಿರಾಟನಿಗೆದುರಾಯಿತು. ಖಜಾರರು ಸರಹದ್ದಿನ ಗಿರಿಪ್ರಾಂತಗಳಾಚೆ ಜೀವಿಸುವ ತಮ್ಮದೇ ದೇವತೆಗಳ ಆರಾಧಕರು. ಬಹುದಿನಗಳಿಂದ ಅವನನ್ನು ಬಂಧಿಯಾಗಿಸಿ ಎಳೆದು, ನಡೆಸಿಕೊಂಡು ಬಂದದ್ದರಿಂದಾಗಿ ಆಪಾದಿತನ ಪಾದಗಳು ರಕ್ತಸಿಕ್ತವಾಗಿದ್ದವು. ಆತನ ಊದಿಕೊಂಡ ಕಣ್ಣುಗಳು ಹಿಂಸೆ ಮತ್ತು ಕ್ರೌರ್ಯಗಳು ಕಾರ್ಯಗತವಾದಂತೆ ಹೊರಸೂಸುತ್ತಿದ್ದವು. ಅವನ ಬಲವಾದ ಬಾಹುಗಳನ್ನು ಬಿಗಿಯಾಗಿ ಕಟ್ಟಿದ್ದರು. ಆಪಾದಿತನನ್ನು ಎಳೆದು ತಂದು ವಿರಾಟನ ಉನ್ನತಾಸನದ ಮುಂದೆ ಮಂಡಿಯೂರಿಸಿ, ತಾವೂ ವಂದಿಸಿ, ಕೈಗಳನ್ನೆತ್ತಿಹಿಡಿದು ತಮ್ಮ ಅಹವಾಲನ್ನು ಸೂಚಿಸಿದರು.

ನ್ಯಾಯಾಧೀಶ ಪ್ರಶ್ನಾಪೂರ್ವಕವಾಗಿ ಅವರತ್ತ ನೋಡಿ ನುಡಿದ: ''ನೀವಾರು ಸೋದರರೆ, ನನ್ನಲ್ಲಿಗೆ ಬಹುದೂರದಿಂದ ಬಂದಿದ್ದೀರಿ? ಬಂಧಿಸಲ್ಪಟ್ಟ ಇವನಾರು?"

ಅವರಲ್ಲಿನ ಹಿರಿಯ ಉತ್ತರಿಸಿದ. ''ನಾವು ಪಶುಪಾಲಕರು, ದೇಶದ ಪೂರ್ವಭಾಗದಲ್ಲಿ ನೆಮ್ಮದಿಯಿಂದ ಬಾಳುತ್ತಿದ್ದೇವೆ. ಎಳೆದು ತಂದಿರುವ ಇವನು ಪಾಪಿಗಳಲ್ಲಿ ಪರಮಪಾಪಿ;. ತನ್ನ ಕೈಬೆರಳೆಣಿಕಿಗಿಂತಲೂ ಹೆಚ್ಚು ಹತ್ಯೆಗಳನ್ನು ಮಾಡಿದ್ದಾನೆ. ನಮ್ಮ ಪಾಳ್ಯದ ನಿವಾಸಿಯೊಬ್ಬ, ಶ್ವಪಚನಿಗೆ, ಗೋಹತ್ಯೆಮಾಡುವ ಇವನಿಗೆ, ತನ್ನ ಕುಲದ ಕಟ್ಟಳೆಯನ್ನು ಮುರಿದು, ಮಗಳನ್ನುಕೊಡಲು ಒಪ್ಪದೆ, ಘಟ್ಟದ ಕೆಳಗಿನ ಒಬ್ಬ ವ್ಯಾಪಾರಿಗೆ ಮದುವೆಮಾಡಿಕೊಟ್ಟ. ಸೇಡಿನಿಂದ ಇವನು ನಮ್ಮ ಎಷ್ಟೋ ಗೋವುಗಳನ್ನು ಕದ್ದೊಯ್ದ. ಒಂದು ರಾತ್ರಿ ಆ ಹುಡುಗಿಯ ತಂದೆಯನ್ನೂ ಅವಳ ಮೂವರು ಸೋದರರನ್ನೂ ಕೊಂದಿದ್ದಾನೆ. ಗೋವುಗಳನ್ನು ಬಿಡಿಸಿಕೊಳ್ಳಲು ಹೋದ ನಮ್ಮವರೆಲ್ಲರನ್ನೂ ಕತ್ತರಿಸಿಹಾಕಿದ್ದಾನೆ. ನಮ್ಮ ಹಳ್ಳಿಯ ಹನ್ನೊಂದು ಮಂದಿಯನ್ನು ಹತ್ಯೆಗೈದ ಇವನನ್ನು, ನಮ್ಮ ಮಂದಿಯನ್ನೆಲ್ಲಾ ಕೂಡಿಸಿಕೊಂಡು, ಇವನ ಬೆನ್ನುಹತ್ತಿ ಸಾಗಿ, ವನ್ಯಮೃಗವನ್ನು ಬೇಟೆಯಾಡಿದಂತೆ ಸೆರೆಹಿಡಿದಿದ್ದೇವೆ. ಈಗ ನ್ಯಾಯದ ಅಪರಾವತಾರವಾದ ನಿಮ್ಮಲ್ಲಿಗೆ ಈ ನೀಚನನ್ನು ನೆಲದಿಂದಾಚೆಗೆ ಕಳಿಸಲು ಕರೆತಂದಿದ್ದೇವೆ"

ವಿರಾಟ ತಲೆಯೆತ್ತಿ ಬಂಧಿತನನ್ನು ನೋಡಿ, ''ಇದು ನಿಜವೇ? ಏನು ? ಎಂದ

"ನೀನಾರು? ನೀನೇನು ಮಹಾರಾಜನೇ?"

"ನಾನು ವಿರಾಟ, ಮಹಾರಾಜನ ಮತ್ತು ನ್ಯಾಯದೇವತೆಯ ಸೇವಕ. ನನ್ನ ತಪ್ಪುಗಳನ್ನೂ ಸೇರಿ ಈ ದೇಶದಲ್ಲಿ ಯಾವ ಅಪರಾಧನಡೆದರೂ ಅದರಲ್ಲಿನ ಸತ್ಯಾಸತ್ಯಗಳ ವಿಚಾರಣೆ ನಡೆಸುವುದು ನನ್ನ ಕಾರ್ಯ."

ಆಪಾದಿತ ಸ್ವಲ್ಪಕಾಲ ಸುಮ್ಮನಿದ್ದು, ನಂತರ ವಿರಾಟನತ್ತ ತೀಕ್ಷ್ಣವಾಗಿ ನೋಡಿಹೇಳಿದ.

“ಅಷ್ಟು ದೂರದಲ್ಲಿನ ನಿನ್ನ ನ್ಯಾಯಪೀಠದಿಂದ ಹೇಗೆ ಇದು ಸತ್ಯ, ಅದು ಅಸತ್ಯ ಎಂದು ನಿರ್ಧರಿಸಬಲ್ಲೆ? ನಿನ್ನೆಲ್ಲ ಜ್ಞಾನವೂ, ಮಂದಿ ನಿನ್ನ ಮುಂದೆ ಬಂದು ಏನು ಹೇಳಿದರೋ ಅದನ್ನು ಆಧರಿಸಿದ್ದೇ ತಾನೇ?."

ವಿರಾಟ: ”ನಿನ್ನ ಹೇಳಿಕೆಯನ್ನೂ ಕೊಡು. ಎರಡನ್ನೂ ಸೇರಿಸಿ ನೋಡಿದಾಗ ನನಗೆ ಸತ್ಯವೇನೆಂದು ತಿಳಿಯಬಹುದು "

ಆಪಾದಿತನ ಹುಬ್ಬುಗಳು ತಾತ್ಸಾರಭಾವದಿಂದ ಮೇಲೇರಿದವು.

"ಆಪಾದನೆಯನ್ನು ನಾನು ಅಲ್ಲಗೆಳೆಯುವುದಿಲ್ಲ. ನನಗೆ ಕೋಪಬಂದಾಗ ನನ್ನ ಕೈಗಳೇನುಮಾಡುತ್ತವೆಂದು ನನಗೇ ತಿಳಿಯದಿರುವಾಗ, ನಾನೇನು ಮಾಡಿದೆನೆಂದು ನಿನಗೆ ಹೇಗೆ ತಿಳಿಯುತ್ತದೆ? ಹಣಕ್ಕೋಸ್ಕರ ಒಂದು ಹೆಣ್ಣನ್ನು ಮಾರಿಕೊಂಡವನಿಗೆ ಏನು ಮಾಡಬೇಕೋ ಮಾಡಿದೆ. ಅಡ್ಡಬಂದ ಅವನ ಮಕ್ಕಳು ಮತ್ತು ಸೇವಕರಿಗೂ ಸರಿಯಾದ್ದನ್ನೇ ಮಾಡಿದೆ. ಅವರೇ ಬಂದು ನಾನು ಮಾಡಿದ್ದು ತಪ್ಪೆಂದು ಸಾಕ್ಷ್ಯ ಹೇಳಲಿ. ಅವರಿಗೆ ನನ್ನ ಧಿಕ್ಕಾರ. ನಿನ್ನ ತೀರ್ಪಿಗೂ ನನ್ನ ಧಿಕ್ಕಾರ."

ಧರ್ಮಾತ್ಮನಾದ ನ್ಯಾಯಾಧಿಪತಿಯನ್ನೇ ಆಪಾದಿತ ನಿಂದಿಸುವುದನ್ನು ಕೇಳಿ ಅಹವಾಲನ್ನು ತಂದ ಜನರಲ್ಲಿ ಕೋಪದ ಬಿರುಗಾಳಿಯೆದ್ದಿತು. ಅವರಲ್ಲೊಬ್ಬ ಹೊಡೆಯಲು ದೊಣ್ಣೆಯನ್ನೆತ್ತಿದ. ವಿರಾಟ ತನ್ನ ಕೈಸನ್ನೆಯಿಂದ ಅವನ್ನನು ತಡೆದು, ಆಪಾದಿತನ ಪ್ರಶ್ನೆಗಳ ವಿಚಾರಕ್ಕೆ ಮರಳಿದ. ಆಪಾದನೆಯ ಪ್ರತಿಯೊಂದು ಅಂಶಕ್ಕೂ ನಿಂದಿತನಿಗೆ ಉತ್ತರಿಸಿಲು ಅವಕಾಶ ಮಾಡಿಕೊಟ್ಟ. ಆ ನಂತರವೂ ಆಪಾದಿತ ದವಡೆಗಳನ್ನು ಕಚ್ಚಿ ಬಿಗಿಹಿಡಿದು ಅವಹೇಳನದ ನಗುವಿನಿಂದ ಮತ್ತೆ ಹೇಳಿದ, ”ಬೇರೆಯವರ ಮಾತನ್ನು ಕೇಳಿ ಸತ್ಯವೇನೆಂದು ಹೇಗೆ ತಿಳಿಯುತ್ತೀಯೆ?"

ಅಪರಾಹ್ನದ ಸೂರ್ಯಕಿರಣಗಳು ವಿರಾಟನ ಶಿರೋಭಾಗದಲ್ಲಿ ಕಾಣಿಸಿಕೊಂಡವು. ವಿರಾಟ ವಿಚಾರಣೆಯನ್ನು ಮುಗಿಸಿದ. ಮೇಲೆದ್ದು, ಪೀಠದ ಸಂಪ್ರದಾಯದಂತೆ, ಮರುದಿನದಂದು ತೀರ್ಪನ್ನು ಪ್ರಕಟಿಸಲಾಗುವುದು ಎಂದು ಹೇಳಿದ. ಅಹವಾಲನ್ನು ತಂದ ಜನ ಅದಕ್ಕೊಪ್ಪದೆ ತೋಳುಗಳನ್ನೆತ್ತಿ ಪ್ರತಿಭಟಿಸಿದರು.

"ಸ್ವಾಮಿ, ನಾವೆಲ್ಲ ನಿಮ್ಮ ದರ್ಶನಕ್ಕಾಗಿ ಏಳು ದಿನಗಳು ಪ್ರಯಾಣ ಮುಗಿಸಿ ಬಂದಿದ್ದು, ಮತ್ತೆ ನಮ್ಮ ನೆಲೆಯನ್ನು ತಲುಪಲು ಏಳು ದಿನಗಳು ಬೇಕು. ಅಲ್ಲಿ ನಮ್ಮ ಆಕಳು ದಾಹದಿಂದ ಬಳಲುತ್ತ, ಉಳುಮೆಗೆ ಭೂಮಿ ಕಾಯುತ್ತಿದ್ದರೆ, ಮತ್ತೊಂದು ದಿನ ಇಲ್ಲಿ ಹೇಗೆ ನಿಂತೇವು? ತಾವು ಈಗಲೇ ನಿಮ್ಮ ತೀರ್ಪನ್ನು ಕೊಡಬೇಕು?

ಮತ್ತೆ ತನ್ನ ಆಸನದಲ್ಲಿ ಮಂಡಿಸಿದ ವಿರಾಟ ಆಳವಾದ ಚಿಂತನೆಯೊಂದರಲ್ಲಿ ಮುಳುಗಿದ. ಎಷ್ಟೋ ಭಾರವನ್ನು ಹೊತ್ತು ಕುಸಿದವನ ಹುಬ್ಬುಗಳಂತೆ ವಿರಾಟನ ಹುಬ್ಬುಗಳಿಗೆ ಮಡಿಕೆ ಮೂಡಿತು. ಕ್ಷಮೆಯನ್ನು ಕೇಳದ, ನ್ಯಾಯಪೀಠದ ನಿಯಮವನ್ನು ವಿರೋಧಿಸುವ ಇಂಥ ಸಂಧಿಗ್ಧ ಸಂದರ್ಭ ಹಿಂದೆಂದೂ ಕಂಡುಬಂದಿರಲಿಲ್ಲ. ಅವನ ಚಿಂತನೆ ಮುಂದುವರಿದು ವೇಳೆ ಕಳೆದಂತೆ ನೆರಳುಗಳು ಉದ್ದವಾಗತೊಡಗಿದವು. ಒಂದು ಕ್ಷಣ ಎದ್ದು ಅಲ್ಲಿನ ಚಿಲುಮೆಯತ್ತ ಬಂದು, ತನ್ನ ನಿರ್ಧಾರ ಮತ್ತು ನುಡಿ ಭಾವೋದ್ವೇಗ ವಿಮುಕ್ತವಾಗಿರಬೇಕೆಂದು ನೀರಿನ ತಂಪಿನಲ್ಲಿ ಮುಖವನ್ನು ಮತ್ತು ಕೈಗಳನ್ನು ತೊಳೆದುಕೊಂಡು ಆಸೀನನಾಗಿ ಹೇಳಿದ:

"ನಾನು ಕೊಡಲಿರುವ ತೀರ್ಪು ಪೂರ್ಣವಾಗಿ ನ್ಯಾಯಬದ್ಧವಾಗಿದೆಯೆಂದು ನನ್ನ ವಿಶ್ವಾಸ. ಹನ್ನೊಂದು ಮಂದಿಯ ಪ್ರಾಣವನ್ನು ಅವರ ಬೆಚ್ಚನೆಯ ದೇಹದಿಂದ ಬಿಡಿಸಿ ಪುನರ್ಜನ್ಮ ಪ್ರಪಂಚಕ್ಕೆ ಕಳಿಸಿದ ಘೋರವಾದ ಪಾಪ ಈ ನಿಂದಿತನ ಮೇಲಿದೆ. ಮನುಷ್ಯನ ಜೀವನ, ಕಾಣದಂತೆ ತಾಯಿಯ ಗರ್ಭದಲ್ಲಿ ಒಂದು ವರ್ಷ ವರ್ಧಿಸುತ್ತದೆ. ಅದಕ್ಕಾಗಿ, ಪ್ರತಿಯೊಂದು ಹತ್ಯೆಗೂ ಒಂದು ವರ್ಷದಂತೆ ಈ ನಿಂದಿತ, ಭೂಮಿಯಲ್ಲಿನ ಅಂಧಕಾರದಲ್ಲಿರಲಿ. ಹನ್ನೊಂದು ಜನರ ರಕ್ತವನ್ನು ಹೊರಸೆಳೆದ ಇವನ ಕೃತ್ಯಕ್ಕಾಗಿ, ವರ್ಷಕ್ಕೊಂದರಂತೆ, ಹನ್ನೊಂದು ಬಾರಿ, ಹನ್ನೊಂದು ಹತ್ಯೆಗಳಿಗೆ, ನೂರು ಛಡಿಯೇಟುಗಳ ಶಿಕ್ಷೆಯನ್ನು ವಿಧಿಸಲಾಗಿದೆ. ಹನ್ನೊಂದುವರ್ಷಗಳ ಕಾರಾಗಾರ ಮತ್ತು ವರ್ಷಕ್ಕೊಂದುಬಾರಿ ನೂರು ಛಡಿಯೇಟು, ಈ ಶಿಕ್ಷೆಯ

ಹೊರತು ಇವನ ಪ್ರಾಣವನ್ನು ತೆಗೆಯಲಾಗದು. ಪ್ರಾಣ ದೈವದ ಕೊಡುಗೆ. ಅದನ್ನು ತೆಗೆಯುವ ಸಾಹಸಕ್ಕೆ ಮನುಷ್ಯ ಕೈಹಾಕಬಾರದು. ಯಾರ ಆಜ್ಞಾನುಸಾರವಾಗಿಯೋ ನೀಡದೆ, ಕೇವಲ ತಪ್ಪಿಗೆ ಸರಿಯಾದ ದಂಡನೆಯೆಂದು ನೀಡಿದ ಈ ತೀರ್ಮಾನ ಧರ್ಮಸಮ್ಮತವಾಗಿದೆಯೆಂದು ಭಾವಿಸುತ್ತೇನೆ."

ವಿರಾಟನಿಂದ ತೀರ್ಪು ಹೊರಬಿದ್ದೊಡನೆ, ದೂರನ್ನು ತಂದಿದ್ದವರೆಲ್ಲಾ ನ್ಯಾಯಪೀಠಕ್ಕೆ ಗೌರವದಿಂದ ವಂದಿಸಿದರು. ಆದರೆ ಬಂಧಿತನ ಪ್ರಶ್ನಾರ್ಥಕ ನೋಟ ಮತ್ತು ಮಂಕು ಕವಿದ ಮುಖ ವಿರಾಟನ ದೃಷ್ಟಿಯನ್ನು ಸಂಧಿಸಿತು. ವಿರಾಟ ನುಡಿದ:

"ನೀನೀಗ ಮಾತನಾಡಬೇಕು, ಅಷ್ಟು ಘೋರ ಅಪರಾಧಕ್ಕೆ ಇಷ್ಟೇ ಶಿಕ್ಷೆಯೇಕೆಂದು ನಿನ್ನ ಬಗೆಗೆ ದೂರಿದವರ ಮನಸ್ಸನ್ನು ತಿಳಿಯಲು ನನಗೆ ನೆರವಾಗಬಹುದು. ಆದರೆ ನಿನ್ನ ತುಟಿಗಳು ಮುದ್ರಿತವಾಗಿವೆ. ನೀಡಿದ ನನ್ನ ತೀರ್ಪಿನಲ್ಲಿ ತಪ್ಪೇನಾದರೂ ಇದ್ದರೆ, ದೇವರಲ್ಲಿ ನನ್ನ ಬಗೆಗೆ ದೂಷಣೆಯನ್ನು ಮಾಡುವ ಬದಲು, ನಿನ್ನ ಮೌನವನ್ನು ಮುರಿದು ಹೇಳು. ನಿನ್ನ ಬಗೆಗೆ ನನ್ನ ದಯೆಯಿದೆ."

ಬಂಧಿತ ನುಡಿದ: "ನಿನ್ನಿಂದ ನಾನು ಯಾವ ದಯೆಯನ್ನೂ ನಿರೀಕ್ಷಿಸಿಲ್ಲ. ನಿರಾಳವಾಗಿ ಉಸಿರಾಡುವ ನನ್ನ ಜೀವನವನ್ನೇ ನೀನು ಕಸಿದುಕೊಂಡಮೇಲೆ ಯಾವ ದಯೆಯನ್ನು ನೀನು ತೋರಿಸಲು ಸಾಧ್ಯ?"

ವಿರಾಟ: "ನಾನೇನೂ ನಿನ್ನ ಜೀವವನ್ನು ತೆಗೆಯುತ್ತಿಲ್ಲವಲ್ಲ."

ಬಂಧಿತ: "ಇಲ್ಲ, ನೀನು ನನ್ನ ಜೀವನವನ್ನೇ ತೆಗೆದುಕೊಂಡೆ. ಅದು, ಈ ದೂರು ನೀಡಿರುವವರು ಕ್ರೂರಿಗಳೆಂದು ಕರೆಯುವ, ನನ್ನ ಕುಲದೊಡೆಯರ ಕೃತ್ಯಗಳಿಗಿಂತಲೂ ಪರಮ ಕ್ರೂರವಾದ ರೀತಿಯಲ್ಲಿ ನನ್ನ ಜೀವನವನ್ನೇ ನೀನು ಕಸಿದುಕೊಂಡೆ. ನನ್ನನ್ನು ಕೊಲ್ಲಬಾರದೇಕೆ? ಆ ಪ್ರತಿವ್ಯಕ್ತಿಯನ್ನೂ ನಾನು ಹತ್ಯೆಮಾಡಿದೆ, ಹೌದು. ಆದರೆ ನೀನು, ನನ್ನನ್ನು ಹೆಣದಹಾಗೆ ಕೊಳೆಯಲು ಭೂಮಿಯ ಅಂಧಕಾರದಲ್ಲಿ ವರ್ಷಗಳ ಲೆಕ್ಕದಲ್ಲಿ ಇರಿಸುತ್ತಿದ್ದೀಯೆ. ಏಕೆ? ರಕ್ತಪಾತಕ್ಕೆ ನಿನ್ನ ಎದೆ ಹೆದರುತ್ತಿದೆ, ನಿನ್ನ ಕರುಳು ನೀರಿಗಿಂತಲೂ ಬಲಹೀನವಾಗಿದೆ. ಮನಸ್ಸಿಗೆ

ಬಂದಂತೆ ವ್ಯವಹರಿಸುವುದೇ ನಿನ್ನ ನ್ಯಾಯ. ನಿನ್ನ ತೀರ್ಪು ನನ್ನ ಬಲಿದಾನ. ನಾನು ಹಂತಕನಾದರೆ ನನ್ನನು ಹತ್ಯೆ ಮಾಡು."

‘‘ನಾನು ಒಂದು ಪ್ರಮಾಣದ ಶಿಕ್ಷೆಯನ್ನಷ್ಟೇ....."

"ಯಾವ ಪ್ರಮಾಣ? ಯಾವ ಅಳತೆ? ಓ ನ್ಯಾಯಾಧಿಪತಿ, ನೀನು ಅಳೆಯುವುದರಿಂದ ನಿರ್ಧರಿತವಾದ ಪ್ರಮಾಣವೇ? ಛಡಿಯೇಟು ಏನೆಂದು ತಿಳಿಯಲು ನೀನು ಯಾವಾಗ ಛಡಿ ಏಟನ್ನು ತಿಂದಿದ್ದೆ? ಯಾವ ಆಧಾರದಮೇಲೆ ನಿನ್ನ ಬೆರಳುಗಳಮೇಲೆ ಎಣಿಸಿಕೊಂಡು ಇಷ್ಟು ವರ್ಷಗಳ ಶಿಕ್ಷೆಯನ್ನು ವಿಧಿಸಿದೆ? ಒಂದು ವರ್ಷ ನೆಲದ ಮೇಲೆ ಬೆಳಕಿನಲ್ಲಿ ಜೀವಿಸುವುದೂ, ಭೂಮಿಯ ಅಂಧಕಾರದಲ್ಲಿ ಒಂದು ವರ್ಷ ಇರುವುದೂ ಒಂದೇ ಎಂದು ಹೇಗೆ ಭಾವಿಸಿದೆ? ನೀನೆಂದಾದರೂ ಕಾರಾಗೃಹದಲ್ಲಿದ್ದು ದಿನಗಳ ಲೆಕ್ಕದಲ್ಲಿ ವಸಂತಗಳನ್ನು ಎಣಿಕೆಮಾಡಿರುವೆಯಾ? ನೀನೊಬ್ಬ ಅಜ್ಞಾನಿಯೇ ಹೊರತು ನ್ಯಾಯವಂತನಲ್ಲ. ಛಡಿಯೇಟು ಏನೆಂದು ತಿಳಿಯುವುದು ಅದನ್ನು ಹೊಡೆತ ತಿಂದವನಿಗೇ ಹೊರತು ವಿಧಿಸಿವನಿಗಲ್ಲ. ಭರಿಸಿದವನಿಗಷ್ಟೇ ಕಷ್ಟ, ನೋವುಗಳ ಯಾತನೆ ತಿಳಿದೀತು. ಅನುಭವಿಸಿದವನಿಗೇ ಶಿಕ್ಷೆಯ ಮಾನ, –ಪ್ರಮಾಣಗಳ ಅರಿವಾದೀತು. ಧರ್ಮಜ್ಞನೆಂಬ ಹೆಮ್ಮೆಯಿಂದ ನೀನು ತೀರ್ಪನ್ನಿತ್ತು ಅಪರಾಧಿಗಳಿಗೆ ಶಿಕ್ಷೆಯನ್ನು ಕೊಡುತ್ತಿರುವೆ. ಆ ಎಲ್ಲ ಅಪರಾಧಿಗಳಿಗಿಂತಲೂ ನೀನು ಮಹಾಪರಾಧಿ. ನಾನೇನೋ ಕೋಪಾವೇಶಷಗಳ ಭರದಲ್ಲಿ ಪಾಪವನ್ನೆಸಗಿದೆ. ಆದರೆ ನೀನು ಮಾಡಿದ್ದೇನು? ನನ್ನ ಜೀವನವನ್ನೇ ನಾಶಮಾಡಿದೆ. ನಿನ್ನ ಕೈಗಳು ಅಳೆಯದ ಶಿಕ್ಷೆಯ ನೋವನ್ನು, ಆ ಭಾರವನ್ನು ಎಂದೂ ಭರಿಸದ ನೀನು, ಶಿಕ್ಷೆಯ ವಿಧಾನ ಮತ್ತು ಅವಧಿಯನ್ನು ನಿರ್ಧರಿಸಿರುವೆ. ಛೀ, ಆ ಪೀಠದಿಂದ ಕೆಳಗಿಳಿ, ನೀನೊಬ್ಬ ಮೂರ್ಖ. ಅಸಂಬದ್ಧವಾಗಿ ಪ್ರಮಾಣಗಳನ್ನು ನಿರ್ಣಯಿಸುವ ನಿನ್ನಂಥವರಿಗೆ ನನ್ನ ಧಿಕ್ಕಾರವಿರಲಿ ! ನ್ಯಾಯವನ್ನು ತಾನು ತಿಳಿದಿರುವೆನೆಂದು ನಂಬಿರುವ ಅಜ್ಞಾನಿಗೆ ಧಿಕ್ಕಾರ. ನ್ಯಾಯಾಧೀಶನ ಪೀಠದಿಂದ ಮೊದಲು ಕೆಳಕ್ಕಿಳಿ. ಓ ನ್ಯಾಯಾಧಿಪತಿಯ ವೇಷದ ಅವಿವೇಕಿ, ನಿನ್ನ ಶಬ್ದಗಳ ಸಾವಿನಿಂದ ಜೀವಂತರನ್ನು ದಂಡಿಸಬೇಡ."

ವಿಷಪೂರಿತ ದೂಷಣೆಗಳನ್ನು ಮಾಡಿ ಕ್ರೋಧದಿಂದ ನಿಸ್ತೇಜನಾದ ಬಂಧಿತನ ಮೇಲೆ ಕೋಪಗೊಂಡು ಮೇಲೇರಿಬಂದವರನ್ನು ವಿರಾಟ ತಡೆದು, ನಿಂದಿತನಿಂದ ದೃಷ್ಟಿಮರಳಿಸಿ ನುಡಿದ:

"ಕೊಟ್ಟ ತೀರ್ಪನ್ನು ಬದಲಿಸುವ ಅಧಿಕಾರ ನನಗಿಲ್ಲ. ನನ್ನ ತೀರ್ಪು ನ್ಯಾಯಬದ್ಧವಾಗಿದೆಯೆಂದು ಭಾವಿಸುತ್ತೇನೆ.'' ಎಂದು ಹೇಳಿ ಪೀಠದಿಂದ ಕೆಳಗಿಳಿಯಲು ಅನುವಾದ. ಬಿಗಿದ ಸರಪಣಿಗಳನ್ನು ಮುರಿದು ತೊಲಗಿಸುವಂತೆ ಮಿಡುಕುತ್ತಿದ್ದ ಬಂಧಿತನತ್ತ ನೋಡಿದ. ಅಲ್ಲಿ ಕಂಡದ್ದು? ಸದೃಢವಾಗಿ ಕೋಪದ ಕಿಡಿಗಳನ್ನುಗುಳುವ ಕಣ್ಣುಗಳು. ಬೆಚ್ಚಿಬೀಳಿಸುವಂತೆ, ಆಶ್ಚರ್ಯಕರವಾಗಿ, ಆ ಕಣ್ಣುಗಳು ಗತಿಸಿದ ತನ್ನ ಅಣ್ಣನ ಕಣ್ಣುಗಳ ತದ್ರೂಪವೇ ಆಗಿತ್ತು. ಅದೇ ಕಣ್ಣುಗಳು. ತನ್ನ ಕೈಯಾರೆ ಕೊಂದ ಸೋದರನವು, ದುರಾಶಾಪರನಾಗಿ ರಾಜ್ಯಾಪಹಾರಕ್ಕೆ ಯತ್ನಿಸಿದ ದ್ರೋಹಿಯ ಡೇರೆಗೆ ರಾತ್ರಿ ನುಗ್ಗಿ, ತಾನು ಕೊಂದವನ ಕಣ್ಣುಗಳು.

ವಿರಾಟ, ಮರುದಿನ ಮುಂಜಾನೆ ದೇಗುಲದ ಪವಿತ್ರ ಚಿಲುಮೆಯ ಬಳಿ ಸಂಧ್ಯಾವಿಧಿಗಳನ್ನು ಪೂರೈಸಿ, ಪೂರ್ವದಿಗ್ಭಾಗಕ್ಕೆ ಪ್ರಾರ್ಥನೆ ಸಲ್ಲಿಸಿದ. ಆ ಪೀತಾಂಬರಧಾರಿ ತನ್ನ ಮನೆಗೆ ತೆರಳಿ ಗೃಹಪರಿವಾರವರನ್ನು ಸಂಧಿಸಿ ಕುಶಲಪ್ರಶ್ನೆಯನ್ನು ಮಾಡಿದ. ಸಾಮಾನ್ಯವಾಗಿ, ಪ್ರತರ್ವಿಧಿಗಳನ್ನು ಪೂರೈಸಿ ನೇರವಾಗಿ ಅರಮನೆಗೆ ತೆರಳಿ ದಿನದ ಯಾವ ವೇಳೆಯಲ್ಲೋ ಅಥವಾ ರಾತ್ರಿಯೋ ಮರಳುತ್ತಿದ್ದ ವಿರಾಟನ ಇಂದಿನ ಈ ವಿಚಿತ್ರ ವರ್ತನೆಯನ್ನು ಕಂಡು ಅವರು ಬೆರಗಾದರೂ ಮರುಮಾತನ್ನಾಡಲಿಲ್ಲ. ನಂತರ ರಾಜಗೃಹಕ್ಕೆ ತೆರಳಿ ಮಹಾ ರಾಜನಿಗೆ ವಂದಿಸಿ, ತನ್ನ ಮನವಿಯೊಂದಿದೆ ಎಂಬುದರ ಸಂಕೇತವಾಗಿ, ಅವನ ವಸ್ತ್ರದ ಅಂಚನ್ನು ಚುಂಬಿಸಿದ.

ರಾಜ ದಯಾದೃಷ್ಟಿಯಿಂದ ಹೇಳಿದ ''ನಿನ್ನ ಅರಿಕೆಯೊಂದು ನನ್ನ ವಸ್ತ್ರವನ್ನು ತಾಕಿದೆ., ಅದೇನೆಂದು ನೀನು ಹೇಳುವ ಮೊದಲೇ ಅಂಗೀಕರಿಸಿದ್ದೇನೆ" – ವಿರಾಟ ಕೈಮುಗಿದು ತಲೆಬಾಗಿ ನಿಂತು ಹೇಳಿದ.

"ತಾವು ನನ್ನನು ನ್ಯಾಯಾಧೀಶರಿಗೆಲ್ಲಾ ಪ್ರಮುಖನನ್ನಾಗಿಸಿದಿರಿ. ಕಳೆದ ಆರು ವರ್ಷಗಳಿಂದ ನಿಮ್ಮ ಹೆಸರಿನಲ್ಲಿ ತೀರ್ಪುಗಳನ್ನು ನೀಡುತ್ತಾ ಬಂದಿದ್ದೇನೆ. ನನ್ನ ತೀರ್ಪುಗಳೆಷ್ಟು ನ್ಯಾಯಬದ್ಧವಾಗಿದೆಯೋ ತಿಳಿಯದು. ನ್ಯಾಯಪೀಠದಿಂದ ನನ್ನನ್ನು ದೂರಮಾಡಿ, ನನಗೊಂದು ತಿಂಗಳು ಪ್ರಶಾಂತವಾಗಿರಲು ಬಿಡುವನ್ನು ದಯಪಾಲಿಸಿದರೆ, ಸತ್ಯದ ಹಾದಿಯನ್ನು

ಕಂಡುಕೊಂಡೇನು. ನನ್ನಿಂದಾಗುವ ಕಾರ್ಯಗಳಲ್ಲಿ ಸ್ವಲ್ಪವೂ ಅನ್ಯಾಯವಿರದಂತೆ, ನಿಷ್ಪಾಪಿಯಾಗಿ ಬದುಕಬೇಕೆಂಬುದು ನನ್ನ ಹಂಬಲ"

ರಾಜನಿಗೆ ದಿಗ್ಭ್ರಮೆಯಾಯಿತು.

"ಇಂದು ಹುಣ್ಣಿಮೆ. ಮತ್ತೊಂದು ಪೂರ್ಣಚಂದ್ರದರ್ಶನದವರೆಗೆ ನನ್ನ ರಾಜ್ಯದಲ್ಲಿ ನ್ಯಾಯಕ್ಕೆ ಬಡತನ ! ಹಾಗೇ ನಡೆಯಲಿ. ನೀನು ಸತ್ಯಾನ್ವೇಷಣೆಗೆ ಯಾವ ಮಾರ್ಗವನ್ನು ಅನುಸರಿಸುತ್ತೀಯೆ ಎಂಬುದನ್ನು ನಾನು ಕೇಳುವುದಿಲ್ಲ. ಅದು ನಿನ್ನನ್ನು ಸತ್ಯದೆಡೆಗೆ ಕೊಂಡೊಯ್ಯಲಿ"

ಕೃತಜ್ಞತೆಯ ಸಂಕೇತವಾಗಿ ಸಿಂಹಾಸನದ ಪಾದಕ್ಕೆ ವಂದಿಸಿ, ರಾಜನಿಗೆ ಮತ್ತೊಮ್ಮೆ ನಮಸ್ಕರಿಸಿ ವಿರಾಟ ಮನೆಗೆ ಮರಳಿದ.

ತನ್ನ ಪತ್ನಿ ಮತ್ತು ಮಕ್ಕಳನ್ನು ಕರೆಸಿ ನುಡಿದ, ”ಇನ್ನೊಂದು ತಿಂಗಳು ನೀವು ನನ್ನನು ಕಾಣಲಾಗದು. ಪ್ರಶ್ನೆಗಳನ್ನೇನೂ ಕೇಳದೆ ನನ್ನನ್ನು ಬೀಳ್ಕೊಡಿ. ನೀವೆಲ್ಲರೂ ನಿಮ್ಮ ಕೋಣೆಗಳಿಗೆ ತೆರಳಿ ಬಾಗಿಲನ್ನು ಮುಚ್ಚಿ ಒಳಗಿದ್ದುಬಿಡಿ. ನಾನು ಯಾವಾಗ ಎಲ್ಲಿಗೆ ಹೋಗುತ್ತೇನೆ ಎಂದು ನಿಮಗೆ ತಿಳಿಯದಿರಲಿ. ತಿಂಗಳು ಕಳೆಯುವುದರಲ್ಲಿ ನನ್ನ ಬಗೆಗೆ ಎಲ್ಲೂ ವಿಚಾರಿಸಬೇಡಿ."

ಮರುಮಾತಾಡದೆ, ಅವರೆಲ್ಲಾ ಆದೇಶವನ್ನು ಪಾಲಿಸಿದರು.

ವಿರಾಟ ಕಪ್ಪುಬಣ್ಣದ ವಸ್ತ್ರಗಳನ್ನು ಧರಿಸಿ, ತನ್ನ ದೈವದ ಮೂರ್ತಿಗೆ ವಂದಿಸಿ, ಭೂರ್ಜ್ವಪತ್ರಗಳಮೇಲೊಂದು ನಿಡಿದಾದ ಒಕ್ಕಣೆಯನ್ನು ಲಿಖಿಸಿ, ಪತ್ರಗಳನ್ನು ಸುತ್ತಿಟ್ಟುಕೊಂಡು, ಕತ್ತಲು ಮುಸುಕಿದವೇಳೆಯಲ್ಲಿ, ತನ್ನ ನಿಶ್ಶಬ್ದವಾದ ಗೃಹವನ್ನು ಬಿಟ್ಟು ಪಟ್ಟಣದಂಚಿನ ಹೆಬ್ಬಂಡೆಗಳ ಬಳಿಯ ಗಣಿಪ್ರದೇಶದಲ್ಲಿರುವ ಕಾರಾಗೃಹಗಳತ್ತ ಹೊರಟ. ನಿದ್ರಿಸುತ್ತಿದ್ದ ಕಾರಾಗೃಹ ರಕ್ಷಕ ಭಟ ಮೇಲೇಳುವವರೆಗೆ ಕಾರಾಗೃಹದ ಮುಖ್ಯದ್ವಾರವನ್ನು ತಟ್ಟಿದ.

"ಯಾರು?"

"ನಾನು ವಿರಾಟ, ಮಹಾನ್ಯಾಯಾಧೀಶ. ನಿನ್ನೆ ಇಲ್ಲಿಗೆ ಕರೆತಂದ ಖೈದಿಯೊಬ್ಬನನ್ನು ನೋಡಲು ಬಂದೆ."

"ಧಣಿ, ಅವನು ನೆಲಮಾಳಿಗೆಯ ಕಡುಗತ್ತಲಿನ ಸೆರೆಮನೆಯಲ್ಲಿದ್ದಾನೆ. ಅಲ್ಲಿಗೆ ಹೋಗೋಣವೆ?"

"ಆ ಸ್ಥಳ ನನಗೆ ಗೊತ್ತು. ಅದರ ಕೀಲಿಯನ್ನು ಕೊಟ್ಟು ನೀನು ಹೋಗು. ನಾಳೆ ಬೆಳಿಗ್ಗೆ ನಿನ್ನ ಕೋಣೆಯಾಚೆ ಈ ಬೀಗದಕೈ ಇಡಲ್ಪಟ್ಟಿರುತ್ತದೆ. ಈ ರಾತ್ರಿ ನೀನು ನನ್ನನ್ನು ನೋಡಿದ್ದು ಯಾರಿಗೂ ತಿಳಿಯದಿರಲಿ."

ರಕ್ಷಕ ಭಟ ಬೀಗದಕೈಯನ್ನು ಹುಡುಕಿ ತಂದು ಜೊತೆಗೊಂದು ಪಂಜನ್ನೂ ಹಚ್ಚಿಕೊಟ್ಟ. ವಿರಾಟನ ಸನ್ನೆಯಂತೆ ಅವನು ತೆರಳಿ ತನ್ನ ಚಾಪೆಯಮೇಲೆ ಮೈಚೆಲ್ಲಿದ. ವಿರಾಟ, ಕಮಾನಿನಾಕಾರದ ಕಂಚಿನ ದ್ವಾರವನ್ನು ತೆಗೆದು ಬಂಡೆಗಳೊಳಗಿನ ಗುಹೆಯನ್ನು ಪ್ರವೇಶಿಸಿ, ಕಾರಾಗೃಹದಡಿಗೆ ಇಳಿದ. ಶತಮಾನದ ಹಿಂದೆಯೇ ರಾಜಪುಟಾಣದವರು ಈ ಹೆಬ್ಬಂಡೆಯೊಳಗನ್ನು ಖೈದಿಗಳ ಸೆರೆಗಾಗಿ ಉಪಯೋಗಿಸುತ್ತಿದ್ದರು. ಪ್ರತಿದಿನವೂ ಖೈದಿಗಳು ಅ ಶೈತ್ಯಶಿಲೆಯನ್ನು ಆಳಕ್ಕೆ ಕೆತ್ತಿ, ಕೊರೆದು, ಖೈದಿಗಳ ಕೋಣೆಗಳ ನಿರ್ಮಾಣ ನಡೆಸಬೇಕಿತ್ತು (ನಮ್ಮ ಅಜಂತಾ ಎಲ್ಲೋರಾ ಗುಹಾಂತರ್ದೇವಾಲಯಗಳ ರಚನೆಯಂತೆ).

ಕತ್ತಲಾಳಕ್ಕಿಳಿಯುವ ಮುನ್ನ ಕೊನೆಯಬಾರಿ ಇತ್ತ ಶಿಲಾದ್ವಾರದ ಕಮಾನಿನಂಚಿನಿಂದ ಕಾಣುವ ಆಕಾಶಭಾಗದಲ್ಲಿ ಹೊಳೆವ ನಕ್ಷತ್ರಗಳನ್ನು ನೋಡಿದ. ದ್ವಾರದ ಬಾಗಿಲನ್ನು ಮುಚ್ಚಿದ. ತಣ್ಪಿನ ಕಗ್ಗತ್ತಲು ಮೇಲೆದ್ದು ಅವನ ಮೈಮುಚ್ಚಿತು. ಹಲ್ಲೆಗೊಳಗಾದ ಮೃಗದಂತೆ ಅವನು ಹಿಡಿದ ಪಂಜಿನ ಬೆಳಕು ಕತ್ತಲನ್ನು ಸೀಳಿ ಮುಂದೋಡುತ್ತಿತ್ತು. ಹೊರಗಿನ ಮರಗಳ ಮರ್ಮರಧ್ವನಿ, ಕಪಿಗಳ ಚಟಪಟಶಬ್ದ ಇನ್ನೂ ಕೇಳಿಸುತ್ತಿತ್ತು. ಇಳಿಯುತ್ತಿದ್ದ ಮೆಟ್ಟಿಲಿನ ಒಂದಾವರ್ತಮುಗಿದಂತೆ ಹೊರಗಿನ ಮರ್ಮರ ಎಲ್ಲೋ ದೂರದಿಂದ ಬಂದಂತೆ ಕೇಳಿಸುತ್ತಿತ್ತು. ಮತ್ತೂ ಕೆಳಗಿಳಿದ ಮೇಲೆ ನಿಶ್ಚಲವಾದ ತಣ್ಣನೆಯ ಸಮುದ್ರದಾಳದ ಮಹಾನೀರವ. ಅಲ್ಲಿನ ಕಲ್ಲುಗಳು ಉಸಿರಾಡುತ್ತಿದ್ದುದು, ಮಣ್ಣಿನವಾಸನೆಯೇ ಇಲ್ಲದ ಬರಿಯ ತಂಪನ್ನು ಮಾತ್ರ. ಮತ್ತೂ ಕೆಳಕ್ಕಿಳಿದಂತೆ ಅವನಿಡುತ್ತಿದ್ದ ಹೆಜ್ಜೆಗಳ ಸಪ್ಪಳ ಆ ಸರ್ವನೀರವದಲ್ಲಿ ಕರ್ಕಶವಾಗಿ ಮಾರ್ದನಿಗೊಳ್ಳುತ್ತಿದ್ದವು.

ಆ ಶಿಲಾಮಾನವನನಿದ್ದ ಸೆರೆಮನೆಯ ಕೋಣೆಯಿದ್ದದ್ದು ನೆಲದಹಂತದಿಂದ ಮೆಟ್ಟಿಲುಗಳ ಐದು ವರಸೆಗಳ ಕೆಳಕ್ಕೆ. ವಿರಾಟ ಒಳಹೊಕ್ಕು ಪಂಜನ್ನು ಹತ್ತಿರದಲ್ಲಿ ಹಿಡಿದ. ಸ್ವಲ್ಪಹೊತ್ತು ಆ ಕಪ್ಪನೆಯ ಮುದ್ದೆ ಕದಲಲಿಲ್ಲ. ನಂತರ ಸರಪಣಿಗಳ ಮಿಸುಕಾಟದ ಖಣಿಖಿಣಿ ಶಬ್ದ ಕೇಳಿಸಿತು.

ಆ ಆಕಾರದ ಮುಂದೆ ಬಗ್ಗಿ ವಿರಾಟ ನುಡಿದ: ''ನಾನಾರು ಗೊತ್ತೆ?"

"ನೀನು ನನಗೆ ಗೊತ್ತು". ''ಅವರಿಂದಾಗಿ ನನ್ನ ಭವಿಷ್ಯಕ್ಕೆ ಅಧಿಕಾರಿಯಾದವನು". ''ನೀನದನ್ನು ನಿನ್ನ ಕಾಲಡಿ ಹೊಸಕಿಹಾಕಿದೆ."

"ನಾನು ಅಧಿಕಾರಿಯಲ್ಲ, ರಾಜನ ಸೇವಕ. ನ್ಯಾಯವನ್ನು ಸಲ್ಲಿಸಲು ಬಂದಿದ್ದೇನೆ"...''

ಖೈದಿ, ಚಕಿತನಾಗಿ ನೇರನೋಟದಿಂದ ಮಹಾನ್ಯಾಯಾಧೀಶನತ್ತ ನೋಡಿ, ನುಡಿದ, ''ನನ್ನಿಂದೇನಾಗಬೇಕು?"..

ವಿರಾಟ ಸ್ವಲ್ಪಕಾಲ ಮೌನವಾಗಿದ್ದು, ನುಡಿದ, ''ನನ್ನ ತೀರ್ಪಿನಿಂದ ನಿನ್ನನ್ನು ನೋಯಿಸಿದೆ. ಅದಕ್ಕೆ ಸರಿಯಾಗಿಯೇ ನಿನ್ನ ನುಡಿಗಳಿಂದ ನನ್ನನ್ನು ನೀನು ಚುಚ್ಚಿ ನಿಂದಿಸಿರುವೆ. ನನ್ನ ತೀರ್ಪು ಎಷ್ಟು ನ್ಯಾಯಬದ್ಧವೋ ತಿಳಿಯದು. ಆದರೆ ನೀನು ಹೇಳಿದುದರಲ್ಲಿ ನಿಜವಿದೆ ಎನಿಸಿತು. ತನ್ನ ಅನುಭವಕ್ಕೆ ಸೇರದ ಪ್ರಮಾಣದಿಂದಲೇ ಮತ್ತೊಬ್ಬರನ್ನು ಅಳೆದು ಅವರ ಬಗೆಗೆ ಸತ್ಯನಿರ್ಣಯಮಾಡುವುದು ಸರಿಯಲ್ಲ. ಆ ಬಗೆಗೆ ನನಗೆ ತಿಳಿವಿರಲಿಲ್ಲ. ಸಂತೋಷದಿಂದ ಅದನ್ನು ಕಲಿಯುತ್ತೇನೆ. ಇದೆಂಥ ಶಿಕ್ಷೆಯೆಂದು ನನಗೆ ನಾನೇ ಅನುಭವಿಸಿ ತಿಳಿಯದೆ ಈ ಕರಾಳ ಶಿಲಾಗುಹೆಗಳಿಗೆ ನೂರಾರು ಮಂದಿ ಅಪರಾಧಿಗಳನ್ನು ಕಳಿಸಿದ್ದೇನೆ. ಈಗ ಅದೇನೆಂದು ಅನುಭವಿಸಿ ತಿಳಿದು, ನನ್ನ ನ್ಯಾಯಬದ್ಧತೆ ಪರಿಪೂರ್ಣರೂಪವನ್ನು ಪಡೆದು, ನನ್ನ ಕೊನೆಯುಸಿರನ್ನು ಯಾವ ಪಾಪ ಕಲ್ಮಷವೂ ಇಲ್ಲದಂತೆ ಬಿಟ್ಟು ಜನ್ಮವನ್ನು ಮುಗಿಸಬೇಕಿದೆ."

ಖೈದಿ ಏನೊಂದನ್ನೂ ನುಡಿಯದೆ ನಿಶ್ಚಲನಾಗಿ ನಿಂತ. ಅವನನ್ನು ಸುತ್ತಿದ್ದ ಸರಪಣಿಗಳ ಗಲಗಲಗಳಲ್ಲದೆ ಮತ್ತೇನೂ ಅಲ್ಲಿ ಕೇಳಿಸುತ್ತಿರಲಿಲ್ಲ. ವಿರಾಟ ಮುಂದುವರೆಸಿ ನುಡಿದ:

"ನಿನಗೆ ವಿಧಿಸಿದ ದಂಡನೆಯನ್ನು ಅನುಭವಿಸಿ ತಿಳಿಯಬೇಕು. ಛಡಿಯೇಟಿನ ಶಿಕ್ಷೆಯ ಕಡಿತವನ್ನು ನನ್ನ ದೇಹದ ಅನುಭವದಿಂದಲೇ ತಿಳಿದುಕೊಳ್ಳಬೇಕು. ಕಠಿನ ಕಾರಾಗೃಹವಾಸದ ಶಿಕ್ಷೆಯೇನೆಂದು ಸ್ವಾಂತಕ್ಕೆ ಅರಿವಾಗಬೇಕು. ಒಂದು ತಿಂಗಳು ನಿನ್ನ ಸ್ಥಾನದಲ್ಲಿ ನಾನಿರುತ್ತೇನೆ. ನನ್ನ ತೀರ್ಪಿನ ದೋಷಕ್ಕೆ ಸರಿಯಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಿದೆ. ನಂತರ ನನ್ನ ತೀರ್ಪಿನ ಪೂರ್ವಾಪರಗಳನ್ನು ಸಮಗ್ರವಾಗಿ ತಿಳಿದು, ನಿರ್ದೋಷಯುಕ್ತವಾಗಿ ನ್ಯಾಯಪೀಠದಿಂದ ಮತ್ತೆ

ತೀರ್ಪನ್ನು ನೀಡುತ್ತೇನೆ. ಈ ಮಧ್ಯೆ ನಿನಗೆ ಸ್ವೇಚ್ಛೆ ಸಂದಿದೆ. ನಿನಗೆ ನಾನು ಕೊಡುವ ಈ ಕೀಲಿಯಿಂದ, ನೀನು ಬೆಳಕಿನ ಪ್ರಪಂಚತೆರೆದುಕೊಳ್ಳುವ ಕಾರಾಗೃಹ ಮುಖ್ಯದ್ವಾರದ ಬೀಗವನ್ನು ತೆಗೆಯಬಹುದು. ಒಂದು ತಿಂಗಳು ಸ್ವೇಚ್ಛೆಯಿಂದಿದ್ದು, ಅವಧಿ ಮುಗಿಯುವ ಮುನ್ನ ಮರಳಿ ಬರುವೆನೆಂದು ವಾಗ್ದಾನ ಮಾಡು. ಆಗ ಈ ಪಾತಾಳದ ಕಗ್ಗತ್ತಲಿನಿಂದ ಬೆಳಕು ನನ್ನ ಮನಸ್ಸನ್ನು ತುಂಬುತ್ತದೆ.''

ಖೈದಿ ಕಡೆದ ಶಿಲ್ಪದಂತೆ ಅಲುಗಾಡದೆ ನಿಂತಿದ್ದ. ಸರಪಣಿಗಳ ಗಲಗಲ ಶಬ್ದವೂ ಕೇಳಿಸುತ್ತಿರಲಿಲ್ಲ.

"ಯಾರನ್ನೂ ಬಿಡದ ನಿರ್ದಯಿಯಾದ ಪ್ರತೀಕಾರದೇವತೆಯ ಮೇಲೆ ಆಣೆಯಿಟ್ಟು, ಇಡೀ ಒಂದು ತಿಂಗಳಿನ ಅವಧಿಯಲ್ಲಿ ಏನನ್ನೂ ಹೇಳದೆ ನೀನು ಮೌನವಾಗಿರಬೇಕು. ಕೀಲಿಯನ್ನು ಮತ್ತು ನನ್ನ ವಸ್ತ್ರಗಳನ್ನು ನಿನಗೆ ಕೊಡುತ್ತೇನೆ. ಕೀಲಿಯನ್ನು ರಕ್ಷಕಭಟನ ವಿಶ್ರಾಂತಿಗೃಹದ ಬಾಗಿಲಿನ ಹೊರಗಿಟ್ಟು ನೀನು ಸ್ವೇಚ್ಛೆಯಿಂದ ಹೊರ ಹೋಗಬಹುದು. ವಾಗ್ದಾನ ಮಾಡಿದಂತೆ, ಒಂದು ತಿಂಗಳ ಅವಧಿ ಮುಗಿದಕೂಡಲೇ ಈ ಪತ್ರವನ್ನು ಮಹಾರಾಜರಿಗೆ ಕೊಡು. ಆಗ ಸೆರಮನೆಯಿಂದ ನಾನು ಹೊರಗೆ ಬಂದು, ನ್ಯಾಯಪೀಠದಿಂದ ಧರ್ಮಬದ್ಧವಾದ ತೀರ್ಪನ್ನು ಕೊಡುತ್ತೇನೆ. ನಿನ್ನ ಇಷ್ಟದೈವದ ಸಾಕ್ಷಿಯಾಗಿ ಪ್ರಮಾಣಮಾಡಿ ಈ ಒಪ್ಪಂದಕ್ಕೆ ಬದ್ಧನಾಗುವೆಯಾ?"

"ನನ್ನಾಣೆ", ಎಂಬ ಗದ್ಗದಿತ ಧ್ವನಿಯ ಉತ್ತರ ನೆಲದಾಳದಿಂದ ಬಂದಂತೆ ಕೇಳಿಸಿತು.

ವಿರಾಟ, ಬಂಧಿತನ ಸರಪಣಿಗಳನ್ನು ಸಡಿಲಗೊಳಿಸಿ ತನ್ನ ಬಟ್ಟೆಯನ್ನೂ ಕಳಚಿದ.

"ಇದನ್ನು ತೊಡು,'' ಎಂದು ಹೇಳಿ, ''ನಿನ್ನ ಬಟ್ಟೆಯನ್ನು ನನಗೆ ಕೊಡು,. ನಿನ್ನ ಮುಖಕಾಣದಂತೆ ಮುಸುಗುಹಾಕಿಕೋ. ರಕ್ಷಕಭಟ ನಾನೇ ಹೊರಗೆ ಹೋಗುತ್ತಿದ್ದೇನೆಂದು ತಿಳಿಯಲಿ. ನಾನಾರೆಂದು ತಿಳಿಯದಂತೆ ನನ್ನ ತಲೆಗೂದಲು ಮತ್ತು ಗಡ್ಡವನ್ನು ಕತ್ತರಿಸು.'' ಎಂದ.

ಖೈದಿಗೆ ಅದು ಅಸಮ್ಮತವಾದರೂ, ನಡುಗುವ ಕೈಗಳಿಂದ ವಿರಾಟನ ಆದೇಶದಂತೆಯೇ ಮಾಡಿದ. ನಂತರ ದೀರ್ಘಕಾಲ ಮೌನವಾಗಿದ್ದ. ನೇರವಾಗಿ ನೆಲದಮೇಲೆ ಬಿದ್ದು ಭಾವಪರವಶನಾಗಿ ಅಳತೊಡಗಿದ.

"ಪ್ರಭು, ನನ್ನ ಸ್ಥಾನದಲ್ಲಿ ನೀವು ದುರವಸ್ಥೆಗೆ ಒಳಗಾಗುವುದನ್ನು ನಾನು ಸಹಿಸಲಾರೆ. ನಾನು ಹಂತಕ. ನನ್ನ ಕೈಗಳು ರಕ್ತಸಿಕ್ತ. ನಿಮ್ಮ ತೀರ್ಪು ನ್ಯಾಯಸಮ್ಮತವಾಗಿಯೇ ಇದೆ."

"ತೀರ್ಪಿನ ನ್ಯಾಯ ಬದ್ಧತೆಯನ್ನು ನೀನಾಗಲಿ ನಾನಾಗಲಿ ತೀರ್ಮಾನಿಸಲಾಗದು. ಕೆಲವು ದಿನಗಳಲ್ಲೇ ನನ್ನ ಮನಸ್ಸಿನಲ್ಲಿ ಬೆಳಕು ಒಡೆದು ಮೂಡುತ್ತದೆ. ನೀನು ವಾಗ್ದಾನ ಮಾಡಿದಂತೆ ನಡೆ. ಮತ್ತೆ ಪೂರ್ಣಚಂದ್ರಮೂಡಿದಾಗ ಈ ಪತ್ರವನ್ನು ರಾಜನಿಗೆ ಕೊಡು. ನನ್ನ ಬಿಡುಗಡೆಯಾಗುತ್ತದೆ. ಕಾಲ ಪಕ್ವಗೊಂಡಾಗ, ನಾನು ಮಾಡುವ ಕಾರ್ಯದ ಬಗೆಗೆ ಸತ್ಯದರ್ಶನವಾಗುತ್ತದೆ. ಅಲ್ಲಿಂದಾಚೆಗೆ ನನ್ನ ತೀರ್ಪುಗಳು ಧರ್ಮಬದ್ಧವಾಗಿದ್ದು, ಅನ್ಯಾಯಕ್ಕೆ ದೂರವಾಗಿರುತ್ತವೆ. ನೀನು ಹೊರಡು."

ಖೈದಿ, ಬಾಗಿ ನೆಲವನ್ನು ಚುಂಬಿಸಿದ. ಕತ್ತಲೆಯಲ್ಲಿ ಮುಚ್ಚಿದ ಬಾಗಿಲಿನ ಶಬ್ದ ಕೇಳಿತು. ಮತ್ತೆ ಬಾಗಿಲಿನ ಕೀಲಿಯ ಕಿಂಡಿಯಿಂದ ಪಂಜಿನ ಬೆಳಕು ಗೋಡೆಗಳ ಮೇಲೆ ಹರಿದು ಮರೆಯಾಗಿ, ಮಿಕ್ಕವೇಳೆಯನ್ನು ನಿಶೆ ನುಂಗಿತು.

ಮರುದಿನ, ಯಾರೂ ಗುರುತಿಸದ ವಿರಾಟನಿಗೆ ಪ್ರಜೆಗಳ ಮುಂದೆ ಛಡಿಯೇಟಿನ ಶಿಕ್ಷೆಯನ್ನು ನೀಡಲಾಯಿತು. ಬೆತ್ತಲೆಯ ಬೆನ್ನಿಗೆ ಛಾಟಿಯ ಮೊದಲ ಪೆಟ್ಟು ಬಿದ್ದಾಗ, ಅಳುವಿನಿಂದ ಕಿರುಚಿದ. ನಂತರ ಹಲ್ಲುಬಿಗಿದುಕೊಂಡು ಸುಮ್ಮನಾದ. ಹದಿನೇಳನೇ ಛಡಿ ಬಿದ್ದಾಗ ಇಂದ್ರಿಯಗಳು ಮಂಕಾಗಿ ನೆಲಕ್ಕುರುಳಿದ. ಸತ್ತ ಮೃಗವನ್ನು ಎಳೆದು ತೆಗೆಯುವಂತೆ ಅವನನ್ನು ಒಳಕ್ಕೆ ಸೇರಿಸಲಾಯಿತು.

ಪ್ರಜ್ಞೆಬಂದಾಗ ಕಾರಾಗೃಹದ ತನ್ನ ಕೋಣೆಯಲ್ಲಿದ್ದ. ಉರಿಯುತ್ತಿರುವ ಕಲ್ಲಿದ್ದಲಿನ ಹಾಸಿಗೆಯಮೇಲೆ ತನ್ನ ದೇಹವನ್ನು ಯಾರೋ ಎರಡೂ ಕಡೆಯಿಂದ ಎಳೆಯುತ್ತಿರುವಂತೆ ಅನ್ನಿಸಿತು. ಹುಬ್ಬುಗಳು ಸಮಾಧಾನವನ್ನು ಸೂಚಿಸುತ್ತಿದ್ದವು. ವನಮೂಲಿಕೆಗಳ ವಾಸನೆಯನ್ನು ಉಸಿರಾಟದಲ್ಲಿ ಗಮನಿಸಿದ. ಅರೆಗಣ್ಣುತೆರದು ನೋಡಿದ. ಬಂಧೀಖಾನೆಯ ಮುಖ್ಯಸ್ಥನ ಪತ್ನಿ ಪಕ್ಕದಲ್ಲಿದ್ದು ಹಣೆಯನ್ನು ತೊಳೆಯುತ್ತಿದ್ದಳು. ಆಕೆಯತ್ತ ನೋಡಿದ. ಅನುಕಂಪದ ನಕ್ಷತ್ರ ಕಾಂತಿ ಅವಳ ಕಣ್ಣುಗಳಲ್ಲಿ ಕಂಡುಬರುತ್ತಿತ್ತು. ದೇಹದ ವ್ರಣಗಳ ಬಾಧೆಯಲ್ಲಿ ದುಃಖದ ಮತ್ತು ಅನುಕಂಪದ ಕೃಪೆಯ ಅನುಭವವಾಗುತ್ತಿತ್ತು. ಆಕೆಯತ್ತ ಮುಗುಳ್ನಕ್ಕು ನೋವನ್ನು ಮರೆತ.

ಮರುದಿನ, ಎದ್ದು ನಿಂತು ಕಾರಾಗೃಹದ ಬಂಡೆಯ ಗೋಡೆಗಳನ್ನು ಕತ್ತಲಿನಲ್ಲಿ ತಡಕಾಡುವಷ್ಟು ಚೈತನ್ಯಬಂತು. ಒಂದೊಂದೊ ಹೆಜ್ಜೆಗೂ ಒಂದು ಹೊಸ ಪ್ರಪಂಚವು, ಪಾದದ ಕೆಳಗಿನಿಂದ ಮೂಡಿಬಂದಂತೆ ಅನ್ನಿಸಿತು. ಮೂರನೆಯ ದಿನ, ವ್ರಣಗಳು ಮಾಗಿ, ದೇಹ ಮತ್ತು ಮನಸ್ಸಿಗೆ ಸ್ವಲ್ಪ ಶಕ್ತಿಬಂತು. ಅಲ್ಲಿಂದಾಚೆಗೆ ಸ್ವಸ್ಥನಾಗಿ ಅಲ್ಲೇ ಕುಳಿತ. ಬಂಡೆಗಳ ಮೇಲ್ಛಾವಣಿಯಿಂದ ತೊಟ್ಟಿಡುವ ನೀರಹನಿಗಳಿಂದಲೇ ಕಾಲವನ್ನು ಅಳೆಯುತ್ತಿದ್ದ. ಆ ಮಹಾಮೌನದ ಅಗಾಧತೆಯಲ್ಲಿ ಸಣ್ಣ ಪುಟ್ಟ ಆಕಾಶಗಳು; ಆ ಚೂರುಗಳೆಲ್ಲಾ ಕೂಡಿ ದಿನ ಮತ್ತು ರಾತ್ರಿಗಳು; ಅದು ಮನುಷ್ಯ ಮುದುಕನಾಗುವ ಸಾವಿರಾರು ದಿನಗಳ ಜೀವನದಂತೆ ಅನ್ನಿಸಿತು. ಅವನೊಡನೆ ಮಾತನಾಡಲೂ ಯಾರೂ ಬರಲಿಲ್ಲ. ಕತ್ತಲೆಯೇ ಕೂಡಿ ಅವನ ಆತ್ಮವನ್ನು ತುಂಬಿಕೊಂಡಿತು. ಆದರೂ ಮನಸ್ಸಿನ ಒಳಪದರಗಳಲ್ಲಿ ನಾನಾ ವಿಧವಾದ ನೆನಪಿನ ಬುಗ್ಗೆಗಳು ಚಿಮ್ಮುತ್ತಿದ್ದವು. ಹಾಗೆಯೇ ಮೆಲ್ಲನೆ ಹರಿಯುತ್ತ ಆ ಧ್ಯಾನದಲ್ಲಿ ಇಡೀ ಜೀವನ, ದರ್ಪಣದಂತೆ ಪ್ರತಿಫಲಿಸಿತು. ಖಂಡ ಖಂಡವಾಗಿ ತಾನು ಅನುಭವಿಸಿದ್ದೆಲ್ಲವೂ ಸೇರಿಕೊಂಡು ಉಂಡೆಯಾದಂತೆ ತೋರಿತು. ಆಂತರ್ಯದಲ್ಲಿ ಪ್ರತಿಫಲಿತವಾದ ಆ ಜಗತ್ತಿನ ನಿಶ್ಚಲಧ್ಯಾನದಿಂದ ವೃತ್ತಿರಹಿತವಾದ ಮನಸ್ಸು, ಅ ಮಟ್ಟಕ್ಕೆ ತಿಳಿಯಾಗಿದ್ದ ಸಂದರ್ಭವೇ ಅವನ ಜೀವನದಲ್ಲಿ ಎಂದೂ ಬಂದಿರಲ್ಲ.

ದಿನೇ ದಿನೇ ವಿರಾಟನ ಅಂತರ್ದೃಷ್ಟಿ ಸ್ಪಷ್ಟವಾಗತೊಡಗಿತು. ಕತ್ತಲೆಯಲ್ಲೇ ಭಾವಗಳು ಮೂರ್ತಗೊಂಡು ತಮ್ಮ ಸ್ವರೂಪವನ್ನು ಅವನ ದೃಷ್ಟಿಗೆ ತಂದವು. ಕತ್ತಲೆಯ ಕಲ್ಲಿನ ಕೋಣೆಯಲ್ಲಿ ತಡಕಾಡುತ್ತಿದ್ದಂತೆ, ಮನಸ್ಸಿನ ಮುಂದೆ ಕಾಣಿಸಿಕೊಂಡ ನೆನೆಪಿನ ಕಲ್ಪನೆಯ ರೂಪಗಳನ್ನು ದಾಟಿ, ಧ್ಯಾನದಲ್ಲಿನ ಸಮಾಧಾನದ ಶಕ್ತಿಸ್ವರೂಪವೊಂದು ಅವನ ಮನಸ್ಸನ್ನಾವರಿಸಿತು. ಕತ್ತಲಿನ ಪ್ರಶಾಂತ ಮೌನದಲ್ಲಿ, ಪ್ರಾಕೃತಿಕವಾಗಿ ತನ್ನದೆಂದು ಅಂಟಿಕೊಂಡಿದ್ದವೆಲ್ಲಾ ಕರಗಿ, ಆ ಕಾಲ್ಪನಿಕ ಮನೋನಿರ್ಮಿತಿಯ ಅಡೆತಡೆಗಳನ್ನು ಮೀರಿದ ನಾನಾ ಆಯಾಮಗಳ ದೈವಿಕತೆಯ ಅನುಭವವಾಗತೊಡಗಿತು. ಅದೊಂದು ಪ್ರಶಸ್ತ ಮುಕ್ತಭಾವ. ಜೀವನಕ್ಕೆ ಸತ್ತು ಸಾವಿನಲ್ಲಿ ಜೀವಿಸುವ ಸ್ವಾತಂತ್ರ್ಯಾವಸ್ಥೆ. ಕಾಲ ಕಳೆದಂತೆ, ಆನಂದ ವಿಸ್ತರಿಸುತ್ತಾ ತುಂಬಿಕೊಳ್ಳುತ್ತಿದ್ದ ದೇಹದಲ್ಲಿ ಎಲ್ಲಾ ಆತಂಕಗಳೂ ಕರಗಿಹೋದವು. ಗಂಟೆಗಂಟೆಗೂ ಕತ್ತಲೆಯಾಳದ ಭೂಗರ್ಭದ ಕಪ್ಪುಕಲ್ಲುಗಳಂಥ ಬೇರುಗಳತ್ತ ಇಳಿಯುತ್ತಿದ್ದರೂ ತನ್ನಲ್ಲೊಂದು ಹೊಸಜೀವದ ಗರ್ಭವಿರುವಂತೆ ತೋರುತ್ತಿತ್ತು. ಅದೇನು? ಆ ಘನದಲ್ಲಿ ಕಣ್ಣಿಲ್ಲದೆ ತೆವಳುತ್ತಿರುವ ಹುಳುವೇ? ಅಥವಾ

ಮೊಳಕೆಯೊಡೆದು ಮೇಲೆಬರಲು ಹೋರಾಟ ನಡೆಸುತ್ತಿರುವ ಸಸ್ಯವೇ? ಅಥವಾ ಪ್ರಶಾಂತ ಶೈತ್ಯಶಿಲೆಗೆ ಸಂಬಂಧಪಟ್ಟದ್ದೇ ಆನಂದವಾಗಿ ತನ್ನಲ್ಲೇ ತಾನಿರುವ ಸ್ಥಿತಿಯಾಗಿರಬಹುದು.

ಹದಿನೆಂಟು ದಿನಗಳವರೆಗೆ ವಿರಾಟ ಆ ದಿವ್ಯವಾದ, ಅದ್ಭುತವಾದ, ಅಧ್ಯಾತ್ಮಿಕಾನುಭವದಲ್ಲಿ ಮುಳುಗಿ, ತನ್ನ ವ್ಯಕ್ತಿಗತ ಧ್ಯೇಯ ಮತ್ತು ಜೀವನದ ಅಂಕುಶಗಳ ಹಿಡಿತಡೆಗಳಿಂದ ಮುಕ್ತನಾಗಿದ್ದ. ತಾನು ಪ್ರಾಯಶ್ಚಿತ್ತವಾಗಿ ವಿಧಿಸಿಕೊಂಡ ಶಿಕ್ಷೆ ತನಗೆ ವರವಾಗಿ, ಪಾಪ ಮತ್ತು ದಂಡನೆಗಳೆಂಬುವು ಜಾಗೃತ ಪ್ರಪಂಚದ ಅರಿವು ತನ್ನಲ್ಲಿ ಮೂಡಿಸಿದ ಸ್ವಪ್ನಬಿಂಬಗಳಷ್ಟೇ ಎಂದು ತಿಳಿಯತೊಡಗಿತು. ಆದರೆ ಹತ್ತೊಂಭತ್ತನೆಯ ದಿನದ ನಿಶೆಯಲ್ಲಿ, ಎಚ್ಚರಜಗತ್ತಿನ ಒಂದು ಆಲೋಚನೆ ಏರಿಬಂದು ಕೆಂಪಾಗಿ ಉರಿಯುತ್ತಿರುವ ಸೂಜಿಯೊಂದು ಚುಚ್ಚಿದಂತೆ ನಿದ್ರೆಯನ್ನು ಛಿದ್ರಮಾಡಿತು. ಅವನ ದೇಹ ಭಯದಿಂದ ನಡುಗುತ್ತಾ ಬೆರಳುಗಳು ಬಿರುಗಾಳಿ ಬೀಸಿದ ಮರದೆಲೆಗಂತೆ ಪಟಗುಟ್ಟಿದವು. ಆ ಖೈದಿ ದ್ರೋಹವೆಣಿಸಿ, ಕೊಟ್ಟ ಮಾತನ್ನು ಮುರಿದು, ತನ್ನನ್ನು ಮರತೇ ಹೋಗಿ, ಸಾವಿರ ಮತ್ತೊಂದು ಸಾವಿರ ದಿನಗಳು ಕಗ್ಗೋಣೆಯೆಲ್ಲೇ ಜೀವನ ಕಳೆದು, ಛಡಿಯೇಟುಗಳಿಂದ ಶರೀರದ ಮಾಂಸವೆಲ್ಲಾ ಮೂಳೆಗಳಿಂದ ಕಳಚಿ ಬಿದ್ದು, ನಾಲಿಗೆ ಗಟ್ಟಿಗೊಂಡು ಬಾಯ ಹೊರಗೆ ಬಿದ್ದು, ಜೀವನ, ನಿರಂತರ ನಿಶ್ಶಬ್ದವಾಗಿಹೋದರೆ? ಒಳಗೆ ಬಂಧಿತವಾಗಿದ್ದ ಚಿರತೆಯೊಂದು ಕಟ್ಟುಗಳನ್ನು ಛಿದ್ರಮಾಡಿ ಸಿಡಿದೇಳುವಂತೆ ಬದುಕಬೇಕೆಂಬ ಆಸೆ ಆಳದಿಂದೆದ್ದು ಚಿಮ್ಮಿತು. ಜಾಗೃತ ಪ್ರಪಂಚದ ಕಾಲಮಾನ ದೇಹದಲ್ಲಿ ಜಾಗೃತಗೊಂಡು, ಮೂಡಿಬಂದ ಭಯ ಮತ್ತು ಭರವಸೆಗಳ ಭಾವಗಳಿಂದ, ಭೌಮಿಕ ಅಸ್ತಿತ್ವದ ಕೋಲಾಹಲ ಮೊದಲಾಯಿತು. ನಾನಾ ರೂಪಗಳ ಅನಂತ ಚೈತನ್ಯದ ಧ್ಯಾನಭಂಗವಾಗಿ ಮನಸ್ಸು ಅಲ್ಲಿ ನಿಲ್ಲದಾಯಿತು. ತನ್ನ ಬಗೆಗಲ್ಲದೆ ಬೇರೇನನ್ನೂ ಆಲೋಚಿಸಲಾಗಲಿಲ್ಲ. ಕಣ್ಣುಗಳು ಬೆಳಗಿನ ಬೆಳಕನ್ನು ಕಾಣಲು ಹಪಹಪಿಸಿದವು. ಕಲ್ಲಿನಂತೆ ಕಟ್ಟಿಬಿದ್ದ ಕೈಕಾಲುಗಳು ಪ್ರತಿಚಲನೆಗಾಗಿ ಹಾರೈಸಿ, ಚಾಚಿಕೊಂಡು ಓಡಾಡಿ ಮುನ್ನುಗ್ಗಲು ಹವಣಿಸಿದವು. ಮನಸ್ಸಿನಲ್ಲಿ ಮಡದಿ –ಮಕ್ಕಳ ಯೋಚನೆ ತುಂಬಿತು. ತನ್ನ ಮನೆ, ಆಸ್ತಿ, ತೀಕ್ಷ್ಣವಾದ ಪ್ರಾಪಂಚಿಕ ಆಕರ್ಷಣೆಗಳು, ಅವೆಲ್ಲವನ್ನೂ ಸಂಪೂರ್ಣವಾಗಿ, ಮನಸ್ಸಿಟ್ಟು ಎಚ್ಚರದ ಬಿಸಿ ರಕ್ತದಂತೆ ಅನುಭವಿಸಬೇಕೆನಿಸಿತು.

ಇಲ್ಲಿಂದಾಚೆಗೆ, ಜಲಾಶಯದ ಕೃಷ್ಣಜಲದಂತೆ ನಿಷ್ಕ್ರಿಯವಾಗಿ, ಘಟನೆಗಳ ಅಲೆಗಳು ಹೊರಳಾಡುತ್ತ, ತಟಸ್ಥವಾಗಿ ಕಾಲಡಿಯಲ್ಲಿದ್ದ ಕಾಲ ಎಚ್ಚೆತ್ತು, ಆಲೋಚನೆಗಳು ಬೃಹದಾಕಾರವಾಗಿ ಅವುಗಳನ್ನು ತಡೆಯಲು ವಿರಾಟ ಹೆಣಗಾಡುತ್ತಿದ್ದ. ಈ ಆಲೋಚನಾ ಪ್ರವಾಹದ ಹಿಡಿತಕ್ಕೆ ಸಿಕ್ಕಿ, ಅದರಲ್ಲಿ ತೇಲುತ್ತಾ ಕೊಚ್ಚಿಹೋಗಿ ಪೂರ್ವಯೋಜಿತ ಸ್ಥಳಕೆ ಸೇರುವ ಮರದಂತೆ ಮುಕ್ತನಾಗಬೇಕೆಂದು ಬಯಸಿದ. ಆದರೆ ಪ್ರವಾಹ ತನ್ನ ಎದುರಾಗಿ ಹರಿದಿತ್ತು. ಏದುಸಿರುಬಿಡುತ್ತಾ ಪ್ರವಾಹಕ್ಕೆ ಎದುರಾಗಿ ಈಜಿ ಗಂಟೆಗಳೇ ಸಂದವು. ಮೇಲ್ಛಾವಣಿಯಿಂದ ತೊಟ್ಟಿಡುತ್ತಿರುವ ನೀರಹನಿಗಳು ನೆಲಕ್ಕೆ ಬೀಳಲು ವಿಳಂಬವಾಗುತ್ತಿದೆ ಎನ್ನಿಸಿತು. ಸೆರೆಮನೆಯಲ್ಲಿ ಸಮಾಧಾನದಿಂದ ಮಲಗಲು ಸಾಧ್ಯವಾಗಲಿಲ್ಲ. ಆ ಖೈದಿ ತನ್ನನು ಮರೆತು, ತಾನು ಈ ಗರ್ಭಗೃಹದಲ್ಲೇ ನಿಶ್ಶಬ್ದವಾಗಿ ಕೊಳೆಯುವೆನೆಂಬ ಆಲೋಚನೆಯಿಂದ ಪಂಜರದಲ್ಲಿ ಬಂಧಿಸಿದ ಕ್ರೂರಮೃಗದಂತೆ ಕೋಣೆಯಲ್ಲೇ ಶತಪಥವಾಡಿದ. ಗಾಢ ನೀರವ ಕತ್ತುಹಿಸುಕಿತು. ಪಶ್ಚಾತ್ತಾಪದ ಶಾಪದ ನುಡಿಗಳು ಗೋಡೆಗಳನ್ನು ತಾಕಿದವು. ತನ್ನನ್ನು, ರಾಜನನ್ನು ಮತ್ತು ದೈವವನ್ನೂ ಶಪಿಸಿದ. ತನ್ನ ರಕ್ತಮಯ ಬೆರಳುಗಳಿಂದ ಕಠೋರವಾದ ಬಂಡೆಗಲ್ಲನ್ನು ಸೀಳಲು ಯತ್ನಿಸಿ, ಓಡಿ ಕೋಣೆಯ ಬಾಗಿಲಿಗೆ ತಲೆ ಬಡಿದು, ಅಲ್ಲೇ ಪ್ರಜ್ಞೆಕಳೆದು ಉರುಳಿ ಬಿದ್ದ. ಎಚ್ಚರಗೊಂಡಮೇಲೆ ಮತ್ತೆ ತನ್ನ ಕಾಲಮೇಲೆ ನಿಂತು ವ್ಯರ್ಥವಾಗಿ ಅಲ್ಲೇ ಸುತ್ತುವ ಕಾರ್ಯ ನಡೆಯಿತು.

ಈ ಹದಿನೆಂಟನೆಯ ದಿನದಿಂದ ಹುಣ್ಣಿಮೆಯವರೆಗೆ ವಿರಾಟನ ಜೀವನ ಭಯಾನಕರೀತಿಯಲ್ಲಿ ಸಾಗಿತು. ಆತಂಕದಿಂದ ಕುದಿಯುತ್ತಿದ್ದ ದೇಹ, ಸ್ವೀಕರಿಸಿದ ಆಹಾರ, –ಪಾನೀಯಗಳು ಒಳಗಿರಲಾರದೆ ವಮನಕ್ಕೇ ಮೀಸಲಾಯಿತು. ಬುದ್ಧಿಯ ಹರಿತ ಮೊಂಡಾಗಿತ್ತು. ಚಿಂತನೆ ಅಸಾಧ್ಯವಾಯಿತು. ಮೇಲಿಂದ ಬೀಳುತ್ತಿದ್ದ ನೀರ ಹನಿಗಳನ್ನು ಎಣಿಸಿ ದಿನಗಳನ್ನು ಲೆಕ್ಕಹಾಕಿ ಬಳಲಿ ಮಲಗುತ್ತಿದ್ದ. ಅವನಿಗೆ ತಿಳಿಯದಂತೆ ಹಣೆಯ ಎರಡೂ ಬದಿಯ ಕೇಶಗಳು ಬೂದುಬಣ್ಣಕ್ಕೆ ತಿರುಗಿದ್ದವು.

ಆದರೆ ಮೂವತ್ತನೆಯ ದಿನ ಹೊರಗೆ ಸಪ್ಪಳವಾಗಿ ಮತ್ತೆ ಸ್ತಬ್ಧವಾದಂತೆ ಕೇಳಿಸಿತು. ನಂತರ ಮೆಟ್ಟಿಲಿಳಿಯುವ ಹೆಜ್ಜೆಯ ದನಿ ಕೇಳಿಬಂದು, ಬಾಗಿಲು ತೆರೆದುಕೊಂಡು ಬೆಳಕೊಂದು ಬಿರಿದು

ಹರಿದು ಬಂತು. ಕತ್ತಲಲ್ಲಿ ಮುಳುಗಿ ಎದುರಿಗೆ ನಿಂತವನು ಮಹಾರಾಜ ! ಪ್ರೀತಿಯ ಆಲಿಂಗನದಿಂದ ವಿರಾಟನಿಗೆ ಅಭಿವಂದಿಸಿ ನುಡಿದ.

"ನಿನ್ನ ಪತ್ರದಿಂದ ಪರಿಸ್ಥಿತಿ ತಿಳಿಯಿತು. ಇದು ನಮ್ಮ ವಂಶದಲ್ಲೇ ಕಂಡುಬರದ ಮೌಲ್ಯದ ದಾಖಲೆ. ನಮ್ಮ ಮರಣದ ಹಂತ ಮುಗಿದಮೇಲೂ ಇದೊಂದು ಹೊಳೆವ ನಕ್ಷತ್ರವಾಗಿ ನಿಲ್ಲುತ್ತದೆ. ಬಾ, ಸೂರ್ಯದೇವನ ಬೆಳಕು ನಿನ್ನನ್ನು ಪ್ರಕಾಶಿಸಲಿ, ಸಂತೋಷ ತುಂದಿಲರಾದ ಜನ ಧರ್ಮಾವತಾರನ ದರ್ಶನವನ್ನು ಪಡೆಯಲಿ."

ವಿರಾಟ ಕೈಗಳನ್ನು ಕಣ್ಣುಗಳಮುಂದೆ ಕೊಡೆಯಂತೆ ಹಿಡಿದು ನೋಡಿದ. ಅಭ್ಯಾಸತಪ್ಪಿಹೋಗಿ, ಬೆಳಕನ್ನು ನೋಡಲು ಕಣ್ಣುಗಳಿಗೆ ಹಿಂಸೆಯಾಯಿತು. ಸಾವರಿಸಿಕೊಂಡು ಮೇಲೆದ್ದು ನಿಂತ. ಪಾನಮತ್ತನಂತೆ ತೂರಾಡಿ ಬೀಳುವಂತಿದ್ದ ಅವನನ್ನು ಸೇವಕರು ಹಿಡಿದು ನಿಲ್ಲಿಸಬೇಕಾಯಿತು. ಬಾಗಿಲತ್ತ ಬರುವ ಮುನ್ನ ನುಡಿದ:

‘‘ಮಹಾಪ್ರಭು, ನನ್ನನ್ನು ಧರ್ಮಾತ್ಮನೆಂದಿರಿ. ಆದರೆ ಈಗ ನನಗೆ ಸತ್ಯ ತಿಳಿಯಿತು. ಮತ್ತೊಬ್ಬನ ಮೇಲೆ ತೀರ್ಪನ್ನು ನೀಡುವವನು ದೊಡ್ಡ ಪ್ರಮಾದವನ್ನೇ ಮಾಡಿ ಅನ್ಯಾಯವೆಸಗುತ್ತಾನೆ. ಈ ನೆಲದಾಳದಲ್ಲಿ ನನ್ನ ತೀರ್ಪಿನಿಂದ ಶಿಕ್ಷೆಗೊಳಪಟ್ಟ ಎಷ್ಟೋಮಂದಿ ಹಿಂಸೆಗೊಳಗಾಗಿ ಜರ್ಝರಿತರಾಗಿದ್ದಾರೆ. ಈಗ, ನನ್ನ ಜೀವನದಲ್ಲೇ ಮೊದಲಬಾರಿಗೆ, ಅವರು ಅನುಭವಿಸುತ್ತಿರುವ ಹಿಂಸೆಯೇನೆಂದು ನನಗೆ ಅರ್ಥವಾಗಿದೆ. ಪ್ರತೀಕಾರಪೂರ್ವಕವಾದ ಈ ತೀರ್ಪುಗಳು ನ್ಯಾಯಬದ್ಧವಲ್ಲವೆಂದು ವಿಶಷದವಾಗಿ ತಿಳಿಯುತ್ತಿದೆ. ಅವರೆಲ್ಲರನ್ನೂ ಬಿಡುಗಡೆಮಾಡಿ. ಹೊರಗಿನ ಜನರನ್ನೆಲ್ಲಾ ಅವರ ಸ್ವಸ್ಥಾನಗಳಿಗೆ ಮರಳಲಿ. ಅವರ ಜಯಕಾರಗಳು ನನ್ನಲ್ಲಿ ಅವಮಾನವನ್ನು ತುಂಬುವುದು ಬೇಡ."

ರಾಜನ ಸೂಚನೆಯಂತೆ, ಭಟರಿಂದ ಖೈದಿಗಳ ಬಿಡುಗಡೆಯಾಯಿತು. ಮತ್ತೆ ಎಲ್ಲವೂ ನಿಶ್ಶಬ್ದ. ರಾಜ ನುಡಿದ:

‘‘ಇಲ್ಲಿಯ ವರೆಗೆ ನೀನು ತೀರ್ಪುನೀಡುತ್ತಿದ್ದ ನ್ಯಾಯಪೀಠ ನಮ್ಮ ಅರಮನೆಯ ಸೋಪಾನ ಮಾರ್ಗದಲ್ಲಿತ್ತು. ಆದರೆ ಯಾತನೆಯ ನೇರವಾದ ಅರಿವಿನಿಂದಾಗಿ, ಪೂರ್ವದ ಯಾವ

ನ್ಯಾಯಾಧಿಪತಿಗೂ ದಕ್ಕದ ವಿವೇಕ ನಿನಗೆ ಪ್ರಾಪ್ತವಾಗಿದೆಯಾದ್ದರಿಂದ, ಇನ್ನು ಮುಂದೆ ನನ್ನ ಅರ್ಧಸಿಂಹಾಸನದಲ್ಲೇ ಕುಳಿತು ತೀರ್ಪನ್ನು ನೀಡು, ನಾನೂ ನಿನ್ನ ತೀರ್ಪಿನ ನುಡಿಗಳನ್ನು ಕೇಳಿ ವಿವೇಕರಸವನ್ನು ಪಾನಮಾಡುವಂತಾಗಲಿ."

ಮನವಿಯ ಸಂಕೇತವಾಗಿ, ವಿರಾಟ, ಮಹಾರಾಜನ ಮುಂಗಾಲುಗಳನ್ನು ಆಲಿಂಗಿಸಿ ನುಡಿದ, ”ನನ್ನನ್ನು ಈ ಅಧಿಕಾರದಿಂದ ನಿವೃತ್ತಿ ಗೊಳಿಸಿ.". ಸತ್ಯಕ್ಕೆ ಬದ್ಧವಾದ ತೀರ್ಪುಗಳನ್ನು ನಾನು ಕೊಡಲಾರೆ. ಒಬ್ಬನು ಮತ್ತೊಬ್ಬನ ಬಗೆಗೆ ನೀಡುವ ತೀರ್ಮಾನ ಸತ್ಯನಿಷ್ಠವಾಗಿರಲು ಸಾಧ್ಯವಿಲ್ಲವೆಂದು ನನಗೆ ಮನವರಿಕೆಯಾಗಿದೆ. ಶಿಕ್ಷೆ ನೀಡುವುದು ಭಗವಂತನ ಕೈಯಲ್ಲಿದೆಯಲ್ಲದೆ ಮಾನವನ ವಶದಲ್ಲಿಲ್ಲ. ಮನುಷ್ಯನೆಂದಿಗೂ ವಿಧಿಯ ಕಾರ್ಯನಕ್ಷೆಯನ್ನು ಬದಲಾಯಿಸಲು ಯತ್ನಿಸಿ ಅಪರಾಧವೆಸುಗುತ್ತಾನೆ. ನಾನು ಅಂಥ ಪಾಪಗಳಿಂದ ಮುಕ್ತವಾದ ಜೀವನವನ್ನು ನಡೆಸಬೇಕೆಂದಿದ್ದೇನೆ."

"ಅಂತೆಯೇ ಆಗಲಿ” ರಾಜ ಮರುನುಡಿದ ”ನ್ಯಾಯನಿರ್ಣೇತ್ರಾಧಿಕಾರಿಯಾಗುವ ಬದಲು, ನನ್ನ ಮುಖ್ಯ ಸಲಹೆಗಾರನಾಗಿರುತ್ತಾ, ಶಾಂತಿ –ಸಮರಗಳ ಸಮಸ್ಯೆಗಳನ್ನು ಬಿಡಿಸಿ, ತೆರಿಗೆಯ ವಿಚಾರಗಳಲ್ಲಿ ಸರಿಯಾದ ದಾರಿಯಲ್ಲಿ ನನ್ನನ್ನು ನಡೆಸುತ್ತಾ, ನನ್ನೆಲ್ಲಾ ಕಾರ್ಯಗಳೂ ನಿನ್ನ ವಿವೇಕದ ಬೆಳಕಲ್ಲಿ ಸಾಗುತ್ತಿರಲಿ."

ವಿರಾಟ ಮತ್ತೆ ಮಹಾರಾಜನ ಮುಂಗಾಲುಗಳನ್ನು ತಬ್ಬಿಹಿಡಿದ.

"ಮಹಾಪ್ರಭು, ದಯೆಮಾಡಿ, ನನಗೆ ಅಧಿಕಾರವನ್ನು ಕೊಡಬೇಡಿ. ಅಧಿಕಾರವು ಕಾರ್ಯವನ್ನು ಪ್ರಚೋದಿಸುತ್ತದೆ. ವಿಧಿಯ ನಿರ್ಣಯಕ್ಕೆ ಯಾವ ಕಾರ್ಯವು ನ್ಯಾಯಬದ್ಧ, ಯಾವುದು ವ್ಯತಿರೇಕ ಎಂದು ತಿಳಿಯುವುದು ಹೇಗೆ? ಯುದ್ಧಮಾಡಲು ಸಲಹೆ ಕೊಟ್ಟಲ್ಲಿ, ನಾನು ಮೃತ್ಯುವಿನ ಬೀಜ ಬಿತ್ತಿದಂತಲ್ಲವೆ. ನನ್ನ ಹೇಳಿಕೆಗಳು ಕಾರ್ಯಗಳಾಗಿ ಬೆಳೆಯುತ್ತವೆ. ಆ ಪ್ರತಿಯೊಂದು ಕಾರ್ಯದ ಪರಿಣಾಮ ಏನಾಗಬಹುದೆಂದು ಮೊದಲೇ ಊಹಿಸಲು ನಮಗೆ ಸಾಧ್ಯವಿಲ್ಲ. ಯಾರಲ್ಲಿಯೂ ಯಾವ ವಾಗ್ವಾದವಿಲ್ಲದೆ, ವಿವೇಕಕ್ಕೆ ಹತ್ತಿರವಾಗಿ, ಪಾಪಗಳಿಗೆ ದೂರವಾಗಿ ಇಲ್ಲಿ ಪ್ರಶಾಂತವಾಗಿದ್ದೆ. ಹಾಗೆಯೇ ಇರಲು ಬಿಡಿ. ನೆಮ್ಮದಿಯಿಂದ ನನ್ನ ಮನೆಯಲ್ಲಿ ನಾನಿದ್ದು, ಭಗವತ್ಸೇವೆಯಲ್ಲಿ ಪಾಪರಹಿತ ಜೀವನವನ್ನು ಕಳೆಯುತ್ತೇನೆ."

"ನಿನ್ನ ಸೇವೆಯನ್ನು ಕಳೆದುಕೊಳ್ಳುವುದು ನನ್ನ ಮನಸ್ಸಿಗೆ ವಿರುದ್ಧವಾಗಿದೆ, "ರಾಜ ಹೇಳಿದ. "ಆದರೆ ಒಬ್ಬ ಋಷಿಯೊಡನೆ ವಾದಿಸಲು ಯಾರಿಗೆ ಸಾಧ್ಯ? ಒಬ್ಬ ಧರ್ಮನಿಷ್ಠನ ಮನಸ್ಸನ್ನು ಬದಲಾಯಿಸುವ ಶಕ್ತಿ ಯಾರಿಗಿದೆ? ನಿನ್ನಿಷ್ಟದಂತೆ ಜೀವಿಸು. ಒಬ್ಬ ಪಾಪರಹಿತನಾದ ವ್ಯಕ್ತಿ ನನ್ನ ರಾಜ್ಯದ ಸರಿಹದ್ದಿನಲ್ಲಿರುವುದೇ ನನಗೆ ಗೌರವದ ವಿಷಯ."

ಸೆರೆಮನೆಯ ಬಾಗಿಲಿನಲ್ಲಿ ಒಬ್ಬರನ್ನೊಬ್ಬರು ಬೀಳ್ಕೊಟ್ಟರು. ವಿರಾಟ, ಸೂರ್ಯಕಿರಣಗಳಿಂದ ಬೆಳೆಗಿದ ಗಾಳಿಯ ಪರಿಮಳವನ್ನು ಸೇವಿಸುತ್ತಾ ಒಬ್ಬನೇ ಮನಗೆ ನಡೆದುಹೋದ. ಅಧಿಕಾರಮುಕ್ತನಾಗಿ ಈಗ ಲಘುವಾಗಿ, ಹಿಂದೆಂದೂ ಅವನ ಹೃದಯ ಇಷ್ಟು ಹಗುರವಾಗಿರಲಿಲ್ಲ. ಅವನ ಹಿಂದೆ ಬರಿಗಾಲಿನ ಸಪ್ಪಳ ಕೇಳಿಸಿತು. ಹಿಂದಿರುಗಿ ನೋಡಿದಾಗ ಕಂಡದ್ದು, ಯಾರ ಸ್ಥಾನದಲ್ಲಿ ತಾನಿದ್ದು ತಿಂಗಳ ಶಿಕ್ಷೆಯನ್ನನುಭವಿಸಿದನೋ ಆ ಖೈದಿ, ಆ ಗಿರಿವಾಸಿ. ಆತ ಭೂತಪೂರ್ವನ್ಯಾಯಾಧೀಶ ಅಡಿಯಿಟ್ಟ ನೆಲವನ್ನೊಮ್ಮೆ ಚುಂಬಿಸಿ, ವಿರಾಟನಿಗೆ ಭಯದಿಂದ ನಮಸ್ಕರಿಸಿ ಮರೆಯಾದ. ವಿರಾಟನ ಮುಖದಮೇಲೆ ಮೊದಲಬಾರಿಗೆ ಮಂದಹಾಸ ಕಂಡಿತು. ತನ್ನ ಮೃತ ಸೋದರರನ ಹೊಳೆವ ಕಣ್ಣುಗಳನ್ನು ಆತ ನೋಡಿದ್ದ. ಆ ಹರ್ಷವನ್ನು ಹೃದಯದಲ್ಲಿ ತುಂಬಿಕೊಂಡು ತನ್ನ ಗೃಹವನ್ನು ಪ್ರವೇಶಿದ.

ಮನೆಯನ್ನು ಸೇರಿ ಕಳೆದ ದಿನಗಳು ಸಂತೋಷಭರಿತವಾಗಿದ್ದವು. ಅಲ್ಲಿ, ಮಲಗಿದಾಗಲೂ, ಎದ್ದಾಗಲೂ ಕತ್ತಲೆಯೇ. ಇಲ್ಲಿ ಬೆಳಗಿನಲ್ಲಿ ಏಳುವುದೇ, ಒಂದು ದೈವೀಭಾವ ತುಂಬಿದ ಸ್ವರ್ಗದ ಬೆಳಕಾಗಿದೆ. ವಸುಂಧರೆಯ ವರ್ಣಗಳನ್ನು ಕಂಡು, ಮಣ್ಣಿನ ವಾಸನೆಯನ್ನು ಹೀರಿ, ಬೆಳಗು ಜೀವಂತವಾಗಿರುವುದನ್ನು ಸಾರುವ ಅದರ ಮಧುರ ಸಂಗೀತವನ್ನು ಕೇಳುತ್ತಿದ್ದ. ಪ್ರತಿದಿನವನ್ನೂ ಹೊಸದೆನ್ನುವಂತೆ, ಅದೊಂದು ಅಮೂಲ್ಯ ಕೊಡುಗೆಯೆಂದು ಬಗೆದು, ನಿರಾಳವಾಗಿ ಉಸಿರಾಡುವುದೇ ಒಂದು ಅನುಗ್ರಹ, ಸ್ವೇಚ್ಛೆಯಾಗಿ ತಿರುಗಾಡುವುದೇ ಒಂದು ವರವೆಂದು ಅನ್ನಿಸಿತು. ತನ್ನ ದೇಹವನ್ನೇ ಸವರಿ ನೋಡಿಕೊಂಡು, ತನ್ನ ಪತ್ನಿಯನ್ನು ನವುರಾಗಿ ನೇವರಿಸಿ, ಮಕ್ಕಳ ದೃಢವಾದ ಕೈಕಾಲುಗಳನ್ನು ತಡವಿ ಒಂದು ಸಂಭ್ರಮದ ಭಾವದಲ್ಲಿದ್ದು, ಇವೆಲ್ಲವೂ ಒಂದೇ

ದೈವದ ನಾನಾರೂಪಗಳೆಂದು ಪರಿಭಾವಿಸಿದ. ಅವನ ಆತ್ಮ ಗರಿಗೆದರಿದ ಪಕ್ಷಿಯಂತೆ, ಸೌಮ್ಯವಾದ ಹೆಮ್ಮೆಯಿಂದಿದ್ದರೂ, ಎಂದೂ ತನ್ನ ಜೀವನದ ಪರಿಧಿಯಿಂದಾಚೆ ಅದೃಶ್ಯ ದೈವರೂಪಗಳಾದ ಅಸಂಖ್ಯಾಕತ ಜೀವ ವೈವಿಧ್ಯಗಳ ಜೀವನಕ್ಕೆ ಪ್ರತಿಕೂಲವಾಗಿ ವರ್ತಿಸಲಿಲ್ಲ. ಬೆಳಗಿನಿಂದ ಸಂಜೆಯವರೆಗೆ ಶಾಸ್ತ್ರಗ್ರಂಥಗಳ ಪಠನ, ನಾನಾ ರೀತಿಯ ಉಪಾಸನಾ ವಿಧಿಗಳ ಅನುಸಂಧಾನ, ಧ್ಯಾನದಲ್ಲಿ ಮೌನ, ಆತ್ಮನ ಪ್ರೇಮಾಲಿಂಗನ, ದೀನರ ಸೇವೆ ಮತ್ತು ಭಗವಂತನ ಪ್ರಾರ್ಥನೆ, ಇಷ್ಟೇ ಅವನ ದೈನಂದಿನವಿಧಿಗಳು. ಉಲ್ಲಾಸದಿಂದ ಜೀವನ ಸಾಗಿತು. ಅವನ ಮಾತು, ತನ್ನ ವಿಧೇಯರಾದ ಸೇವಕರ ನುಡಿಗಿಂತಲೂ ವಿನೀತವಾಗಿತ್ತು. ಗೃಹಪರಿವಾರವೆಲ್ಲವೂ ಅವನಲ್ಲಿ ಮೊದಲಿಗಿಂತಲೂ ಹೆಚ್ಚು ವಿಧೇಯವಾಗಿ ನಡೆದುಕೊಳ್ಳುತ್ತಿತ್ತು. ದೀನರಿಗೆ ಸಹಾಯವನ್ನೂ, ದುಃಖಿತರಿಗೆ ಸಾಂತ್ವನವನ್ನೂ ಮಾಡುತ್ತಿದ್ದ. ಧ್ಯಾನ ಅವನ ಜೀವನವನ್ನು ತುಂಬಿತು. ಈಗ ವಿರಾಟನನ್ನು, ' **ಪ್ರಜ್ವಲಿಸುವ ಖಡ್ಗ** ' ಅಥವಾ '**ನ್ಯಾಯದ ಚಿಲುಮೆ** ' ಎಂದು ಕರೆಯುವ ಪರಿಪಾಟ ಮರೆಯಾಯಿತು. ಈಗ ಅವನು '**ಹಿತಬೋಧನೆಯ ಜ್ಯೋತಿ**'. ರಾಜ್ಯದ ನ್ಯಾಯಾಧೀಶನಲ್ಲವಾದರೂ, ಮಂದಿ ಅವನ ಹಿತವಚನವನ್ನುವನ್ನು ಕೇಳಲು ತಮ್ಮ ಸಮಸ್ಯೆಗಳನ್ನು ಅವನಲ್ಲಿಗೆ ತರುತ್ತಿದ್ದರು. ನೆರೆಹೊರೆಯವರಲ್ಲದೆ, ಸುದೂರಪ್ರಾಂತಗಳಿಂದ ಬಂದವರ ಸಮಸ್ಯೆಗಳನ್ನು ಸಹ ಬಗೆಹರಿಸುತ್ತಿದ್ದ. ಅವನು ಹೇಳಿದಂತೆ ನಿಸ್ಸಂದೇಹವಾಗಿ ಅವರು ನಡೆದುಕೊಳ್ಳುತ್ತಿದ್ದರು. ಹಿತವನ್ನು ಹೇಳುವದು ಆಜ್ಞಾಪಿಸುವುದಕ್ಕಿಂತಲೂ ಮೇಲು, ಧ್ಯಾನವು ತೀರ್ಪಿಗಿಂತ ಉತ್ತಮವೆಂದು ಹರ್ಷದಿಂದ ಈ ಕಾರ್ಯವನ್ನು ಮಾಡುತ್ತಿದ್ದ. ತಾನು ಸಾಗಿಸುತ್ತಿರುವ ಜೀವನವು ನಿರ್ದೋಷವೆಂದೂ, ದೂಷಣೆಗೆ ಅತೀತವೆಂದೂ ಅನ್ನಿಸುತ್ತಿತ್ತು. ಈಗ ತಾನಾರ ವಿಧಿಯನ್ನೂ ಬಲವಂತವಾಗಿ ಶಾಸಿಸುವ ತೀರ್ಪುಗಳನ್ನು ನೀಡದೆ, ಎಷ್ಟೋ ಜನರ ಭವಿಷ್ಯದ ವಿಧಿ ನಿರ್ಣಯಕ್ಕೆ ಸಹಾಯಕನಾದಂತಿತ್ತು. ಈ ಜೀವನೋತ್ಕರ್ಷದಿಂದ ಅವನು ಸುಖದಿಂದಿದ್ದ.

ಹೀಗೆ, ಮೂರುವರ್ಷಗಳು ಕಳೆದು, ಮತ್ತೆ ಮೇಲೆ ಮೂರು ವಸಂತಗಳು ಬಂದು ಹೋದವು. ವರ್ಷಗಳೆಲ್ಲಾ ಒಂದು ಪ್ರಜ್ವಲ ದಿನದಂತೆ ಕರಗಿ ತೀರಿ ಹೋಗುತ್ತಿದ್ದವು. ವಿರಾಟನ ಜೀವನ ವಿಧಾನ ಮತ್ತೂ ನವಿರಾಗುತ್ತಾ, ಸೌಮ್ಯವಾಗತೊಡಗಿತು. ತಗಾದೆಯೊಂದು ಪರಿಹಾರಕ್ಕಾಗಿ ಅವನ ಮುಂದೆ ಬಂದಾಗಲೆಲ್ಲಾ, ಜೀವನ ಎಲ್ಲರಿಗೂ ಸಹಜ ಸಮೃದ್ಧಿಯಿಂದ ಎಟುಕುವಂತಿದ್ದರೂ

ಲೋಕದಲ್ಲೇಕಿಷ್ಟು ರೊಚ್ಚು, –ರೋಷಗಳು? ಏಕೆ ಜನ ಇತರರನ್ನು ಅಧಿಕಾರದ ಯಃಕಶ್ಚಿತ್ ಅಸೂಯೆಯ ವಿಷಯಗಳಿಗಾಗಿ ಪಟ್ಟುಹಿಡಿದು ಹಿಂಸಿಸಿ, ತಮ್ಮ ಯಾಜಮಾನ್ಯವನ್ನು ಸಾಧಿಸಿಕೊಳ್ಳಲು ಹೆಣಗುತ್ತಾರೆ ಎಂದು ಚಕಿತನಾಗುತ್ತಿದ್ದ. ಯಾರಲ್ಲಿಯೂ ಅವನಿಗೆ ಅಸೂಯೆ ಇರಲಿಲ್ಲ. ಯಾರಿಗೂ ಇವನ ಬಗೆಗೆ ಅಸೂಯೆ ಇರಲಿಲ್ಲ. ಜೀವನವೆಂಬ ಸಮುದ್ರದಲ್ಲಿ ವಿರಾಟನ ಮನೆಯೊಂದು ಶಾಂತಿದ್ವೀಪದಂತೆ ನಿಂತು ಇಂದ್ರಿಯ ಪ್ರಲೋಭಗಳಿಗೆ, ಆವೇಶದ ಪ್ರವಾಹಕ್ಕೆ ಅತೀತವಾಗಿತ್ತು.

ಈ ಪ್ರಶಾಂತ ಜೀವನ ಸಾಗುತ್ತಿದ್ದ ಆರನೇ ವರ್ಷದ ಒಂದು ಸಂಜೆ, ಕತ್ತಲಿಳಿದು ವಿರಾಟ ವಿಶ್ರಾಂತಿಗಾಗಿ ಮಲಗಿದ್ದಾಗ, ಏಕಮುಖವಾಗಿ ಹೊಡೆತಗಳ ಸಪ್ಪಳ ಮತ್ತು ಚೀರಾಟದ ಸದ್ದು ಕೇಳಿಸಿತು. ಹಾಸಿಗೆಯಿಂದ ಹಾರಿ ಮೇಲೆದ್ದು ನೋಡಿದರೆ, ಇವನ ಮಕ್ಕಳು, ಮನೆಯ ಸೇವಕನೊಬ್ಬನನ್ನು ಥಳಿಸುತ್ತಿದ್ದರು. ಅವನನ್ನು ಬಲವಂತವಾಗಿ ಮಂಡಿಯೂರಿಸಿ ಬಗ್ಗಿಸಿ, ಒರಟು ಚರ್ಮದ ಚಾಟಿಯಿಂದ ರಕ್ತ ಚಿಮ್ಮುವಂತೆ ಹೊಡೆಯುತ್ತಿದ್ದರು. ಹೊಡೆತ ತಿನ್ನುತ್ತಿದ್ದ ಆಳು ತಲೆಯೆತ್ತಿ ವಿರಾಟನ ಮುಖವನ್ನು ನೋಡಿದ. ಮತ್ತೊಂದು ಸಲ ತಾನು ಘಾತಿಸಿ ಕೊಂದ ಅಣ್ಣನ ಕಣ್ಣುಗಳು ಅಲ್ಲಿ ಕಂಡವು. ಮುನ್ನುಗ್ಗಿ, ಚಬುಕನ್ನೆತ್ತಿ ಮತ್ತೆ ಹೊಡೆಯಲು ಹೋಗುತ್ತಿದ್ದ ಮಗನ ತೋಳನ್ನು ಹಿಡಿದು ನಿಲ್ಲಿಸಿ, ಈ ಘೋರವೇನೆಂದು ಕೇಳಿದ.

ಅವನ ಸಿಡಿಮಿಡಿಯಿಂದ ನುಡಿದ ಅಸ್ಪಷ್ಟ ಉತ್ತರವನ್ನು ಕೇಳಿ ಸಂದರ್ಭವನ್ನು ಗ್ರಹಿಸಿದ. ಬೆಟ್ಟದ ಚಿಲುಮೆಯಿಂದ, ಮರದ ಬಾನೆಗಳಮೂಲಕ ಆಳು ನೀರನ್ನು ಹೊತ್ತು ತರಬೇಕಿತ್ತು. ನೆತ್ತಿಯ ಮೇಲೆ ಪ್ರಖರ ಸೂರ್ಯನ ಬಿಸಿಲು, ಜೊತೆಗೆ ಆಯಾಸದಿಂದಾಗಿ, ಆ ಭಾರವನ್ನು ಹೊತ್ತು ತರಲು ತಡವಾಗಿತ್ತು. ತಡವಾಗಿ ಬಂದಾಗಲೆಲ್ಲಾ ಚಬುಕಿನ ಸೇವೆ. ನಿನ್ನೆಯೂ ಹಾಗೆ ನಡೆದಿತ್ತು. ಪದೇ ಪದೇ ಏಟುತಿಂದು ಬಸವಳಿದ ಆಳು ಓಡಿಹೋಗಿದ್ದ. ವಿರಾಟನ ಮಕ್ಕಳು ಕುದುರೆಯೇರಿ ಸಾಗಿ, ಅವನು ನದಿಯನ್ನು ದಾಟಿ ಪರಾರಿಯಾಗುವ ಮೊದಲೇ ಹಿಡಿದರು. ಹಗ್ಗದಿಂದ ಬಂಧಿಸಿ ತಮ್ಮ ಕುದುರೆಯೊಂದರ ಜೀನಿಗೆ ಕಟ್ಟಿ ಓಡಿಸಿಕೊಂಡು ಬಂದರು. ಸ್ವಲ್ಪದೂರ ಎಳೆಯುತ್ತಾ, ತುಸು ಓಡುತ್ತಾ, ಹೇಗೋ ಪಾದಗಳೆಲ್ಲಾ ಗೀಚು ಗಾಯಗಳಿಂದ ರಕ್ತಸಿಕ್ತವಾಗಿದ್ದ ಆ ಆಳು ಇವರ ಮನೆಯನ್ನು ತಲುಪಿದ. ಈಗ ಅವನಿಗೆ ಅರ್ಹವಾದ ಶಿಕ್ಷೆಯನ್ನು ಕೊಡುತ್ತಿದ್ದಾರೆ. ಅದು

ಅವನಿಗೂ ಒಳಿತು ಮತ್ತು ಮಿಕ್ಕ ಸೇವಕರಿಗೂ ಸರಿಯಾದ ಎಚ್ಚರಿಕೆಯನ್ನು ಕೊಡುವಂಥದ್ದು. ಇದು ತನ್ನ ಮಕ್ಕಳ ಹೇಳಿಕೆಯಿಂದ ವಿರಾಟನಿಗೆ ತಿಳಿದುಬಂದ ಘಟನೆಯ ವಿವರ. ಹೊಡೆತದಿಂದ ಗಾಯಗೊಂಡು ಕೆಳಗೆ ಬಿದ್ದಿದ್ದ ಆಳನ್ನು ವಿರಾಟ ನೋಡಿದ. ಅವನ ಕಣ್ಣುಗಳು, ಸಾಯಲು ಬೇಕಾದ ಕೊನೆಯ ಘಾತವನ್ನು ಕೊಡಲು ಎದುರುನಿಂತ ಮೃತ್ಯುವನ್ನು ಕಂಡಂತಿತ್ತು. ಅ ಕರಾಳ ದೃಷ್ಟಿಯಲ್ಲಿನ ಭಯವನ್ನು ಗ್ರಹಿಸಿದ. ಆ ನೋವಿನಲ್ಲಿದ್ದು ತಾನು ಬದುಕಿ ಬಂದದ್ದು ನೆನಪಿಗೆ ಬಂತು.

"ಕಟ್ಟುಗಳನ್ನು ಬಿಚ್ಚಿ ಅವನನ್ನು ಬಿಡಿ," ಮಕ್ಕಳಿಗೆ ಹೇಳಿದ., "ದೋಷಕ್ಕೆ ಪ್ರಾಯಶ್ಚಿತ್ತವಾಗಿದೆ."

ಆಳು, ವಿರಾಟನ ಪಾದಗಳ ಮುಂದಿನ ಧೂಳಿಯನ್ನು ಮುತ್ತಿಟ್ಟ. ಮೊಟ್ಟಮೊದಲನೆಯಬಾರಿಗೆ, ಅವನ ಮಕ್ಕಳು ವಿರೋಧ ಭಾವದಿಂದ ದೂರ ಸರಿದರು. ವಿರಾಟ ತನ್ನ ಕೋಣೆಗೆ ಬಂದ. ಅರಿವಿಲ್ಲದಂತೆ ತನ್ನ ಮುಂದಲೆಯನ್ನು ತೊಳೆದು ಒರೆಸಿದ. ತಣ್ಣೀರು ಸೋಕಿದೊಡನೆ ತಾನೇನು ಮಾಡುತ್ತಿರುವೆನೆಂಬ ಅರಿವು ಅವನಿಗೆ ಬಂತು. ಆ ಶಿಲಾಕಾರಾಗೃಹದಿಂದ ಮರಳಿದಮೇಲೆ ಮೊದಲ ಬಾರಿಗೆ ಮತ್ತೊಬ್ಬರ ವಿಧಿಯಲ್ಲಿ ತಾನು ಮಧ್ಯಪ್ರವೇಶಮಾಡಿದ್ದ. ಈ ಆರುವರ್ಷಗಳಲ್ಲಿ ನಿದ್ರೆ ತಲೆದಿಂಬಿನಿಂದ ದೂರ ಉಳಿದದ್ದು ಇದೇ ಮೊದಲು. ಕತ್ತಲಲ್ಲಿ ಹಾಗೆಯೇ ಮೈಚಾಚಿ ಮಲಗಿದ. ಆ ಸೇವಕನ ಭಯಭರಿತವಾದ ವಿಚಿತ್ರ ನೇತ್ರಗಳು ಕಾಣಿಸಿಕೊಂಡವು (ಅಥವಾ, ಆ ಕಣ್ಣುಗಳು ತನ್ನಿಂದ ಹತನಾದ ಅಣ್ಣನದೇ?), ತನ್ನ ಮಕ್ಕಳ ಕ್ರೋಧನೇತ್ರಗಳನ್ನೂ ಕಂಡ, ಮತ್ತೆ ಮತ್ತೆ, ತನ್ನನೇ ಪ್ರಶ್ನಿಸಿಕೊಂಡ. ತನ್ನ ಮಕ್ಕಳು ಆ ಸೇವಕನ ಮೇಲೆ ನ್ಯಾಯವನ್ನು ಧ್ವಂಸಮಾಡಿದರೇ? ಒಂದು ಕ್ಷುದ್ರ ಕರ್ತವ್ಯಲೋಪದ ಕಾರಣಕ್ಕಾಗಿ, ಮರಳಿನಂತೆ ಶುದ್ಧ ಆವರಣದ ತನ್ನ ಗೃಹ, ರಕ್ತದಿಂದ ಒದ್ದೆಯಾಯಿತು. ಒಂದು ಸಣ್ಣ ತಪ್ಪಿಗಾಗಿ, ಜೀವಂತ ಮಾಂಸಲ ದೇಹದ ಮೇಲೆ ಚಾಟಿಯಾಡಿದ್ದು, ಎಂದೋ ತನ್ನ ಬೆತ್ತಲೆ ಬೆನ್ನಿನಮೇಲೆ ಚೇಳುಗಳು ಕುಟುಕಿದಂತೆ ಚರ್ಮದಮೇಲೆ ಬಿದ್ದ ಚಾಟಿಯೇಟಿನ ನೋವಿಗಿಂತಲೂ ಅಧಿಕವೆನಿಸಿತು. ನಿಜ, ಈ ಸಂಜೆ ವೀಕ್ಷಿಸಿದ ದಂಡನೆ ಸಂದಿದ್ದು, ಯಾವನ ದೇಹ ರಾಜಶಾಸನದಂತೆ ಧಣಿಗೆ ಸೇರಿದೆಯೋ ಅಂಥ, ಒಬ್ಬ ಸೇವಕನಿಗೆ; ಜೀವನಪರ್ಯಂತ ಧಣಿಯ ಮನೆಯಲ್ಲಿ ದುಡಿಯಬೇಕಾದ ಆಳಿಗೆ. ಆದರೆ ಈ ರಾಜಶಾಸನ ಭಗವಂತನ ದೃಷ್ಟಿಯಲ್ಲಿ ನ್ಯಾಯಬದ್ಧವೇ? ಒಬ್ಬನ ದೇಹ ಮತ್ತೊಬ್ಬನ

ಸಂಪೂರ್ಣ ಅಧೀನಕ್ಕೆ ಸಲ್ಲುವುದು ಆ ದೇವನ ದೃಷ್ಟಿಯಲ್ಲಿ ಧರ್ಮಬದ್ಧವೇ? ಹಾಗೆ ಶಾಸನಬದ್ಧವಾಗಿ ಸೇವಕನನ್ನು ನಿರ್ದಯವಾಗಿ ಶಿಕ್ಷಿಸಿ ಅವನ ಜೀವನವನ್ನು ನಾಶಮಾಡಿದವನು ಭಗವಂತನ ಮುಂದೆ ಅಪರಾಧವನ್ನೇ ಮಾಡದ ನಿರ್ದೋಷಿಯೇ?

ವಿರಾಟ ಹಾಸಿಗೆಯಿಂದೆದ್ದು, ದೀಪವನ್ನು ಬೆಳಗಿಸಿ, ಈ ಬಗೆಗೆ ಋಷಿಗಳ ಶಾಸ್ತ್ರಗ್ರಂಥಗಳು ಏನುಹೇಳುತ್ತವೆಯೆಂದು ಓದಿ ನೋಡಿದ. ಕಂಡದ್ದೇನು? ಮಾನವರ ಪರಸ್ಪರ ವ್ಯತ್ಯಾಸಗುಣಗಳು, ಜಾತಿ, ಆಚಾರ, ಧರ್ಮಗಳು. ಎಲ್ಲೂ ಪ್ರೀತಿಯ ಅನುಗ್ರಹವನ್ನು ಪಡೆಯಲು ಯಾವ ಭೇದಗಳೂ ಕಂಡುಬರಲಿಲ್ಲ. ಆಸಕ್ತಿಯಿಂದ ಮತ್ತ ಮತ್ತೆ ಆ ಜ್ಞಾನವನ್ನು ಆಸ್ವಾದಿಸಿದ. ಹಿಂದೆಂದೂ ಅವನ ಅಂತರಾತ್ಮ ಎದುರಿನ ಸಮಸ್ಯೆಗೆ ಇಷ್ಟು ಆಳವಾಗಿ ಸ್ಪಂದಿಸಿರಲಿಲ್ಲ. ಹಣತೆಯ ಜ್ವಾಲೆ ದೀರ್ಘವಾಗಿ ಒಮ್ಮೆ ಉರಿದು ನಂದಿತು.

ತನ್ನ ಮತ್ತು ಗೋಡೆಗಳ ನಡುವೆ ಕತ್ತಲೆ ಕವಿದಾಗ, ಅವನು ಕಣ್ಣುಗಳು ಹೊರಳಿ ಹುಡುಕಾಡುತ್ತಿದ್ದುದು ಅವನ ಸ್ವಗೃಹದ ಕೋಣೆಯನ್ನಲ್ಲ. ವರ್ಷಗಳ ಹಿಂದೆ ಬಂದೀಖಾನೆಯಲ್ಲಿ ಆಲೋಚಿಸುತ್ತಿದ್ದಾಗ ಹೊಳೆದ ಅನಿಸಿಕೆ. ಖಚಿತವಾಗಿ ಸ್ವಾತಂತ್ರ್ಯವೆಂಬುದು ಮಾನವರ ಆತ್ಮೀಯ ಹಕ್ಕು. ಅದನ್ನು ಕಸಿದು ಒಬ್ಬನನ್ನು ಸೆರೆಯಲ್ಲಿ ಆಜೀವಪರ್ಯಂತವೋ, ವರ್ಷವೋ ಬಂಧಿಸಿಡುವುದಕ್ಕೆ ಯಾರಿಗೂ ಹಕ್ಕಿಲ್ಲ. ಆದರೂ ವಿರಾಟ ಈ ಆಳನ್ನು ತನ್ನ ಅದೃಶ್ಯ ಮನೋಲೋಕದಲ್ಲಿ ಬಂಧಿಸಿದ್ದ. ಅವನ ಇಷ್ಟಾನಿಷ್ಟಗಳಿಗೆ ಸರಪಳಿಗಳನ್ನು ತೊಡಿಸಿ, ಅವನು ಸ್ವತಂತ್ರವಾಗಿ ಒಂದು ಹೆಜ್ಜೆಯನ್ನೂ ಇಡದಂತೆ ಮಾಡಿದ್ದ. ಎದ್ದು ಕುಳಿತು ಚಿಂತಿಸಿದಾಗ ಎಲ್ಲವೂ ಸ್ಪಷ್ಟವಾಗುತ್ತಾ ಬಂತು. ಈಗಲೂ ತಾನು ದೋಷಪೂರ್ಣನೆನಿಸಿತು. ತನ್ನವರನ್ನು ತನ್ನ ಉದ್ದೇಶ್ಯಗಳ ಹರಿಕಾರರನ್ನಾಗಿಸಿ, ಸೇವಕರನ್ನು ರಾಜಶಾಸನದಂತೆ ನೇಮಿಸಿಕೊಳ್ಳುವುದು ವಿಶ್ವರೂಪಿಯಾದ ಭಗವಂತನ ಒಂದು ರೂಪವಲ್ಲ. ಬಾಗಿ, ಪ್ರಾರ್ಥನೆ ಸಲ್ಲಿಸಿದ :

“ಓ ದೇವ, ಸಹಸ್ರರೂಪಾ, ನನ್ನನ್ನು ಪಾಪಗಳಿಂದ ದೂರಮಾಡಲು, ನಿನ್ನ ಅನಂತರೂಪಗಳಲ್ಲಿ, ಆಕಾರಗಳಲ್ಲಿ ದೂತರನ್ನು ನನ್ನೆಡೆಗೆ ಕಳುಹಿಸಿ ನಿನಗೆ ಹತ್ತಿರವಾಗಿರಲು ಬೇಟೆಯಾಡಿ, ನಿನ್ನ ಅದೃಶ್ಯಪಥದಲ್ಲಿ ನಡೆಸುತ್ತಿರುವೆಯಾ? ಸದಾ ದೂಷಿಸುವ ನನ್ನ ಸೋದರನ ಸಾಯದ ಕಣ್ಣುಗಳಂತೆ, ಎಲ್ಲಂದರಲ್ಲಿ ನನ್ನನ್ನು ಅಡ್ಡಗಿಸಿ, ಯಾರ ನೋಟ ನನ್ನ ದೃಷ್ಟಿಯನ್ನು

ನೋಡುವುದೋ, ಯಾರ ನೋವಿನ ಬಾಧೆಯನ್ನು ನಾನು ಅನುಭವಿಸುವೆನೋ, ಆ ರೀತಿಯಿಂದ ತಿಳಿಯುವಂತೆ, ನೀನು ನನ್ನೆಡೆಗೆ ಕಳುಹಿಸುವ ದೂತರನ್ನು ಗುರುತಿಸುವ ಪ್ರಜ್ಞೆಯನ್ನು ನೀಡಿ, ನನ್ನ ಜೀವನವನ್ನು ಪರಿಶುದ್ಧಮಾಡಿಕೊಂಡು, ಪಾಪವಿಲ್ಲದೆ ಉಸಿರಾಡುವಂತೆ ಮಾಡು."

ವಿರಾಟನ ಮುಖಚರ್ಯೆ ಮತ್ತೆ ಉಲ್ಲಸಿತವಾಗಿತ್ತು. ಶುದ್ಧ ನೇತ್ರಗಳಿಂದ ರಾತ್ರಿಯಾಕಾಶದಲ್ಲಿನ ನಕ್ಷತ್ರಗಳ ಶ್ವೇತ ಶುಭಾಶಯವನ್ನು ಆನಂದಿಸಲು, ಉದಯದ ಮುನ್ನ ಬೀಸುವ ಶುದ್ಧ ವಾಯುವನ್ನು ಉಸಿರಾಡಲು ಹೊರಟ. ಉದ್ಯಾನದಲ್ಲಿ ಸಾಗುತ್ತಾ ಇಳಿದು ನದಿಯತ್ತ ಸಾಗಿದ. ಪೂರ್ವದಲ್ಲಿ ಸೂರ್ಯ ಮೂಡಿಬಂದಾಗ, ಪವಿತ್ರ ಜಲದಲ್ಲಿ ಜಲಕ್ಕನೆ ಮುಳುಗು ಹಾಕಿದ. ನಂತರ ಗೃಹದತ್ತ ನಡೆದುಬಂದು, ಬೆಳಗಿನ ಪ್ರಾರ್ಥನೆಗಾಗಿ ನೆರೆದಿದ್ದ ಮನೆಮಂದಿಯನ್ನು ಸೇರಿಕೊಂಡ.

ಮುಗುಳ್ನಗೆಯಿಂದ ಎಲ್ಲರನ್ನೂ ಮಾತನಾಡಿಸಿ, ಹೆಂಗಸರನ್ನು ಒಳಗಿರುವಂತೆ ಸನ್ನೆಮಾಡಿ, ತನ್ನ ಮಕ್ಕಳನ್ನು ಕುರಿತು ನುಡಿದ:

"ನಿಮಗೆ ತಿಳಿದಂತೆ ಎಷ್ಟೋ ವರ್ಷಗಳಿಂದ ನನ್ನದೊಂದೇ ಧ್ಯೇಯ. ಸತ್ಯ ಮತ್ತು ಧರ್ಮಗಳಿಗೆ ಬದ್ಧನಾಗಿ, ನೆಲದ ಮೇಲೆ ಪಾಪವಿಲ್ಲದೆ ಬದುಕುವುದು. ನಿನ್ನೆಯ ದಿನ ನನ್ನ ಗೃಹದ ನೆಲದ ಮೇಲೆ ರಕ್ತ ಹರಿಯಿತು, ಅದೂ ಜೀವಂತ ಮನುಷ್ಯನ ರಕ್ತ. ನನಗೆ ನೆರಳಿತ್ತ ಈ ಮನೆಯ ರಕ್ತದ ಕಲೆಯನ್ನು ನಾನೀಗ ಅಳಿಸಬೇಕಿದೆ. ಸಣ್ಣತಪ್ಪಿಗಾಗಿ ಅನ್ಯಾಯವಾಗಿ ಶಿಕ್ಷಿಸಲ್ಪಟ್ಟ ನಮ್ಮ ಆ ಸೇವಕ, ಈ ಕ್ಷಣದಿಂದ ಬಿಡುಗಡೆಯಾಗಿ ಅವನಿಷ್ಟಬಂದಕಡೆ ಹೋಗಲಿ. ಈ ನನ್ನ ಕೊನೆಯ ತೀರ್ಪಿನಿಂದ ಅವನು, ನಿಮ್ಮ ಮತ್ತು ನನ್ನ ವಿರುದ್ಧ, ಸಾಕ್ಷಿಯಾಗದಿರಲಿ."

ಅವನ ಮಕ್ಕಳು ಸುಮ್ಮನಿದ್ದರು. ವಿರಾಟನಿಗೆ ಅವರ ಮೌನ ವಿರುದ್ಧಭಾವವನ್ನು ಸಾರಿಹೇಳುತ್ತಿತ್ತು.

"ನೀವೇನನ್ನೂ ಹೇಳುತ್ತಿಲ್ಲವಲ್ಲ, ನಿಮ್ಮ ಅಭಿಪ್ರಾಯವನ್ನು ಕೇಳದೆ ನಾನು ನಿಮ್ಮ ಅನಿಸಿಕೆಗೆ ವಿರುದ್ಧವಾಗಿ ಏನನ್ನೂ ಮಾಡಲಾರೆ"

ಮಗ: ''ತಪ್ಪಿತಸ್ಥ ಸೇವಕನಿಗೆ ಸ್ವಾತಂತ್ರ್ಯವನ್ನು ಕೊಟ್ಟು ಬಿಡುಗಡೆ ಮಾಡು ಎನ್ನುವಿರಾದರೆ ಅವನನ್ನು ಬಹುಮಾನಿಸುತ್ತಿರುವಿರೇ ಹೊರತು ಶಿಕ್ಷಿಸುತ್ತಿಲ್ಲ'' ಹಿರಿಯಮಗ ನುಡಿದ– " ಮನೆಯಲ್ಲಿ

ಎಷ್ಟೋ ಮಂದಿ ಸೇವಕರಿದ್ದಾರೆ. ಒಬ್ಬ ಹೋದರೆ ನಷ್ಟವೇನಿಲ್ಲ. ಆದರೆ, ಒಬ್ಬ ಸೇವಕನಿಗೆ ಸಂದದ್ದು ಉಳಿದವರಿಗೂ ಅನ್ವಯಿಸುತ್ತದೆ. ಇವನನ್ನು ಬಿಡುಗಡೆ ಮಾಡಿದರೆ, ಮಿಕ್ಕವರು ಊಳಿಗದಲ್ಲಿ ನಿಲ್ಲುತ್ತಾರೆಯೇ? ಅವರೂ ಸ್ವತಂತ್ರವನ್ನು ಇಚ್ಛಿಸುವುದಿಲ್ಲವೆ ! "

ವಿ: ''ಅವರು ನನ್ನ ಜೀವನದಿಂದ ಹೊರಗೆ ಹೋಗಬಯಸಿದರೆ, ನಾನು ಅವರನ್ನು ಬಿಡಬೇಕು. ನಾನು ಮತ್ತೊಬ್ಬರ ವಿಧಿಯ ದಾರಿಗೆ ಅಡ್ಡಬರುವುದಿಲ್ಲ. ಹಾಗೆ ಮತ್ತೊಬ್ಬರ ದಾರಿಯನ್ನು ಅಡ್ಡಗಿಸುವವರು ತಪ್ಪಿತಸ್ತರು."

ಮಗ: ''ನೀವು ಶಾಸನದ ಬಿಗಿಯನ್ನು ಕಳೆಯುತ್ತಿದ್ದೀರಿ.", ಎರಡನೆಯ ಮಗ ತುಟಿಬಿಚ್ಚಿದ. ''ಇವರು ನಮ್ಮ ಸ್ವಂತ ಸೇವಕರು, ನಾವಿರುವ ನೆಲೆ ನಮ್ಮದು. ಈ ಮರಗಳು, ಹಣ್ಣುಗಳು ನಮ್ಮವು. ಅವರು ನಮ್ಮನ್ನು ಸೇವಿಸಲು ನಮಗೆ ಸೇರಿದವರು ಹೇಗೋ, ನಾವೂ ಅವರಿಗೆ ಸೇರಿದವರು. ನೀವು ಹೇಳುವ ಸಿದ್ಧಾಂತ ಸಾವಿರಾರು ವರ್ಷಗಳ ಹಿಂದಿನದು. ಜೀತದಾಳು ಎಂದಿಗೂ ತನ್ನ ಬಾಳಿಗೆ ಒಡೆಯನಲ್ಲ. ಅವನು ತನ್ನ ಒಡೆಯನ ಸೇವಕ ಮಾತ್ರ "

ವಿ: ''ನಮಗೆ ಭಗವಂತ ಕೊಟ್ಟ ಒಂದು ಹಕ್ಕಿದೆ. ಅದು ಜೀವಿಸುವ ಹಕ್ಕು. ಅದು ನಮ್ಮೆಲ್ಲರಲ್ಲೂ ಸಮಾನವಾಗಿ ಉಸಿರಾಡುತ್ತಿದೆ. ನಾನು ಅಂಧಕಾರದಲ್ಲಿದ್ದು ನನ್ನ ಪಾಪವನ್ನು ತೊಳೆದುಕೊಳ್ಳಲು ಹೊರಟಂದು ನೀವೆಲ್ಲಾ ಸಮ್ಮತಿಸಿ ಪ್ರೋತ್ಸಾಹಿಸಿದಿರಿ. ಇಷ್ಟು ವರ್ಷಗಳ ಅವಧಿಯಲ್ಲಿ ಜನರ ಜೀವನವನ್ನು ಅಪಹರಿಸಿದ್ದೇನೆ. ಈಗ ದೀರ್ಘವಾಗಿ ಯೋಚಿಸಿ ನೋಡಿದೆ. ಧರ್ಮಾತ್ಮನಾದವನು ಮನುಷ್ಯರನ್ನು ಮೃಗಗಳಂತೆ ನಡೆಸಿಕೊಳ್ಳಬಾರದು. ನಮ್ಮೆಲ್ಲಾ ಸೇವಕರಿಗೂ ಬಿಡುಗಡೆಯನ್ನು ನೀಡಿ ನಾನು ಪಾಪರಹಿತನಾದಂತೆ ಭಾವಿಸುತ್ತೇನೆ."

ತಿರಸ್ಕಾರದಿಂದ ವಿರಾಟನ ಮಕ್ಕಳ ಹುಬ್ಬುಗಳು ಕಪ್ಪಾದವು. ಹಿರಿಯ ಮಗ ಉದ್ಧಟತನದಿಂದ ನುಡಿದ:

"ಬೆಳೆ ಒಣಗದಂತೆ ನೀರು ಹಾಯಿಸುವರು ಯಾರು? ದನಗಳನ್ನು ಮೇಯಿಸಿಕೊಂಡು ಕರೆತರುವರು ಯಾರು? ನಿನ್ನ ಹುಚ್ಚಿಗಾಗಿ ನಾವು ಸೇವಕರಾಗಬೇಕೆ? ನೀನೇ ನಿನ್ನ ಜೀವನದಲ್ಲಿ ಕೈಯೆತ್ತಿ ಒಂದು ಸುತ್ತು ಕೆಲಸಮಾಡಿದವನಲ್ಲ, ಇತರರ ಕಷ್ಟಗಳನ್ನು ಹಂಚಿಕೊಂಡು

ಶ್ರಮಪಟ್ಟವನೂ ಅಲ್ಲ. ನೀನು ಮಲಗುವ ಚಾಪೆಯ ಎಳೆಗಳಲ್ಲಿ ಅದರ ಹಿಂದೆ ದುಡಿದವನ ಬೆವರಿದೆ. ನೀನು ಮಲಗುವಾಗ ಸೇವಕನೊಬ್ಬ ಬೀಸಣಿಗೆ ಹಿಡಿದು ನೀನು ನಿದ್ರಿಸುವವರೆಗೂ ಬೀಸಬೇಕು. ಈಗ, ಹಠಾತ್ತಾಗಿ, ಎಲ್ಲರಿಗೂ ಸ್ವಾತಂತ್ರವನ್ನು ಕೊಟ್ಟು ಕಳಿಸಿಬಿಟ್ಟರೆ, ಉಳಿದವರು ನಾವು, ನಿನ್ನ ರಕ್ತ ಹಂಚಿಕೊಂಡು ಹುಟ್ಟಿದ ಮಕ್ಕಳು. ಕಾರ್ಯಮುಕ್ತರಾಗಿ ಈ ಮೃಗಗಳು ತೊಲಗಿದರೆ, ನೊಗವನ್ನು ಬಿಗಿದು ಎತ್ತುಗಳನ್ನು ಕಟ್ಟಿ ನಾವೇ ಉಳುಮೆಯನ್ನು ಮಾಡಬೇಕೇನು? ಈ ಮೂಕ ಮೃಗಗಳಿಗೆ ಹೇಗೆ ಭಗವಂತ ಜೀವನ ಸ್ವಾತಂತ್ರವನ್ನು ನೀಡಿರುವನೋ ಹಾಗೆಯೇ ನಮ್ಮ ಶ್ವಾಸದಲ್ಲೂ ಅವನೇ ಉಸಿರಾಡುತ್ತಿದ್ದಾನೆ. ನಿಯುಕ್ತವಾದದ್ದನ್ನು ಮುಟ್ಟದಿರು, ಅದೂ ಭಗವಂತನಿಂದ ಬಂದದ್ದೇ. ಯಾವ ಮರವೂ ಹಣ್ಣನ್ನು ಸರಾಗವಾಗಿ ಕೊಡುವುದಿಲ್ಲ. ಬಲವಂತದ ಶಕ್ತಿಯ ಉತ್ಕಟತೆಯಿಂದಲೇ ಬೆಳೆಯುವ ಕ್ರಿಯೆ ನಡೆಯುವುದು. ಜಗತ್ತಿನ ನಿಯಮವೆಂದರೆ ಬಲ, ಪರಾಕ್ರಮ. ಅದರಿಂದ ನಾವು ತಪ್ಪಿಸಿಕೊಳ್ಳಲಾಗದು"

ವಿ: ’’ಬಲ ಕೆಲವುಸಲ ಸರಿಯೆನಿಸಿದರೂ, ನಾನು ಅದರಿಂದ ತಪ್ಪಿಸಿಕೊಳ್ಳುತ್ತೇನೆ. ನನ್ನ ಜೀವನವನ್ನು ಧರ್ಮಮಾರ್ಗದಲ್ಲಿ ಕಳೆಯುವುದೇ ನನ್ನ ಧ್ಯೇಯ "

ಮಕ್ಕಳ ಕಣ್ಣುಗಳು ಮಿಂಚಿ, ಉಕ್ಕಿದ ಕೋಪವನ್ನು ಅವರು ಅಣಗಿಸಿಕೊಳ್ಳಲಾಗಲಿಲ್ಲ. ಹಿರಿಯವ ನುಡಿದ:

"ಯಾರ ಸ್ವೇಚ್ಛೆಗೂ ತಡೆಯೊಡ್ಡದಿರುವುದೇ ನಿಮ್ಮ ಅಭಿಲಾಷೆಯೆಂದು ಹೇಳಿದಿರಿ;. ನಿಮ್ಮ ಸೇವಕರಿಗೆ ಆಜ್ಞಾಪಿಸುವುದೂ ಪಾಪವೆನ್ನುತ್ತೀರಿ, ನಮ್ಮನ್ನು ಮಾತ್ರ ಇದನ್ನು ಮಾಡಿ, ಅದನ್ನು ಮಾಡಿ ಎಂದು ನಿರ್ಬಂಧಿಸುತ್ತಿದ್ದೀರಿ. ದೈವ ಮತ್ತು ಮಾನವಧರ್ಮವನ್ನು ಪಾಲಿಸುವ ನಿಮ್ಮ ವಿಧಾನವೇನು?"

ವಿರಾಟ ಸ್ವಲ್ಪಕಾಲ ಮೌನವಾದ. ಕಣ್ಣೇರಿಸಿ ಅವರ ದೃಷ್ಟಿಯಲ್ಲಿನ ಆಶೆ, ಲೋಭಗಳ ಜ್ವಾಲೆಗಳನ್ನು ಕಂಡು ಆತ್ಮ ಭಾರವೆನಿಸಿತು. ಸಮಾಧಾನದಿಂದ ನುಡಿದ :

"ಒಳ್ಳೆಯ ಪಾಠವನ್ನೇ ನೀನು ಕಲಿಸಿದೆ. ನಿಮ್ಮನ್ನು ಯಾವರೀತಿಯಲ್ಲೂ ನಿರ್ಬಂಧಿಸುವ ಇಚ್ಛೆ ನನಗಿಲ್ಲ. ಈ ಗೃಹದೊಡನೆ ಇಲ್ಲಿರುವ ಸಮಸ್ತವನ್ನೂ ತೆಗೆದುಕೊಳ್ಳಿ. ನಿಮಗೆ ತೋಚಿದ

ರೀತಿಯಲ್ಲಿ ಇವನ್ನು ಹಂಚಿಕೊಳ್ಳಿ. ಈ ವಸ್ತುಗಳ ಮತ್ತು ಅವುಗಳೊಡನೆ ಸಾಗುವ ಪಾಪದಲ್ಲಿ ನನಗೆ ಯಾವ ಭಾಗವೂ ಬೇಡ. ನೀನು ಸತ್ಯವನ್ನೇ ನುಡಿದಿದ್ದೀಯೆ. ಆಜ್ಞಾಪಿಸುವವನು ಇತರರ ಸ್ವತಂತ್ರವನ್ನು ಕಸಿಯುತ್ತಾನೆ. ಅದಕ್ಕಿಂತಲೂ ಹೀನವಾಗಿ, ಆ ಕೃತ್ಯ, ತನ್ನ ಆತ್ಮವನ್ನೇ ಆಳನ್ನಾಗಿಸಿಕೊಂಡಂತೆ. ಪಾಪಮುಕ್ತ ಜೀವನವನ್ನು ಬಯಸುವವರು, ಯಾವ ಮನೆ –ಆಸ್ತಿಗಳ ಅಧಿಕಾರ ಅಥವಾ ನಿರ್ವಹಣೆಯ ಜವಾಬ್ದಾರಿಯನ್ನೂ ವಹಿಸಬಾರದು. ಮತ್ತೊಬ್ಬರ ವಿಧಿ–ಗತಿಗಳಮೇಲೆ ಯಾವ ಪ್ರಭಾವವನ್ನೂ ಬೀರಬಾರದು. ಇತರರ ಊಳಿಗದಿಂದ ಅವನ ಹೊಟ್ಟೆ ತುಂಬಬಾರದು. ಇತರರು ಬೆವರು ಹರಿಸಿ ಒದಗಿಸಿ ನಿರಾಯಾಸವಾಗಿ ದೊರತ ತನ್ನ ಅಗತ್ಯಗಳನ್ನು ಅವನು ಭೋಗಿಸಬಾರದು. ಹೆಣ್ಣಿನೊಡನಾಟದ ಮತ್ತು ಇತರ ಇಂದ್ರಿಯ ಭೋಗಗಳ ಜಡ ಸಂತೃಪ್ತಿಯಿಂದ ಅವನು ದೂರವಾಗಿರಬೇಕು. ಏಕಾಂಗಿಯಾಗಿರುವವನೇ ದೈವದೊಡನೆ ಜೀವಿಸಬಲ್ಲ. ನಿರ್ಗತಿಯ ಬಡತನದಲ್ಲಿಯೇ ಭಗವಂತ ಪೂರ್ಣನಾಗಿರುತ್ತಾನೆ. ಪಾಪಮುಕ್ತಜೀವನವನ್ನೇ ನಾನು ಬಯಸುವುದರಿಂದ, ಈ ನನ್ನ ಪ್ರದೇಶದಲ್ಲಿರುವುದಕ್ಕಿಂತ, ಆ ಕಾಣದ ಸಂಪತ್ತಿನ ಸನಿಹದಲ್ಲಿರುವುದೇ ನನಗೆ ಪ್ರಿಯವಾದದ್ದು. ಗೃಹಸಂಪತ್ತನ್ನು ತೆಗೆದುಕೊಂಡು ಎಲ್ಲವನ್ನೂ ಹಂಚಿಕೊಳ್ಳಿ.

ವಿರಾಟ ಅತ್ತ ತಿರುಗಿ ಮರೆಯಾದ. ಅವನ ಮಕ್ಕಳೂ ಆಶ್ಚರ್ಯಪಟ್ಟರು. ತೃಪ್ತಿಯಾದ ಲೋಭದ ಸಿಹಿಯನ್ನು ಅವರ ದೇಹ ಅನುಭವಿಸಿದರೂ, ಅವರ ಆತ್ಮ ಅವಮಾನದಿಂದ ತಗ್ಗಿತು.

ಇರುಳು ಕವಿಯಿತು. ವಿರಾಟ ದಾರಿಯನ್ನು ಹಿಡಿಯಲು ಸಿದ್ಧನಾಗಿದ್ದ. ದಂಡ , ಭಿಕ್ಷಾಪಾತ್ರೆ, ಕೆಲಸಕ್ಕೊಂದು ಕೊಡಲಿ, ಹಾದಿಯ ಪಶುಗಳಿಗೊಂದಿಷ್ಟು ಆಹಾರ, ಭೂರ್ಜ್ವಪತ್ರಗಳು ಇಷ್ಟನ್ನು ತೆಗೆದುಕೊಂಡು, ಮಂಡಿಯವರೆಗಿನ ನಿಲುವಂಗಿಯನ್ನು ಧರಿಸಿ, ಪತ್ನಿ, ಮಕ್ಕಳು, ಪರಿವಾರ ಯಾರಿಗೂ ಹೇಳದೆ, ಮನೆಯಿಂದ ಹೊರ ಹೊರಟ.

ರಾತ್ರಿಯೆಲ್ಲಾ ನಡೆದು, ಜ್ಞಾನೋದಯವಾದ ಆ ಭಯಂಕರ ದಿನದಂದು ತನ್ನ ಖಡ್ಗವನ್ನು ಯಾವ ನದಿಯಲ್ಲಿ ಮುಳಿಗಿಸಿದ್ದನೋ ಅಲ್ಲಿಗೆ ಬಂದು, ಕಾಲ್ಗಡದಮೂಲಕ ಹೊಳೆಯನ್ನು ದಾಟಿ ಎದುರಿನ

ದಡವನ್ನು ತಲುಪಿ ಮುನ್ನಡೆದ. ಯಾರೂ ಇಲ್ಲದ, ಉಳುಮೆಯಿಂದ ನೆಲ ಒಡೆಯದ ಆ ಪ್ರದೇಶದಲ್ಲಿ ಹಾಗೇ ಸಾಗಿದ.

ಮುಂಜಾನೆ, ಸಿಡಿಲುಬಡಿದು ನೆಲಕ್ಕುರುಳಿದ ಒಂದು ಹಳೆಯ ಮಾವಿನಮರದ ಬಳಿಗೆ ಬಂದಿದ್ದ. ಆ ಬೆಂಕಿಯಿಂದ ಮರಗಳು ಸುಟ್ಟು, ಕಾಡಿನಲ್ಲಿ ಮುಂದೆಸಾಗಲು ಒಂದಷ್ಟು ದಾರಿಯಿತ್ತು. ಅಲ್ಲಿ ಹೊಳೆಯ ಒಂದು ಭಾಗ ಕಮಾನಿನಾಕಾರದಲ್ಲಿ ಮೃದುವಾಗಿ ಹರಿಯುತ್ತಾ, ಅನೇಕ ಪಕ್ಷಿಗಳು ನಿರ್ಭಯವಾಗಿ ಜಲಪಾನಮಾಡುತ್ತಿದ್ದವು. ಮುಂದೆ ಹೊಳೆಯ ಜಲಸಮೃದ್ಧಿ. ಹಿಂದೆ ಕಾಡಿನ ಮರಗಳ ಛಾಯೆ. ನೆಲದ ಮೇಲೆ ಸಿಡಿಲಿನ ಆಕ್ರಮಣದಿಂದ ಸಿಡಿದ ಮರದ ರೆಂಬೆ ಚೂರುಗಳು ನೆಲದಾಳದ ಸುಗಂಧವನ್ನು ಸೂಸುತ್ತಿದ್ದವು. ವನದ ಈ ನಿರ್ಜನ ಪ್ರಶಾಂತ ಪ್ರದೇಶವನ್ನು ನೋಡಿ, ಇಲ್ಲೇ ಕುಟೀರವೊದನ್ನು ಕಟ್ಟಲು ನಿರ್ಧರಿಸಿದ. ತನ್ನ ಜನರಿಂದ, ಪಾಪಗಳಿಂದ ದೂರನಾಗಿ, ಶೇಷಜೀವನವವನ್ನು ಇಲ್ಲೇ ಧ್ಯಾನದಲ್ಲಿ ಕಳೆಯಬೇಕೆಂದು ನಿರ್ಣಯಿಸಿದ.

ಇಂಥ ಕೆಲಸಗಳ ಅನುಭವವಿಲ್ಲದ ಅವನ ಕೈಗಳಿಗೆ ಕುಟೀರ ನಿರ್ಮಾಣಕಾರ್ಯಕ್ಕೆ ಐದು ದಿನಗಳು ಹಿಡಿದವು. ಕೆಲಸ ಮುಗಿದರೂ ಮಣ್ಣಿನಲ್ಲೇ ಮುಳುಗೇಳುತ್ತಿದ್ದ. ಆಹಾರಕ್ಕೆ ಹಣ್ಣುಗಳನ್ನು ಹುಡುಕಬೇಕು. ಆಕ್ರಮಿಸಲು ಮುಂಬರುತ್ತಿದ್ದ ಅರಣ್ಯವನ್ನತ್ತ ಸರಿಸಿ ಕುಟೀರವನ್ನು ಪ್ರೇತ್ಯೇಕವಾಗಿಸಲು ಬಹಳ ಪರಿಶ್ರಮವನ್ನು ಪಡಬೇಕಾಯಿತು. ರಾತ್ರಿಯ ವೇಳೆ ಸುಳಿದಾಡುವ ಹಸಿದ ಹುಲಿಗಳಿಂದ ರಕ್ಷಿಸಿಕೊಳ್ಳಲು ಬಲವಾದ ಬೇಲಿಯನ್ನು ನಿರ್ಮಿಸಬೇಕಾಯಿತು. ಇಷ್ಟೆಲ್ಲಾ ನಡೆಯುತ್ತಿದ್ದರೂ ಯಾವ ಮನುಜರ ಪ್ರವೇಶವೂ ಅವನ ಕಾರ್ಯವನ್ನಾಗಲಿ, ನೆಮ್ಮದಿಯನ್ನಾಗಲೀ ಭಂಗಗೊಳಿಸಲಿಲ್ಲ. ನದಿಯ ನೀರು ಸಾಗುವಂತೆ ದಿನಗಳು ಶಾಂತವಾಗಿ ಸಂದು, ಋತಸ್ಥಿತ ವಸಂತನಲ್ಲಿ ಮಿಂದೆದ್ದು ಹೊಸದಾದವು.

ಹೊಸಬನ ಸದ್ದಿಲ್ಲದ ಆಗಮನ ಮತ್ತು ಅವನ ಕಾರ್ಯಗಳು ಅಲ್ಲಿನ ಪಕ್ಷಿಸಂಕುಲಕ್ಕೆ ಯಾವ ಭೀತಿಯನ್ನೂ ತರಲಿಲ್ಲ. ಅವನ ಕುಟೀರದ ಮೇಲೆಯೇ ಕೆಲವು ಹಕ್ಕಿಗಳು ತಮ್ಮ ಗೂಡನ್ನು ಕಟ್ಟಿಕೊಂಡವು. ವಿರಾಟ ಅಲ್ಲಿರಿಸಿದ್ದ ಹಣ್ಣು ಮತ್ತು ವನಪುಷ್ಪಗಳ ಬೀಜಗಳನ್ನು ಅವು ಹಾಯಾಗಿ ತಿಂದುಕೊಂಡಿದ್ದವು. ಸ್ನೇಹ ಹೆಚ್ಚಾದಂತೆಲ್ಲ ವಿರಾಟ ಸನ್ನೆಮಾಡಿ ಕರೆದೊಡನೆ, ತಾಳೆಯ ಮರಗಳ ಮೇಲಿನ ತಮ್ಮ ಗೂಡುಗಳಿಂದ ಅವನ ಕುಟೀರಕ್ಕೆ ಹಾರಿ ಬರುತ್ತಿದ್ದವು. ಆ ಪಕ್ಷಿಗಳು,

ಆಟವಾಡುತ್ತಾ ತಮ್ಮನ್ನು ಎತ್ತಿಳಿಸಿ ಹಾರಿಬಿಡುವ ವಿರಾಟನೊಡನೆ ನಿರ್ಭಯವಾಗಿದ್ದವು. ವಿರಾಟ ಕಾಡಿನಲ್ಲೊಂದು ದಿನ ಸಾಗುತ್ತಿದ್ದಾಗ, ಕಾಲ್ಮುರಿದು ಬಿದ್ದು ಮಗುವಿನಂತೆ ಚೀರುತ್ತಿದ್ದ ಒಂದು ಕೋತಿಯ ಮರಿ ಕಂಡಿತು. ಅದನ್ನು ಮೆಲ್ಲನೆ ಎತ್ತಿಕೊಂಡು ತನ್ನ ಕುಟೀರಕ್ಕೆ ತಂದ. ಅದು ಚೇತರಿಸಿಕೊಂಡಮೇಲೆ ಅದಕ್ಕೆ ತರಬೇತಿಯನ್ನೂ ಕೊಟ್ಟ. ವಿಧೇಯತೆಯಿಂದ ಅನುಕರಿಸುತ್ತಾ ಆ ಮಂಗ ಅವನನ್ನು ಸೇವಿಸಿತು. ಆ ರೀತಿಯಿಂದ ಸೌಮ್ಯ ಮೃಗಗಳೊಡನೆ ಜೀವಿಸುತ್ತಾ ಅವು ಮಾನವರಿಗಿಂತ ನಿಕೃಷ್ಟವೇನಲ್ಲವೆನಿಸಿತು. ಅವುಗಳಲ್ಲಿನ ವೇಗ, ಕ್ರಿಯೆ, ವಿಶ್ರಾಂತಿಯ ಗುಣಗಳನ್ನು ವಿರಾಟ ಮರೆಯಲಿಲ್ಲ. ಮೊಸಳೆಗಳು ಒಂದನ್ನೊಂದು ಕಚ್ಚಿ ಹಿಡಿದು ಕ್ರೋಧದಿಂದ ಆಕ್ರಮಿಸುವುದನ್ನು, ಹಕ್ಕಿಗಳು ವೇಗದಿಂದ ನದಿಯ ನೀರಿಗಿಳಿದು ಮೀನನ್ನು ಹೆಕ್ಕಿಕೊಂಡು ಹಾರುವುದನ್ನು, ಹಾವುಗಳು ಹಕ್ಕಿಗಳನ್ನು ಸುತ್ತಿ ಹಿಂಡಿಹಾಕುವುದನ್ನು ಗಮನಿಸಿದ. ಆದರೂ, ಈ ವೃದ್ಧಿಸುತ್ತಿರುವ ವಿನಾಶ ಮತ್ತು ಸ್ವತಂತ್ರ ಜಗತ್ತಿನ ಬವಣೆಗಳನ್ನು ನಿರಪರಾಧ ಭಾವದಿಂದ ಸಾಕ್ಷಿಮಾತ್ರನಾಗಿ ನೋಡುವುದು ಹಿತವಾಗಿತ್ತು.

ಒಂದು ವರ್ಷ ಕಳೆದು ಹಲವು ಮಾಸಗಳು ಸಂದರೂ ಒಬ್ಬ ಮನುಷ್ಯನ ಮುಖವೂ ಅತ್ತ ಸುಳಿದಿರಲಿಲ್ಲ. ಒಂದು ದಿನ ಅದೂ ಸಂಭವಿಸಿತು. ಆನೆಯ ಜಾಡನ್ನು ಹಿಡಿದು ಬಂದ ಬೇಡನೊಬ್ಬ ಜಲಪಾನಕ್ಕಾಗಿ ಎದುರುದಡದಲ್ಲಿ ಆನೆ ಬಂದಿದ್ದ ತಾಣಕ್ಕೆ ಬಂದ. ಒಂದು ಅದ್ಭುತ ದೃಶ್ಯ ಅವನ ನೋಟವನ್ನು ಸೆಳೆಯಿತು. ಸಂಜೆಯ ಹೊಳೆವ ಹೊಂಬಣ್ಣದಲ್ಲಿ, ಚಿಕ್ಕ ಕುಟೀರದ ಮುಂದೆ ಕುಳಿತ ಬಿಳಿಯ ಗಡ್ಡದ ಋಷಿಯೊಬ್ಬನನ್ನು ಕಂಡ. ಅವನ ತಲೆಯಮೇಲೆ ಹಕ್ಕಿಗಳು ಕುಳಿತಿದ್ದವು. ಕೋತಿಯೊಂದು ಮುಂದೆ ಕುಳಿತು ಅವನಿಗಾಗಿ ಕಲ್ಲಿನಿಂದ ಹಣ್ಣಿನ ಬೀಜಗಳನ್ನೊಡೆದು ಬಿಡಿಸುತ್ತಿತ್ತು. ಆದರೆ, ಅವನು ತನ್ನೆದುರಿನ ಮರಗಳ ಅಗ್ರಭಾಗದಲ್ಲಿ ನಾನಾ ವರ್ಣದ ಗಿಳಿಗಳು ಆಟವಾಡುತ್ತಿರುವುದನ್ನು ನೋಡುತ್ತಿದ್ದ. ಅವನು ಕೈಸನ್ನೆಯಿಂದ ಕರೆದೊಡನೆ ಅವು ಪಟಪಟನೆ ರೆಕ್ಕೆಗಳನ್ನಾಡಿಸಿ ಕೆಳಗಿಳಿಯುವ ಚೆನ್ನದ ಮೋಡದಂತೆ ಅವನ ಕೈಗಳಮೇಲೆ ಬಂದು ಕುಳಿತವು. ಬೇಡ, ಹಾಗೆಯೇ ನೋಡುತ್ತಿದ್ದು, ಆ ಋಷಿಯನ್ನು ಕುರಿತ ಅವನ ಭಾವ ಹೀಗೆ ನುಡಿಯಿತು: ”ಮೃಗಗಳು ಇವನೊಡನೆ ಮನುಷ್ಯ ಭಾಷೆಯಲ್ಲಿ ಮಾತನಾಡುತ್ತವೆ, ಇವನ ಪಾದಗಳಡಿ ಪುಷ್ಪಗಳು ಅರಳುತ್ತವೆ, ಇವನು ತನ್ನ ತುಟಿಗಳಿಂದ ನಕ್ಷತ್ರಗಳನ್ನು ಹೂಗಳನ್ನು ಬಿಡಿಸುವಂತೆ ಕೀಳಬಲ್ಲ. ತನ್ನ ನಿಶ್ವಾಸದಿಂದ ಚಂದ್ರನನ್ನೂ ದೂರಕ್ಕೆ ಊದಿಬಿಡಬಲ್ಲ.". ತನ್ನ

ಬೇಟೆಯನ್ನೂ, ಬಾಯಾರಿಕೆಯನ್ನೂ ಮರೆತು ತಾನು ಕಂಡ ಅದ್ಭುತವನ್ನು ತಿಳಿಸಲು ತನ್ನ ಪಾಳ್ಯಕ್ಕೆ ಓಡಿದ.

ಮರುದಿನ ಬೆಳಿಗ್ಗೆ ಸುದ್ದಿಮಲ್ಲರು ಆ ಅದ್ಭುತವನ್ನು ಕಾಣಲು ಹೊಳೆಯ ಆ ಬದಿಯಲ್ಲಿ ನೆರೆದರು. ವಿಸ್ಮಯದರ್ಶನಾಕಾಂಕ್ಷಿಗಳು ಬಂದು ನೆರೆದು, ಕೊನೆಗೊಬ್ಬ ಅವನು ವಿರಾಟನೆಂದು ಗುರುತಿಸಿದ. ಅಲೆಯಲೆಯಾಗಿ ಸಾಗಿದ ಈ ಸುದ್ದಿ , ನಿಷ್ಠಾವಂತನಾದ ತನ್ನ ಸಹಾಯಕನ ಅಗಲಿಕೆಯಿಂದ ಖಿನ್ನನಾಗಿದ್ದ ಮಹಾರಾಜನ ಕಿವಿಯನ್ನೂ ಮುಟ್ಟಿತು. ನಾಲ್ಕುಪಟ್ಟು ದೊಡ್ಡದಾದ, ಏಳುಮಂದಿ ಹುಟ್ಟುಹಾಕುವಂಥ ಒಂದು ದೋಣಿಯನ್ನು ಸಿದ್ಧಪಡಿಸಿರೆಂದು ರಾಜನು ಆಜ್ಞಾಪಿಸಿದ. ಬಲೋತ್ಸಾಹದಿಂದ ನಡೆಸಿ ಸಾಗಿದ ನೌಕೆ ವಿರಾಟನ ಕುಟೀರ ಪ್ರದೇಶವನ್ನು ಸೇರಿತು. ನೌಕೆಯನ್ನಿಳಿದು ಕುಟೀರದವರೆಗೆ ಸಾಗಲು ಮಹಾರಾಜನಿಗಾಗಿ ನೆಲಗಂಬಳಿಯನ್ನು ಹಾಸಿದರು. ಕಳೆದ ಹದಿನೆಂಟು ತಿಂಗಳಿಂದ ವಿರಾಟ ಮಾನವಧ್ವನಿಯನ್ನು ಕೇಳಿರಲಿಲ್ಲ. ರಾಜನಿಗೆ ಸೇವಕ ಸಲ್ಲಿಸಬೇಕಾದ ಪಾದಾಭಿವಂದನೆಯನ್ನು ಮರೆತು ತನ್ನ ಅತಿಥಿಯನ್ನು ಸಂಕೋಚ, –ಗಾಂಭೀರ್ಯ ಬೆರೆತ ಮರ್ಯಾದೆಯಿಂದ ಅಹ್ವಾನಿಸಿ ನುಡಿದ:

"ಮಹಾರಾಜ ನಿನ್ನ ಆಗಮನದಿಂದ ಅನುಗ್ರಹೀತನಾದೆ"

ರಾಜ ಅವನನ್ನು ಆಲಿಂಗಿಸಿದ.

‘‘ವರ್ಷಗಳ ಕಾಲದಿಂದ ಪರಿಪೂರ್ಣತೆಯೆಡೆಗೆ ಸಾಗುತ್ತಿರುವ ನಿನ್ನ ಅಭಿವೃದ್ಧಿಯನ್ನು ಗಮನಿಸುತ್ತಿದ್ದೇನೆ. ಧರ್ಮವೇ ನರಾಕಾರದಲ್ಲಿರುವ ಅದ್ಭುತವನ್ನು ನೋಡಿ, ಧಾರ್ಮಿಕವಾಗಿ ಜೀವಿಸುವುದು ಹೇಗೆಂದು ತಿಳಿದು ಕಲಿಯಲು ನಾನಿಲ್ಲಿಗೆ ಬಂದಿದ್ದೇನೆ."

ವಿರಾಟ ವಂದಿಸಿದ.

‘‘ನನ್ನ ತಿಳಿವಿಷ್ಟೆ. ಇತರರೊಂದಿಗೆ ತನಗೊಂದಿಷ್ಟೂ ಪಾಪವಂಟದೆ ಬದುಕುವುದು ಹೇಗೆಂದು ಪಡೆದ ಜ್ಞಾನವನ್ನು ಮರೆಯುವುದು. ಏಕಾಂಗಿಯ ಉಪದೇಶ ತನಗೆ ಮಾತ್ರವಷ್ಟೆ! ಈಗ ನಾನು ಮಾಡುತ್ತಿರುವುದೇ ವಿವೇಕವೆಂದು ಹೇಳಲಾರೆ. ನಾನು ಅನುಭವಿಸುತ್ತಿರುವುದೇ ಆನಂದದ ಪರಮಾವಧಿಯೆಂದು ಹೇಳಲಾರೆ. ಇತರರಿಗೆ ಸಲಹೆ ಮಾಡಲು, ಉಪದೇಶವನ್ನು ನೀಡಲು

ನನ್ನಲ್ಲೇನಿಲ್ಲ. ಏಕಾಂಗಿಯ ಸ್ವಾಂತವಿವೇಕವು, ಜಗತ್ತಿನ ವಿವೇಕಕ್ಕಿಂತಲೂ ಬೇರೆಯಾದದ್ದು. ಧ್ಯಾನದ ನಿಯಮವು ಕರ್ಮದ ನಿಯಮಕ್ಕಿಂತ ಅನ್ಯವಾದದ್ದು."

‘‘ಆದರೇನು, ಧಾರ್ಮಿಕನೊಬ್ಬ ಹೇಗೆ ಬಾಳುತ್ತಿದ್ದಾನೆಂದು ನೋಡುವುದೇ ಒಂದು ಮಹತ್ತಾದುದನ್ನು ಕಲಿತಂತಲ್ಲವೇ? ಎಂದು ರಾಜ ಮರುನುಡಿದ ’’ನಿನ್ನ ಪ್ರಶಾಂತ ಮುಗ್ಧ ಮುಖವನ್ನು ನೋಡಿದ ಕ್ಷಣದಲ್ಲಿಯೇ ನನ್ನಲ್ಲಿ ಸಂತೋಷ ತುಂಬಿಹೋಗಿದೆ. ಮತ್ತೇನನ್ನೂ ನಾನು ಕೇಳುವುದಿಲ್ಲ, ನನ್ನ ರಾಜ್ಯದ ಬಗೆಗೆ ನೆರವೇರಿಸಬೇಕಾದ ನಿನ್ನದೇನಾದರೂ ಆಶಯವಿದೆಯೇ? ನಿನ್ನವರಿಗೆ ತಿಳಿಸಬೇಕಾದ ವಿಷಯವೇನಾದರೂ ಉಂಟೆ?"

"ನನ್ನದೆಂಬುದೇನೂ ಇಲ್ಲ, ಮಹಾರಾಜ; ಅಥವಾ, ಈ ಭೂಮಿಯಮೇಲಿನದೆಲ್ಲವೂ ನನ್ನದೇ ಎಂದೇನು. ಮನೆಗಳ ಸಾಲಿನಲ್ಲಿ ನನ್ನದೊಂದು ಮನೆಯಿತ್ತು, ಇತರರಂತೆ ನನಗೂ ಮಕ್ಕಳಿದ್ದರು ಎಂಬುದನ್ನು ಮರೆತಿದ್ದೇನೆ. ಅನಿಕೇತನನಿಗೆ ವಿಶ್ವವೇ ಗೃಹ. ಬಾಳಿನ ಕಟ್ಟುಗಳನ್ನು ಬಿಚ್ಚಿ ಸಡಿಲಮಾಡಿಕೊಂಡವನಿಗೆ ಎಲ್ಲ ಜೀವಗಳೂ ತನ್ನ ಭಾಗವೇ. ಮುಗ್ಧ ಮನಸ್ಸಿಗೆ ಮಾತ್ರ ಶಾಂತಿಯ ಅನುಗ್ರಹ ಅಖಂಡವಾಗಿರುತ್ತದೆ. ನೆಲದ ಮೇಲಿನ ನನ್ನ ಬಾಳು ಪಾಪಮುಕ್ತವಾಗಿರಬೇಕು. ಅದೊಂದೇ ನನ್ನ ಬಯಕೆ"

"ಹಾಗಿದ್ದರೆ ಸರಿ, ನಾನು ಹೊರಡುತ್ತೇನೆ. ನಿನ್ನ ಭಕ್ತಿಯ ಪ್ರವಾಹದಲ್ಲಿ ನನ್ನ ನೆನಪೂ ಇರಲಿ."

‘‘ಭಗವಂತನ ಸ್ಮರಣೆಯಲ್ಲೇ ನಾನಿರುವೆ. ಭಗವಂತನ ಭಾಗವಾಗಿ, ಅವನ ಉಸಿರಿನಲ್ಲೇ ಉಸಿರಾಡುವ ನೀನೂ, ಈ ಭೂಮಂಡಲವೂ ಎಲ್ಲವೂ ಅವನ ಸ್ಮರಣೆಯಲ್ಲಿ ಸೇರಿದೆ."

ಮಹಾರಾಜನ ನೌಕೆ ಹೊಳೆಯಲ್ಲಿ ಹರಿದು ದಾಟಿಹೋಯಿತು. ಹಲವಾರು ಮಾಸಗಳು ಸಂದಮೇಲೆ ಒಂದು ದಿನ ತಪಸ್ವಿಗೆ ಮತ್ತೆ, ಮನುಷ್ಯನ ಧ್ವನಿಯೊಂದು ಕೇಳಿತು.

ಮತ್ತೊಮ್ಮೆ ವಿರಾಟನ ಖ್ಯಾತಿಗೆ ರೆಕ್ಕೆಗಳು ಮೂಡಿ ಹಂಸದಂತೆ ಭೂಭಾಗದಲ್ಲೆಲ್ಲಾ ಹಾರಿ ಹರಿದಾಡಿತು. ಸುದೂರದ ನಗರಗಳು, ಗ್ರಾಮಗಳು, ಕಡಲ ತಡಿಯಲ್ಲೂ, ಮನುಜರಿರುವ ಎಲ್ಲಡೆಯೂ ’’ಅಲ್ಲೊಬ್ಬ ಋಷಿಯಿರುವನಂತೆ, ಅವನು ತನ್ನ ಮನೆ, ಮಂದಿ, ಆಸ್ತಿಯೆಲ್ಲವನ್ನೂ ತೊರೆದು, ಕಾಡಿನಲ್ಲಿನ ಕುಟೀರದಲ್ಲಿ ಧ್ಯಾನಮಾಡುತ್ತಿರುವನಂತೆ,’’ ಎಂಬ ಸುದ್ದಿ ಹರಡಿ ವಿರಾಟನಿಗೆ

”’’**ನಿಸ್ಸಂಗಿಯಾದ ನಕ್ಷತ್ರ**’’”ವೆಂಬ ನಾಲ್ಕನೆಯ ಬಿರುದೂ ಸಂದಿತು. ದೇಗುಲಗಳಲ್ಲೆಲ್ಲಾ ಈ ಋಷಿಯ ಪ್ರಶಂಸೆಯ ವಿಧಿ ನೆಲೆಗೊಂಡಿತು. ಮಹಾರಾಜ ತನ್ನ ಸೇವಕಜನರೊಡನೆ ಸಂಭಾಷಿಸುವಾಗಲೂ ವಿರಾಟನ ಪ್ರಶಂಸೆ ನಡೆಯುತ್ತಿತ್ತು. ನ್ಯಾಯಾಧೀಶರು ತೀರ್ಪನ್ನು ನೀಡುವಾಗ ”ನನ್ನ ಈ ನುಡಿಗಳು ಭಗವಂತನಿಗಾಗಿಯೇ ಜೀವಿಸುತ್ತಿರುವ, ಸರ್ವಜ್ಞನಾದ ವಿರಾಟನ ನುಡಿಗಳಂತೆ ಧರ್ಮಬದ್ಧವಾಗಿದೆ ಎಂದು ಭಾವಿಸುತ್ತೇನೆ,” ಎಂದು ನುಡಿಯುತ್ತಿದ್ದರು.

ವರ್ಷಗಳು ಸಂದಂತೆ, ಮತ್ತೆ ಮತ್ತೆ, ಅನುಕರಣೀಯವಾಗುತ್ತಾ,”ಒಬ್ಬ ವ್ಯಕ್ತಿಯ ಕೃತ್ಯಗಳ ಅಧಾರ್ಮಿಕತೆ ತನ್ನ ಅರಿವಿಗೆ ಬಂದು, ಜೀವನದಲ್ಲಿನ ವ್ಯಕ್ತಿ,ವಿಷಯಗಳ ನಶ್ವರತೆಯನ್ನು ತಿಳಿದು ವಿರಕ್ತನಾಗಿ, ತನ್ನ ಸೊತ್ತು,ಆರ್ಜಿತಗಳನ್ನು ತ್ಯಾಗಮಾಡಿ, ಮನೆಮಂದಿಯನ್ನು ಬಿಟ್ಟು, ಕಾಡಿನ ಹಾದಿಯನ್ನು ಹಿಡಿದು, ವಿರಾಟನಂತೆ ತಾನೂ ಒಂದು ಕುಟೀರವನ್ನು ಕಟ್ಟಿಕೂಂಡು ಭಗವಂತನ ಸೇವೆಯಲ್ಲಿ ನಿರತನಾಗುವ” ಪರಿಪಾಟ ಹುಟ್ಟಿಕೊಂಡಿತು. ಭೂಮಿಯ ಬಲಿಷ್ಟ ಬಂಧನವೆಂದರೆ, ಮನುಷ್ಯನ ಪ್ರತಿಯೊಂದು ಕಾರ್ಯದಲ್ಲೂ ಎದೆಯಿಂದೇಳುವ ಧರ್ಮದ ಕೂಗು. ಸರಿತಪ್ಪುಗಳ ಆ ಧ್ವನಿ ಎಚ್ಚರದಲ್ಲೇ ಕಾಣುವ ತಮ್ಮ ಕನಸುಗಳನ್ನೊಡೆದು ಪ್ರಮುಖಧ್ಯೇಯವನ್ನು ಮುಟ್ಟುವ ಕಾರ್ಯಕ್ಕೆ ಪ್ರೋತ್ಸಾಹಿಸುತ್ತಿತ್ತು. ಹಾಗೆ ಜಾಗೃತರಾದವರು ಸಾಗಿಸುತ್ತಿರುವ ತಮ್ಮ ಜೀವನದ ನಿರರ್ಥಕತೆಯನ್ನು ಮನಗಂಡರು. ತಮ್ಮ ಕೈಗಳಿಗಂಟಿದ ರಕ್ತವನ್ನು ಗುರುತಿಸಿ, ಆತ್ಮಕ್ಕೆ ಸೋಕಿದ ಪಾಪಭಾವ ಅವರ ಅರಿವಿಗೆ ಬರುತ್ತಿತ್ತು. ಅಲ್ಲಿಂದೆದ್ದು ಏಕಾಂತಕ್ಕೆ ನಡೆದು, ದೇಹಕ್ಕೆ ಬೇಕಾದ ಕನಿಷ್ಟ ಅಗತ್ಯಗಳಿಂದಲೇ ತೃಪ್ತರಾಗಿ, ನಿರಂತರ ಧ್ಯಾನದೊಳಗೆ ಧುಮುಕಿದರು. ವನಪ್ರದೇಶದಲ್ಲಿ ಹಣ್ಣುಹಂಪಲಿಗಾಗಿ ನಡೆದಾಡುವಾಗ, ಒಬ್ಬರಿಗೊಬ್ಬರು ಎದುರಾದರೂ, ಮಾತನಾಡಿ ಬಂಧಗಳನ್ನು ಬೆಳಸಿಕೊಳ್ಳದೆ, ಮುಗುಳ್ನಗೆಯಿಂದಲೇ ಪರಸ್ಪರರ ಅಂತರಾತ್ಮ ಶುಭಾಶಯದ ಶಾಂತಿಯನ್ನು ಅನುಭವಿಸುತ್ತಿತ್ತು. ಸಾಮಾನ್ಯಜನಕ್ಕೆ ಈ ಕಾಡು, ತಪೋಭೂಮಿಯೆಂದೇ ಪ್ರಖ್ಯಾತವಾಯಿತು. ಈ ಪವಿತ್ರ ಪ್ರದೇಶದಲ್ಲಿ ಬೇಟೆಯ ದಾರಿ ಮರೆಯಾಗಿ, ಪ್ರಾಣಿಸಂಕುಲದ ಹತ್ಯೆಗಾಗಿ ತುಡಿಯುವ ಯಾವ ಬೇಡನಾಗಲಿ, ಬೇಟೆಗಾರನಾಗಲಿ ಭಯದಿಂದ ಇತ್ತ ಸುಳಿಯುತ್ತಿರಲಿಲ್ಲ.

ಒಂದು ಬೆಳಿಗ್ಗೆ, ವಿರಾಟ ಕಾಡಿನಲ್ಲಿ ನಡೆದಾಡುತ್ತಿದ್ದಾಗ, ತಪಸ್ಸಿನಿಂದ ಬಳಲಿ ಅಲುಗಾಡದೆ ನೆಲದಮೇಲೆ ಬಿದ್ದಿದ್ದ ವ್ಯಕ್ತಿಯೊಬ್ಬನನ್ನು ಕಂಡ. ಬಿದ್ದವನನ್ನು ಮೇಲೆತ್ತಲು ಯತ್ನಿಸಿದಾಗ ಆ ದೇಹ

ನಿರ್ಜೀವವಾಗಿರುವುದು ತಿಳಿಯಿತು. ಸತ್ತವನ ಕಣ್ಣೆವೆಗಳನ್ನು ಮುಚ್ಚಿ, ಕೆಲವು ಮಂತ್ರಗಳನ್ನುಚ್ಚರಿಸಿ, ಈ ತಪಸ್ವಿಸೋದರನ ಆತ್ಮವು ಅಂತ್ಯಕ್ರಿಯೆಯಿಂದ ಸದ್ಗತಿಯನ್ನು ಪಡೆಯಲು ಪರಿಶುದ್ಧವಾಗಲೆಂದು, ಅಗಾಧವಾದ ಪೊದೆಗಳಿಂದ ಚಿತೆಯನ್ನು ಸಿದ್ಧಮಾಡಲು ಉದ್ಯುಕ್ತನಾದ. ಅಲ್ಪಾಹಾರ ಮತ್ತು ಹಣ್ಣುಹಂಪಲಿನ ಪಥ್ಯವಿಧಾನದಿಂದ ದುರ್ಬಲನಾಗಿದ್ದ ವಿರಾಟನಿಗೆ ಅದು ತನ್ನ ಶಕ್ತಿಗೆ ಮೀರಿದ ಕಾರ್ಯವಾಗಿತ್ತು. ಸಹಾಯವನ್ನರಸುತ್ತಾ, ಸಾಗಿ, ಗಡುಹಾಯಿಯನ್ನು ಹಿಡಿದು ನದಿಯನ್ನು ದಾಟಿ, ಹತ್ತಿರದ ಹಳ್ಳಿಯನ್ನು ಸೇರಿದ.

ತಾವು "**ನಿಸ್ಸಂಗಿಯಾದ ನಕ್ಷತ್ರ**"ವೆಂದು ಕರೆಯುವ ಉಜ್ವಲ ಸ್ವರೂಪವನ್ನು ಕಣ್ಣೆದುರು ಕಂಡು, ಎಲ್ಲರೂ ವಿನೀತಭಾವದಿಂದ, ಆತನ ಅಪೇಕ್ಷೆಯೇನೆಂದು ಕೇಳಿ ತಿಳಿದುಕೊಂಡು, ಚಿತೆಯನ್ನು ಸಿದ್ದಗೊಳಿಸುವ ಕಾರ್ಯಕ್ಕೆ ಹೊರಡಲು ಅಣಿಯಾದರು. ವಿರಾಟ ನಡೆದಲ್ಲೆಲ್ಲಾ ಅಲ್ಲಿನ ಹೆಂಗಸರು ಅವನ ಕಾಲಿಗೆ ಬಿದ್ದು ನಮಸ್ಕರಿಸುತ್ತಿದ್ದರು. ಮಕ್ಕಳು ಮುಗ್ಧ ಕುತೂಹಲದಿಂದ ಈ ಶಾಂತಚಿತ್ತನ ವೈಭವವನ್ನು ಕಂಡು ಚಕಿತರಾಗಿ ನಿಲ್ಲುತ್ತಿದ್ದರು. ಭೇಟಿಯನ್ನಿತ್ತ ಈ ದಿವ್ಯ ಪುರುಷನ ವಸ್ತ್ರದಂಚಿಗೆ ಮುತ್ತಿಟ್ಟು, ಕಾಲಿಗೆ ಬಿದ್ದು, ಆಶೀರ್ವಾದವನ್ನು ಬೇಡಲು ಜನ ತಮ್ಮ ವಾಸಗೃಹಗಳಿಂದ ಹೊರಬರತೊಡಗಿದರು. ವಿರಾಟ, ಮಾನವತೆಯ ಈ ಸೌಮ್ಯತರಂಗಗಳನ್ನು ದಾಟುತ್ತಾ, ಮಾನವರ ಬಗೆಗೆ, ಯಾವ ಬಂಧನಕ್ಕೂ ಸಿಲುಕದ ತನ್ನ ಪ್ರೀತಿ ಎಷ್ಟು ಪರಿಶುದ್ಧವಾಗಿದೆ ಎಂದು, ಮುಗುಳ್ನಗೆಯ ಸಂತೃಪ್ತಿಯಿಂದ, ಮುಂದೆ ಸಾಗಿದ.

ಆದರೆ, ಆ ಸರಳವಾದ ಗುಡಿಸಿಲುಗಳ ಸಾಲನ್ನು ದಾಟುತ್ತಾ, ಅದರಂಚಿಗೆ ಬಂದು, ಎಲ್ಲೆಲ್ಲೂ ಹತ್ತಿರಕ್ಕೆ ಬಂದು ನುಡಿದ ಎಲ್ಲರ ಪೂಜ್ಯಭಾವದ ವಂದನೆಗಳನ್ನು ಸ್ವೀಕರಿಸಿದವನು, ಎದುರಾದ ಗುಡಿಸಿಲಿನಲ್ಲಿ ಕುಳಿತ ಹೆಂಗಸೊಬ್ಬಳನ್ನು ಕಂಡ. ಆಕೆಯ ಕಣ್ಣುಗಳು ಅವನನ್ನೇ ದಿಟ್ಟಿಸುತ್ತಾ ದ್ವೇಷದ ಉಂಡೆಗಳಂತೆ ಕಿಡಿಗಾರುತ್ತಿದ್ದವು. ಹಿಂದೆಲ್ಲೋ ಮರೆತುಹೋಗಿದ್ದ, ಕಠೋರವಾಗಿ ಆಪಾದಿಸುವ, ತನ್ನಿಂದ ಹತನಾದ ಅಣ್ಣನ ಕಣ್ಣುಗಳನ್ನು ಅಲ್ಲಿ ಕಂಡು, ಭಯದಿಂದ ಕುಗ್ಗಿಹೋದ. ಈಚಿನ ಪ್ರಶಾಂತ ದಿವ್ಯತೆಯ ವರ್ಷಗಳಲ್ಲಿ, ಅವನ ಅಂತರಾತ್ಮವು ಶತ್ರುತ್ವಭಾವವನ್ನು ಉತ್ಕ್ರಮಿಸಿತ್ತಾಗಿ, ಆಕೆ ಸುಮ್ಮನೆ ನೋಡುತ್ತಿರುವದನ್ನೇ ತಾನು ತಪ್ಪಾಗಿ ಅರ್ಥೈಸಿಕೊಂಡೆನೆಂದು ಭಾವಿಸಿದ. ಆದರೆ ಮತ್ತೆ ಅತ್ತ ನೋಡಿದಾಗ, ತನ್ನತ್ತಲೇ ವಿದ್ವೇಷದ ಶಾಪವನ್ನಿಡುವ ಆ

ಬಿರುಗಣ್ಣುಗಳೇ ಕಂಡವು. ತಾನೇ ಹೇಗೋ ಸಾಂತ್ವನಮಾಡಿಕೊಂಡು, ಆ ಗುಡಿಸಿಲಿನತ್ತ ಹೆಜ್ಜೆಹಾಕಿದಾಗ, ಆಕೆ ಎದ್ದು, ಮರೆಗೆ ನಡೆದಳು. ಆ ಮರೆಯ ಮಸುಕಿನಲ್ಲಿಯೂ, ವನದಲ್ಲಿ ಸುಳಿಯುವ ಭೀಕರ ವ್ಯಾಘ್ರದ ಕಣ್ಣುಗಳಂತೆ, ವಿರಾಟನ ಮೇಲಿನ ಆಕೆಯ ಕ್ರೂರ ದೃಷ್ಟಿ ಎಡಬಿಡದೆ ಹಾಯಿತು.

ವಿರಾಟ ತನ್ನೆದೆಯನ್ನು ಮುಟ್ಟಿ ತನ್ನಲ್ಲಿಯೇ ಹೇಳಿಕೊಂಡ. ಎಂದೂ ನಾನು ನೋಡಿಲ್ಲದ ಈ ಹೆಣ್ಣಿಗೆ ನಾನೇನು ದ್ರೋಹಮಾಡಿರಲು ಸಾಧ್ಯ? ಏಕೆ ಆಕೆಯ ದ್ವೇಷಪೂರಿತ ನೇತ್ರಗಳು ನನ್ನನೇ ದಿಟ್ಟಿಸುತ್ತಿವೆ? ಸಹನೆಯನ್ನು ವಹಿಸಿ, ಒಂದು ಸಲ ಮನೆಯ ಬಾಗಿಲನ್ನು ತಟ್ಟಿ ಕಾಯುತ್ತಾ ನಿಂತ. ಭಿಕ್ಷುಕನಂತೆ ಬಾಗಿಲನ್ನು ಮತ್ತೆ ತಟ್ಟಿದ. ಕೊನೆಗೆ, ಸಂಕೋಚದ ಹೆಜ್ಜೆಗಳನ್ನಿಟ್ಟು, ಆಕೆ ಬಾಗಿಲ ಬಳಿಗೆ ಬಂದಳು. ಶತ್ರುವನ್ನು ದಿಟ್ಟಿಸುವ ರೀತಿಯಲ್ಲೇ ಅವನನ್ನು ನೋಡಿದಳು.

‘‘ನನ್ನಿಂದ ನಿನಗೆ ಮತ್ತೇನು ಬೇಕಿದೆ?’’ ಕೋಪೋದ್ರಿಕ್ತಳಾಗಿ ನುಡಿದಳು.

ಉಕ್ಕಿಬರುತ್ತಿರುವ ತನ್ನ ಕೋಪಕ್ಕೆ ನಡುಗುತ್ತಾ, ಕೆಳಗೆಲ್ಲಿ ಬೀಳುವೆನೋ ಎಂಬ ಭಯದಿಂದ ಅವಳ ಕೈಗಳು ಬಾಗಿಲ ಕಟ್ಟನ್ನು ಭದ್ರವಾಗಿ ಹಿಡಿದಿದ್ದವು.

ಆದರೇನು, ವಿರಾಟ ಆಕೆಯನ್ನು ಹತ್ತಿರದಿಂದ ನೋಡಲು, ಈಕೆಯನ್ನು ತಾನೆಂದೂ ಕಂಡಿಲ್ಲವೆಂಬುದು ಖಚಿತವಾಗಿ, ಹೃದಯ ತಿಳಿಯಾಯಿತು. ತಾನೋ ಬಾಳಿನ ಕೊನೆಯ ಹಂತದಲ್ಲಿರುವವನು, ಇನ್ನೂ ಯೌವನದ ಹೊಸ್ತಿಲಲ್ಲಿರುವ ಈಕೆ; ನಿಶ್ಚಯವಾಗಿಯೂ, ಯಾವುದೇ ಸಂದರ್ಭದಲ್ಲೂ ಒಬ್ಬರನ್ನೊಬ್ಬರು ಭೇಟಿಯಾದ ಘಟನೆಯೇ ನಡೆದಿಲ್ಲ. ಆಕೆಗೆ ಯಾವ ರೀತಿಯಿಂದಲೂ ತಾನು ಕೇಡನ್ನು ಬಗೆಯುವ ಸಾಧ್ಯತೆಯೇ ಕಂಡುಬರಲಿಲ್ಲ.

‘‘ಅಪರಿಚಿತಳಾದ ಹೆಣ್ಣಿಗೆ ನನ್ನ ಶಾಂತಿಯ ಶುಭಾಶಯಗಳು!’’ ವಿರಾಟ ನುಡಿದ. ’’ಏಕೆ ತಾಯಿ ಹೀಗೆ ವ್ಯಗ್ರಳಾಗಿ ನನ್ನತ್ತ ನೋಡುತ್ತಿರುವೆ? ನಾನೇನು ನಿನ್ನ ಶತ್ರುವೇ? ನಿನಗೇನಾದರೂ ಕೇಡನ್ನುಂಟುಮಾಡಿದ್ದೇನೆಯೇ?"

"ಕೇಡನ್ನುಂಟು ಮಾಡಿರುವೆಯಾ?’’ –ವಿದ್ವೇಷದ ನಗೆಯಿಂದ ಆಕೆ ನುಡಿದಳು, ’’ನನಗೇನು ಕೇಡನ್ನುಂಟು ಮಾಡಿರುವೆಯಾ? –"ಏನಿಲ್ಲ, ತುಂಬ ಕ್ಷುಲ್ಲಕ, ಬಹಳ ಪೊಳ್ಳಾದದ್ದು. ನನ್ನ ತುಂಬಿದ

ಮನೆಯನ್ನು ನೀನು ಬರಿದುಮಾಡಿದೆ. ನನ್ನ ಪ್ರಾಣಸಮಾನನಾದವನನ್ನು ನನ್ನಿಂದ ಕಸಿದುಕೊಂಡೆ. ನನ್ನ ಜೀವನವನ್ನು ಸಾವಾಗಿ ಬದಲಾಯಿಸಿದೆ. ತೊಲಗು, ಮತ್ತೆ ನಿನ್ನನ್ನು ನೋಡಿಬಿಟ್ಟೇನು, ಇಲ್ಲದಿದ್ದರೆ ನನ್ನ ಕೋಪ ಏನುಮಾಡುತ್ತದೆಯೋ ನನಗೇ ತಿಳಿಯದು."

ವಿರಾಟ ಮತ್ತೆ ಆಕೆಯತ್ತ ನೋಡಿದ. ಕೋಪದಿಂದ ಕುದಿಯುತ್ತಿದ್ದ ಅವಳನ್ನು ಅವಳಪಾಡಿಗೆ ಬಿಡುವುದೇ ಕ್ಷೇಮವೆಂದೆಣಿಸಿ, ಹೊರಡಲು ತಿರುಗಿ ಇಷ್ಟನ್ನು ಹೇಳಿದ.

‘‘ತಾಯಿ, ನೀನು ಭಾವಿಸಿಕೊಂಡಿರುವ ವ್ಯಕ್ತಿ ನಾನಲ್ಲ. ಮಾನವರ ನಿವಾಸಗಳಿಂದ ನಾನು ಬಹುದೂರವಿದ್ದೇನೆ. ಅಲ್ಲದೆ ಯಾರ ವಿಧಿಯಲ್ಲೂ ನನ್ನ ಪಾತ್ರವಿಲ್ಲ. ನೀನು ಮತ್ತಾರನ್ನೋ ನಾನೆಂದು ಭಾವಿಸಿದಂತಿದೆ.’’

ಆದರೆ ಆಕೆ ಅವನತ್ತ ಕೈಯನ್ನು ತಿವಿದು ತೋರಿಸುತ್ತಾ, ಧ್ವನಿಯನ್ನೇರಿಸಿ :

‘‘ನೀನು ಯಾರೆಂದು ಎಲ್ಲರೂ ತಿಳಿದಿರುವಷ್ಟೇ ಸ್ಪಷ್ಟವಾಗಿ ನನಗೂ ತಿಳಿದಿದೆ ! ನೀನು ವಿರಾಟ. ಯಾವನನ್ನು ಇವರೆಲ್ಲಾ ’’**ನಿಸ್ಸಂಗಿಯಾದ ನಕ್ಷತ್ರ**’’ವೆಂದು ಕರೆದು, ಮೌಲ್ಯಗಳ ನಾಮ ಚತುಷ್ಟಯಗಳಿಂದ ಹೊಗಳುವರೋ ಅವನೇ ಅಲ್ಲವೇ ನೀನು? ಈ ಭೂಮಿಯಮೇಲೆ ಕಟ್ಟಕಡೆಯ ನ್ಯಾಯಾಧೀಶನೊಬ್ಬ ಬದುಕಿರುವವರೆಗೂ, ನಿನ್ನ ವಿರುದ್ಧವಾದ ನನ್ನ ದೂರಿನ ಆಕ್ರಂದನ, ನನ್ನ ಬಾಯಿಂದ ಹೊರಹೊಮ್ಮುತ್ತಿರುತ್ತದೆ. ನನ್ನನ್ನು ಕೇಳಿದೆಯಲ್ಲಾ ! ಬಾ, ಬಂದುನೋಡು, ನೀನೇನು ಮಾಡಿರುವೆಯೋ ಒಳಗೆ ಬಂದು ನೋಡು"

ನಿಬ್ಬರೆಗಾದ ವಿರಾಟನ ಮೇಲುಡುಪಿನ ಅಂಚನ್ನು ಹಿಡಿದು ಮನೆಯೊಳಕ್ಕೆ ಅವನನ್ನ ಎಳೆದು ತಂದು ನಿಶ್ಚಲವಾಗಿ ಚಾಪೆಯಮೇಲಿದ್ದ ಒಂದು ಆಕೃತಿಯ ಬಳಿ ನಿಲ್ಲಿಸಿದಳು. ಅದರತ್ತ ಬಗ್ಗಿನೋಡಿದ ವಿರಾಟ ಹೌಹಾರಿ ಹಿಂದೆಗೆದ. ಅಲ್ಲಿ ಮಲಗಿದ್ದ ಸತ್ತ ಹುಡುಗನ ಕಣ್ಣುಗಳು, ತನ್ನ ಸೋದರನ ಸಾವಿಲ್ಲದ ಕಣ್ಣುಗಳು ನಿಂದಿಸಿ ಚುಚ್ಚುವಂತೆ ಅವನತ್ತ ನೋಡುತ್ತಿದ್ದವು. ಮಗನ ಪಕ್ಕಲ್ಲಿ ಕುಸಿದು ಕುಳಿತ ಆ ಹೆಣ್ಣು ದುಃಖದಿಂದ ನರಳುತ್ತಾ ನುಡಿದಳು.

"ಇವನಾರು ಗೊತ್ತೆ? ಸತ್ತು ಬಿದ್ದಿರುವ, ನನ್ನ ಮೂರನೆಯ ಮಗ, ನನ್ನ ಗರ್ಭ ಕಂಡ ಕೊನೆಯ ಹಣ್ಣು. ಇವನನ್ನೂ ಮಿಕ್ಕವರನ್ನೂ, ಸಾಧುವೆಂದು ದೇವದೂತನೆಂದು ಎಲ್ಲರಿಂದ ಹೊಗಳಿಸಿಕೊಳ್ಳುವ ನೀನು ಹತ್ಯೆಮಾಡಿದ್ದೀಯೆ."

''ಈ ನೇಯ್ಗೆಯನ್ನು ನೋಡು. ಅದರ ಮುಂದಿನ ಖಾಲಿಯದ ಆಸನವನ್ನು ನೋಡು. ಪ್ರತೀಕ, ನನ್ನ ಗಂಡ, ಇಲ್ಲಿ ಕುಳಿತಿರುತ್ತಿದ್ದ. ದಿನದಿಂದ ದಿನಕ್ಕೆ ಬೆಳ್ಳಗಿನ ಉಣ್ಣೆಯನ್ನು ನೇಯ್ದು ಈ ಪ್ರದೇಶದಲ್ಲೇ ಅಂಥ ನೇಕಾರನಿಲ್ಲವೆಂದು ಹೆಸರುಗಳಿಸಿದ್ದ. ದೂರ ಪ್ರದೇಶಗಳಿಂದ ತಮಗೆ ಬೇಕಾದ ವಸ್ತ್ರಗಳನ್ನು ನೇಯ್ದುಕೊಡುವಂತೆ ಕೇಳಿಕೊಂಡು ಎಷ್ಟೋ ಮಂದಿ ಬರುತ್ತಿದ್ದರು. ಅವನ ಕುಶಲಕಲೆಯೇ ನಮ್ಮ ಜೀವನಾಧಾರವಾಗಿತ್ತು. ನಮ್ಮ ದಿನಗಳಲ್ಲಿ ಹರ್ಷ ತುಂಬಿತ್ತು. ಪ್ರತೀಕ ತನ್ನ ವಹಿವಾಟಿನಲ್ಲಿ ಕರುಣಿಯೂ, ಉತ್ಸಾಹಿಯೂ ಆಗಿದ್ದ. ದುಷ್ಟರ ಸಂಗದಿಂದ ದೂರವಿದ್ದು ಬೀದಿಯ ಪೋಕರಿಗಳನ್ನು ಬಳಿಗೆ ಸೇರಿಸುತ್ತಿರಲಿಲ್ಲ. ಅವನಿಂದ ಮೂರು ಮಕ್ಕಳನ್ನು ಪಡೆದು ಅವರೂ ಸಹ ತಂದೆಯಂತೆ ದಯಾಶೀಲರಾಗಿ, ಧಾರ್ಮಿಕರಾಗಿ ರೂಪುಗೊಂಡಾರೆಂದು ಭಾವಿಸಿದೆ. ಆಗ ಬಂದ ಆ ಪಾಪಿ ಬೇಟೆಗಾರ. ದೇವರ ದಯೆಯಿಂದ ಮತ್ತೆ ಅವನು ನಮ್ಮ ನೆಲವನ್ನು ತುಳಿಯದಿರಲಿ. ಪ್ರತೀಕ ಅವನಿಂದ ತಿಳಿದುಕೊಂಡದ್ದೇನು? ಒಬ್ಬ, ತನ್ನೆಲ್ಲಾ ಸಂಪತ್ತನ್ನೂ ಮತ್ತು ಮನೆಮಂದಿಯನ್ನು ತ್ಯಜಿಸಿ, ವಿರಕ್ತನಾಗಿ, ಆದರೂ ನೆಲದಬಾಳನ್ನು ಬಾಳುತ್ತಾ, ಸಂಪೂರ್ಣವಾಗಿ ಭಗವಂತನಿಗೆ ದಾಸ್ಯಭಾವದಿಂದ ಸೇವೆಯನ್ನು ಸಲ್ಲಿಸುತ್ತಿರುವ ಸಂಗತಿ. ಬೇಟೆಗಾರ ಮತ್ತೂ ಹೇಳಿದ. ''ಅವನ ತನ್ನ ಕೈಯಿಂದಲೇ ಕುಟೀರವೊಂದನ್ನು ಕಟ್ಟಿಕೊಂಡಿದ್ದಾನೆ". ಪ್ರತೀಕ ಹೆಚ್ಚು ಗಂಭಿರನಾಗುತ್ತಾ ಹೋದ. ಸಂಜೆಯ ವೇಳೆಯಲ್ಲಿ ಧ್ಯಾನಕ್ಕೆ ಕೂಡುತ್ತಿದ್ದ. ಮಾತನಾಡುವುದು ವಿರಳವಾಯಿತು. ಒಂದು ರಾತ್ರಿ ಮಲಗಿದ್ದವಳು ಎಚ್ಚರವಾಗಿ ನೋಡಿದರೆ ಪಕ್ಕದಲ್ಲಿ ಅವನಿಲ್ಲ. ವನ್ಯ ಜನಗಳು 'ಸಾತ್ತ್ವಿಕರ ತಪೋಭೂಮಿ' ಎಂದು ಕರೆಯುವ ಆ ಕಾಡಿಗೆ, ನೀನು ಎಲ್ಲಿದ್ದು ದೇವರಧ್ಯಾನದಲ್ಲಿ ನಿರತನಾಗಿರುವೆಯೋ ಆ ಕಾಡಿಗೆ ಹೊರಟುಹೋದನೆಂದು ತಿಳಿಯಿತು. ಅವನು ತನ್ನ ಧ್ಯಾನದಲ್ಲೇ ಮುಳುಗಿ, ನಮ್ಮನ್ನು ಮರೆತ. ಇಂದು, ಕೊನೆಗುಳಿದ ಈ ಮೂರನೆಯ ಮಗನೂ ಸತ್ತ. ನೀನೇ ನನ್ನ ಗಂಡನನ್ನು ದಾರಿತಪ್ಪಿಸಿದೆ. ನೀನು ದೈವದ ಸತ್ಯಸಾರವನ್ನು ತಿಳಿಯುವ ಹೊತ್ತಿಗೆ, ನನ್ನ ಮೂವರು ಮಕ್ಕಳೂ ಮತ್ತು ನಾನು ಧೂಳಾಗಿ ನೆಲದಾಳದಲ್ಲಿರುತ್ತೇವೆ. ಹೇ ಗರ್ವಿತ ಸಾಧು ! ನ್ಯಾಯಾಧೀಶನ ಮುಂದೆ ನನ್ನ ನೋವಿನ, ಸಾವಿನ

ದೂರನ್ನು ಸಲ್ಲಿಸಲು ತಪಿಸುತ್ತಿದ್ದರೆ, ಕಾಡಿನಲ್ಲಿ ಕುಳಿತು ಹಕ್ಕಿಗಳಿಗೆ ಕಾಳುಗಳನ್ನು ಹಾಕಿಕೊಂಡು, ಎಲ್ಲಾ ನೋವು ಹಿಂಸೆಗಳಿಂದ ದೂರವಾಗಿದ್ದು, ನಿನ್ನ ಪಾಪಕ್ಕೆ ಹೇಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವೆ? ತನಗೆ, ತನ್ನ ಮಕ್ಕಳು ಮತ್ತು ಕುಂಟುಬಕ್ಕೆ ಆಧಾರವಾಗಿ ದುಡಿಯುತ್ತಿದ್ದ ಒಬ್ಬ ಪ್ರಾಮಾಣಿಕ ವ್ಯಕ್ತಿಗೆ ಮಂಕುಬೂದಿಯನ್ನು ಚೆಲ್ಲಿ, ತನ್ನ ಕರ್ತವ್ಯದಿಂದ ವಿಮುಖನನ್ನಾಗಿಸಿ, ಕ್ರಿಯಾಶೀಲನಾಗಿ ತನ್ನ ಮಕ್ಕಳಿಗೆ ಅನ್ನಕೊಡುತ್ತಿದ್ದವನಿಗೆ, ವಿರಕ್ತನಾಗಿ ಏಕಾಂಗಿಯಾಗಿ ದೇವರ ಸನ್ನಿಧಿಯಲ್ಲಿರುವುದು, ನಮ್ಮ ಸುತ್ತಣ ಜನರೊಡನೆ ಕ್ರಿಯಾಶೀಲ ಜೀವನವನ್ನು ನಡೆಸುವುದಕ್ಕಿಂತಲೂ ಮೇಲು ಎನ್ನುವ ಮೂರ್ಖಬುದ್ಧಿಯಿಂದ ಒಬ್ಬ ಪ್ರಾಮಾಣಿಕ ಗೃಹಸ್ಥನನ್ನು ದಾರಿತಪ್ಪಿಸಿದೆ."

ವಿರಾಟನ ಮುಖ ಬಿಳುಪೇರಿ, ತುಟಿಗಳು ಕಂಪಿಸಿದವು.

‘‘ನನ್ನ ಜೀವನದ ಆದರ್ಶ ಇತರರಮೇಲೆ ಇಂಥ ಪರಿಣಾಮವನ್ನು ಬೀರುವುದೆಂದು ನನಗೆ ತಿಳಿದಿರಲಿಲ್ಲ. ನಾನು ಮಾತ್ರವೇ ಏಕಾಂಗಿಯಾಗಿ ಅನುಭವಿಸಲೆಂದೇ ಈ ಮಾರ್ಗವನ್ನು ಅವಲಂಬಿಸಿದೆ."

‘‘ಎಲ್ಲಿಹೋಯಿತು ನಿನ್ನ ವಿವೇಕ? ಏ ಸಾಧು, ಒಬ್ಬ ಸಣ್ಣಹುಡುಗನಿಗೂ ತಿಳಿದಿದೆಯಲ್ಲಾ! ಸಕಲವೂ ದೇವನ ಕಾರ್ಯಗಳೇ. ಯಾರೊಬ್ಬರೂ, ಇಚ್ಛಾನುಸಾರವಾಗಿ, ತಮ್ಮ ಕರ್ತವ್ಯವಕ್ಕೆ ವಿಮುಖರಾಗಿ, ತಮ್ಮ ಹೊಣೆಯನ್ನು ಬಿಟ್ಟು ಓಡಿಹೋಗುವಂತಿಲ್ಲ. ಬೌದ್ಧಿಕ ಗರ್ವದಿಂದ ಮೋಹಿತನಾಗಿ, ನಿನ್ನ ಕಾರ್ಯಗಳಿಗೆ ನೀನೇ ಪ್ರಭುವೆಂದು ತಿಳಿದುಕೊಂಡು, ಇತರರಿಗೂ ಉಪದೇಶ ಕೊಡುವ ಗುರುವೆಂದು ಭಾವಿಸಿಕೊಂಡೆ. ನಿನಗೆ ಮಧುರವೆನಿಸಿದ್ದು ನನಗೆ ನುಂಗಲಾರದ ವಿಷವಾಗಿ, ನಿನ್ನ ಬಾಳಿನಿಂದ ನನ್ನ ಕೊನೆಯ ಮಗನೂ ಸತ್ತು ನೆಲಸೇರುವ ಸಂದರ್ಭಬಂತು.’’

ವಿರಾಟ ಗಾಢಮೌನದಲ್ಲಿ ಮುಳುಗೆದ್ದು, ತಪ್ಪಿತಸ್ಥನೋ ಎಂಬಂತೆ ಬಾಗಿ ವಂದಿಸಿದ.

‘‘ನೀನು ಹೇಳಿದ್ದು ಸತ್ಯ ತಾಯಿ. ನಿನ್ನ ನೋವಿನ ಆ ಒಂದು ಮಾತಿನಲ್ಲಿ, ಋಷಿಗಳೆಲ್ಲರ ಮೌನಧ್ಯಾನದಲ್ಲಿಲ್ಲದ ಮಹಾಜ್ಞಾನವೇ ಇದೆ. ನನ್ನ ದುರ್ದೈವದಿಂದ, ನಾನರಿತ ಸತ್ಯವನ್ನು, ಕಷ್ಟಗಳ ನೋವಿನಿಂದ ರೋಧಿಸುವವರಲ್ಲಿ, ಅಮೃತನಾದ ನನ್ನ ಸೋದರನ ಕಣ್ಣುಗಳಲ್ಲಿ ಸಾಕ್ಷಾತ್ತಾಗಿ

ಮೂರ್ತಿವೆತ್ತಂತೆ ಕಂಡುಕೊಡಿದ್ದೇನೆ. ದೈವದ ಮುಂದೆ ತೋರಿದ ವಿನಮ್ರತೆಯಲ್ಲಿ, ನನ್ನ ಹೆಮ್ಮೆಯ ನೆರಳಿತ್ತು ಎಂಬುದರ ನೋವು ನನ್ನನ್ನು ಚುಚ್ಚುತ್ತಿದೆ. ನಿಜ, ಯಾವ ಕಾರ್ಯವನ್ನೂ ಮಾಡದೆ ತಟಸ್ಥನಾದವನಿಂದ ತಾನೇ ಹೊಣೆಗಾರನಾಗುವ ಒಂದು ಕಾರ್ಯ ನೆಲದಮೇಲೆ ನಡೆದುಹೋಗುತ್ತದೆ. ಏಕಾಂತದಂಥ ಅಂಶವೂ ತನ್ನ ಸುತ್ತಣಜೀವಿಗಳಮೇಲೆ ಪರಿಣಾಮ ಬೀರುತ್ತದೆ. ಮತ್ತೆ ನಿನ್ನನ್ನು ಪ್ರಾರ್ಥಿಸುತ್ತಿದ್ದೇನೆ. ದಯವಿಟ್ಟು ನನ್ನನ್ನು ಕ್ಷಮಿಸು. ಈ ಕ್ಷಣವೇ ನಾನು ಕಾಡಿನ ಜೀವನವನ್ನು ತ್ಯಜಿಸುತ್ತಿದ್ದೇನೆ. ಪ್ರತೀಕನೂ ನನ್ನಂತೆ ವನದಲ್ಲಿನ ಏಕಾಕಿತನವನ್ನು ತ್ಯಜಿಸಿ, ನಿನ್ನ ಬಳಿಗೆ ಹಿಂತಿರುಗಿ, ನಿನ್ನ ಮಡಿಲಿಗೆ ಹೊಸಜೀವವನ್ನು ತುಂಬಲೆಂದು ಭಾವಿಸುತ್ತೇನೆ.”

ಬಾಗಿ, ಮುಂದಕ್ಕೆ ಸಾಗಿ ಆ ಹೆಣ್ಣಿನ ಪಾದಗಳ ಮೇಲಿಳಿದಿದ್ದ ವಸ್ತ್ರವನ್ನು ಚುಂಬಿಸಿದ. ಅವಳ ಮನಸ್ಸಿನಿಂದ ಕೋಪದ ಎಲ್ಲಾ ಭಾವಗಳೂ ಹಾರಿಹೋದವು. ವಂದಿಸಿ ಮರಳುತ್ತಿದ್ದ ಆ ಸ್ವರೂಪವನ್ನು ಆಶ್ಚರ್ಯದಲ್ಲಿ ಮುಳುಗಿ ಆಕೆ ನೋಡುತ್ತಿದ್ದಳು.

ವಿರಾಟ, ತನ್ನ ಕುಟೀರದಲ್ಲಿ ಇನ್ನೊಂದು ರಾತ್ರಿಯನ್ನು ಕಳೆದ. ಮತ್ತೊಂದು ಬಾರಿ ಬಾನಿನ ಚುಕ್ಕಿಗಳತ್ತ ನೋಡಿದ. ಸೂರ್ಯಾಸ್ತಮದಲ್ಲಿ ತೋರಿಕೊಳ್ಳುವ, ಸ್ವರ್ಗದಾಳದಲ್ಲಿನ ತಾರೆಗಳೆಂಬ ಆ ಶ್ವೇತಜ್ವಾಲೆಗಳು, ಮುಂಜಾನೆಗೆ ಮಂಕಾಗುವುದನ್ನು ಗಮನಿಸಿದ. ಇನ್ನೊಂದುಸಲ ತನ್ನ ಪ್ರೀತಿಯ ಹಕ್ಕಿಗಳನ್ನು ಸನ್ನೆಮಾಡಿ ಕರೆದು, ಉಣಿಸಿ, ಅವುಗಳನ್ನು ನೇವರಿಸಿದ. ನಂತರ, ವರ್ಷಗಳ ಹಿಂದೆ ತಂದುಕೊಂಡಿದ್ದ ತನ್ನ ದಂಡ ಮತ್ತು ಭಿಕ್ಷಾಪಾತ್ರೆಯನ್ನು ಗ್ರಹಿಸಿ ನಗರದ ದಾರಿಹಿಡಿದ.

ಏಕಾಕಿ ಸನ್ಯಾಸಿ ತನ್ನ ಕುಟೀರವನ್ನು ತ್ಯಜಿಸಿ ಮತ್ತೊಮ್ಮೆ ನಗರ ದ್ವಾರದೊಳಗಿದ್ದಾನೆಂಬ ವಾರ್ತೆ ಹಬ್ಬಿತೋ ಇಲ್ಲವೂ, ಜನರ ಗುಂಪುಗಳು ಈ ಪರಮಾದ್ಭುತವನ್ನು ನೋಡಲು ಧಾವಿಸಿ ಬಂದರು. ಎಷ್ಟೋ ಮಂದಿಯ ಮನಸ್ಸಿನಲ್ಲಿ, ತಪೋಭೂಮಿಯ ದಿವ್ಯನಿವಾಸವನ್ನು ಬಿಟ್ಟು ನಗರಕ್ಕೆ ಬಂದ ಇವನ ಆಗಮನದಿಂದ, ಏನೋ ಕೇಡು ಮೂಡುವುದೆಂಬ ಭಯವೂ ಸೇರಿತು. ಎರಡೂ ಬದಿಯಲ್ಲಿ ಗೌರವದ ಗೋಡೆಗಳಂತೆ ನೆರದ ಜನರತ್ತ ಸಾತ್ವಿಕವಾಗಿ ನೋಡಿ, ಪ್ರೇಮಪೂರ್ವಕವಾಗಿ, ಸಹಜವಾಗಿ ಅವನ ತುಟಿಗಳ ಮೇಲೆ ಮುಗುಳ್ನಗೆಯನ್ನು ಮೂಡಿಸಲು

ಯತ್ನಿಸಿದ. ಮೊದಲಬಾರಿಗೆ ತಾನು ನಗಲು ಸಾಧ್ಯವಾಗುತ್ತಿಲ್ಲವೆಂದು ಅನಿಸಿತು. ಕಣ್ಣುಗಳಲ್ಲಿ ಸ್ಮಶಾನಮೌನ ಕಾಣುತ್ತಿತ್ತು. ತುಟಿಗಳು ಬಿಗಿದುಕೊಂಡಿದ್ದವು.

ಮುಂದೆ ಸಾಗಿ ಅರಮನೆಯನ್ನು ತಲುಪಿದ. ಸಭೆ ಮುಗಿದು, ಮಹಾರಾಜನೊಬ್ಬನೇ ಆಸೀನನಾಗಿದ್ದ. ವಿರಾಟ ಪ್ರವೇಶಿಸಿದೊಡನೆ ಮಹಾರಾಜ ಸಂದರ್ಶಕನನ್ನು ಆಲಿಂಗಿಸಲೆಂದು ಎದ್ದುನಿಂತ. ಆದರೆ, ವಿರಾಟ ಮಂಡಿಯೂರಿ ಸಾಷ್ಟಾಂಗ ಪ್ರಣಾಮ ಮಾಡಿ, ತನ್ನ ಮನವಿಯ ಸಂಕೇತವಾಗಿ, ರಾಜನ ವಸ್ತ್ರದಂಚನ್ನು ಸ್ಪರ್ಷಿಸಿದ.

"ನಿನ್ನ ಅರ್ಥಿಯನ್ನು ಸಲ್ಲಿಸಲಾಗಿದೆ." ರಾಜ ನುಡಿದ. "ನಿನ್ನ ತುಟಿಗಳ ಮೇಲೆ ಅದು ಪದಗಳಾಗಿ ಮೂಡಿಬರುವ ಮೊದಲೇ, ಪುಣ್ಯರೂಪಿಯಾದ ಋಷಿಯೊಬ್ಬನ ಕೋರಿಕೆ ತೀರಿಸುವುದು ನನ್ನ ಭಾಗ್ಯವೆಂದು ತಿಳಿದು, ನಿನ್ನ ಇಚ್ಛೆ ಏನಿದ್ದರೂ ಅದನ್ನು ಈಡೇರಿಸುತ್ತೇನೆ."

"ಋಷಿಯೆಂದು ನನ್ನನು ಕರೆಯಬೇಡಿ," ವಿರಾಟ ನುಡಿದ. "ನಾನು ಧರ್ಮಯುತವಾದ ನೇರ ಮಾರ್ಗವನ್ನು ಹಿಡಿಯದೆ, ಒಂದು ವರ್ತುಲದಲ್ಲೇ ಸುತ್ತಿಕೊಂಡಿದ್ದೆ. ಈಗ ಸಿಂಹಾಸನದ ಮುಂದೆ ಯಾಚಕನಾಗಿ ನಿಂತಿದ್ದೇನೆ. ನಾನು ಪಾಪ ಮುಕ್ತನಾಗಲು, ಸರ್ವ ಕರ್ಮಗಳನ್ನೂ ತ್ಯಜಿಸಿದೆ. ಆದರೇನು, ಹುಲುಮಾನವರಿಗಾಗಿ ದೈವ ಬೀಸಿದ ಬಲೆಯಲ್ಲಿ ಸಿಕ್ಕಿಬಿದ್ದೆ."

"ನಾನು, ಪಾಪಗಳಿಂದ ದೂರಸರಿದು ಓಡಲು, ಉದ್ದೇಶ ಪೂರ್ವಕವಾಗಿ ಯಾವ ತಪ್ಪುಗಳನ್ನೂ ಮಾಡಲಿಲ್ಲ. ಆದರೆ ನಮ್ಮ ಪಾದಗಳು ಈ ನೆಲದ ಸರಪಳಿಯಿಂದ ಬಂಧಿತವಾಗಿವೆ. ನಮ್ಮ ಕಾರ್ಯಗಳೆಲ್ಲವೂ ಅನಂತವಾದ ನಿಯಮಗಳ ದಾಸ್ಯದಲ್ಲಿವೆ. ಅಕರ್ಮವೂ ಕರ್ಮವೇ. ಏನನ್ನೂ ಮಾಡದೆ ಸುಮ್ಮನಿದ್ದರೂ ಅದಕ್ಕೆ ಪರಿಣಾಮವಿದೆಯಲ್ಲವೆ! ಅಂತೆಯೇ ಅಣ್ಣನ ಹತ್ಯೆಗೆ ನಮ್ಮ ಕಾರ್ಯಗಳು ಕಾರಣ. ಅದು ಪಾಪಕಾರ್ಯವೋ, ಯುದ್ಧನೀತಿಯ ಧರ್ಮಕಾರ್ಯವೋ, ಆತ್ಮರಕ್ಷಣೆಯ ಅಗತ್ಯವೋ, ನಮ್ಮ ಸ್ವೇಚ್ಛೆಯ ಪರಿಣಾಮವೋ ಏನಾದರೂ ಆಗಿರಲಿ, ಎಂದಿಗೂ ಸಾಯದ ನನ್ನ ಸೋದರನ ಕಣ್ಣುಗಳಿಂದ ನಾನು ತಪ್ಪಿಸಿಕೊಳ್ಳಲಾಗುತ್ತಿಲ್ಲ. ತೀವ್ರವಾದ ಅಪರಾಧಪ್ರಜ್ಞೆ ನನ್ನನು ಬಾರಿಬಾರಿಗೂ ದಹಿಸುತ್ತಿದೆ. ಆರೇಳುಬಾರಿ ದೈವ ಯೋಜಿಸಿದ ಕರ್ಮನಿಯತಿಯನ್ನು ಉಲ್ಲಂಘಿಸಿ ಬಾಳನ್ನು ಸೇವಿಸಲು ತಪ್ಪಿಸಿಕೊಂಡೆ. ನನ್ನ ನೆಮ್ಮದಿ ಮತ್ತು

ಕ್ಷೇಮವನ್ನು ಮಾತ್ರ ಪುಷ್ಟಿಯಾಗಿಸಿಕೊಳ್ಳಲು ಯತ್ನಿಸುತ್ತಾ ಇತರರಿಗೆ ಯಾವಸೇವೆಯನ್ನೂ ಮಾಡದೆ, ನಿಷ್ಪ್ರಯೋಜಕನೆನಿಸಿದೆ. ನಿಜವಾದ ಸೇವೆಯನ್ನು ನಾನೀಗ ಸಲ್ಲಿಸಬೇಕಾಗಿದೆ."

"ವಿರಾಟ, ನಿನ್ನ ಮಾತುಗಳು ನನಗೆ ವಿಚಿತ್ರವೆನಿಸಿ, ನನ್ನ ಬುದ್ಧಿಗೆ ಎಟುಕದೆ ಜಾರುತ್ತಿವೆ. ನಿನ್ನ ಕೋರಿಕೆಯೇನೋ ಹೇಳು, ಅದನ್ನು ಸಲ್ಲಿಸೋಣ."

"ಎಲ್ಲದರಿಂದ ಮುಕ್ತನಾಗಬೇಕೆಂಬ ಹಂಬಲದಿಂದ ವಿಧಿಯ ನಿಯತಿಯನ್ನೇ ತಪ್ಪಿಸಿಕೊಳ್ಳಲಾರೆ. ಸ್ವತಂತ್ರನಾದವನು ಎಂದಿಗೂ ಸ್ವತಂತ್ರನಲ್ಲ. ಅಕರ್ಮಿಯಾದಮಾತ್ರಕ್ಕೆ ಪಾಪದಿಂದ ದೂರವಾದಂತಲ್ಲ. ಯಾವನು ಸೇವೆಗಾಗಿಯೇ ತನ್ನ ಜೀವನವನ್ನು ಮುಡುಪಾಗಿಸುತ್ತಾನೋ ಅವನೇ ಸ್ವತಂತ್ರ. ತನ್ನ ಇಚ್ಛೆಯನ್ನು ಪರರಿಗೆ ಕೊಟ್ಟು, ತನ್ನೆಲ್ಲಾ ಚೈತನ್ಯವನ್ನೂ ಒಂದು ಕಾರ್ಯದಲ್ಲಿ ತೊಡಗಿಸಿ, ಯಾವುದನ್ನೂ ಪ್ರಶ್ನಿಸದೆ ಇರುವವನೇ ಸ್ವತಂತ್ರ. ನಮ್ಮದೇನಿದ್ದರೂ ಒಟ್ಟುಕಾರ್ಯದ ಮಧ್ಯಭಾಗದ ಹೊಣೆಯಷ್ಟೆ. ಕಾರ್ಯದ ಆದಿ, ಅಂತ್ಯ, ಕಾರ್ಯ–ಕಾರಣ ಸಂಬಂಧಗಳೆಲ್ಲಾ ದೈವದ ಮಂಡಿಯೇರಿಕುಳಿತಿವೆ. ನನ್ನ ಸ್ವೇಚ್ಛೆಯಿಂದ ನನ್ನನ್ನು ಬಿಡುಗಡೆಗೊಳಿಸಿಬಿಡಿ,. ಎಂಥ ಸ್ವೇಚ್ಛೆಯಾದರೂ ಅದು ಗೊಂದಲವೇ. ಯಾವ ಸೇವೆಯಾದರೂ ಸರಿ. ಅದೇ ನಿಜವಾದ ವಿವೇಕ."

"ನಿನ್ನನ್ನು ಅರ್ಥಮಾಡಿಕೊಳ್ಳಲು ನನ್ನಿಂದಾಗುತ್ತಿಲ್ಲ. ನನ್ನನು ಬಿಡುಗಡೆ ಮಾಡೆಂದು ಹೇಳುತ್ತಲೇ, ಸೇವೆಸಲ್ಲಿಸುವ ಅವಕಾಶವನ್ನು ನೀಡಿ ಎನ್ನುತ್ತಿದ್ದೀಯೆ. ಬೇರೆಯವರ ಸೇವೆಗೆ ನಿಂತವನು ಮುಕ್ತನಾದರೆ, ಅವನಿಂದ ಸೇವಿಸಲ್ಪಟ್ಟವನು ಮುಕ್ತನಾಗುವುದಿಲ್ಲವೇ? ನನ್ನ ವಿವೇಚನೆಗೆ ಮೀರಿದ ಮಾತಿದು."

"ಅದೇ ನ್ಯಾಯವಾದದ್ದು. ಮಹಾಪ್ರಭು, ನಿಮ್ಮ ಹೃದಯಕ್ಕೆ ಇದು ಅರ್ಥವಾಗದು. ಅದೇ ನಿಮಗೆ ಅರ್ಥವಾದಲ್ಲಿ, ನೀವು ಹೇಗೆ ಮಹಾರಾಜನಾಗಿ ಆಜ್ಞೆಗಳನ್ನು ಮಾಡಲು ಸಾಧ್ಯ?" ರಾಜನ ಮುಖ ಕೋಪದಿಂದ ಕಪ್ಪಿಟ್ಟಿತು.

"ಅಂದರೆ ರಾಜ್ಯವನ್ನಾಳುವ ಪ್ರಭು, ದೇವರ ದೃಷ್ಟಿಯಲ್ಲಿ, ಒಬ್ಬ ಸೇವಕನಿಗಿಂತಲೂ ಕನಿಷ್ಠನೆಂದು ನಿನ್ನ ಮಾತಿನ ಅರ್ಥವೇ?"

"ದೇವರ ದೃಷ್ಟಿಯಲ್ಲಿ, ಯಾರೊಬ್ಬರೂ ಸಹ ಮತ್ತೊಬ್ಬರಿಗಿಂತ ಕನಿಷ್ಠರೂ ಅಲ್ಲ, ಶ್ರೇಷ್ಠರೂ ಅಲ್ಲ. ಯಾರು ಸೇವಾಕಾರ್ಯದಿಂದ ಬಾಳ್ವೆಯನ್ನು ಸವೆಸುತ್ತಾ, ಅಪ್ರಶ್ನಪೂರ್ವಕವಾಗಿ, ತನ್ನ ಇಚ್ಛೆಗಳನ್ನೆಲ್ಲಾ ತ್ಯಜಿಸುವನೋ, ಅವನೇ ಎಲ್ಲಾ ಹೊಣೆಗಳಿಂದ ಮುಕ್ತನಾಗಿ ಭಗವಂತನಿಗೆ ತನ್ನನ್ನು ಅರ್ಪಿಸಿಕೊಂಡವನು. ಬಯಕೆಗಳಿಂದ ಬಾಳುತ್ತ, ತನಗೆ ವಿರುದ್ಧವೆನಿಸಿದ್ದನ್ನು ನಿವಾರಿಸಿಕೊಳ್ಳುವುದೇ ವಿವೇಕವೆಂದು ತಿಳಿದವನು, ವ್ಯಾಮೋಹಕ್ಕೆ ಬಲಿಯಾಗಿ ಪಾಪದಲ್ಲಿ ಬೀಳುತ್ತಾನೆ" ರಾಜನ ಮುಖಚರ್ಯೆ ಮತ್ತಷ್ಟು ಕಪ್ಪಾಯಿತು.

"ಹಾಗಿದ್ದಲ್ಲಿ ಒಂದು ವಿಧವಾದ ಸೇವೆ ಮತ್ತೊಂದು ಸೇವೆಗೆ ಸಮಾನವೆನಿಸಿ, ಯಾವ ಸೇವೆಯೂ ಇದೇ ಶ್ರೇಷ್ಠ ಎನ್ನಲಾಗದೆ, ಎಲ್ಲ ಸೇವೆಗಳೂ ಭಗವಂತನ ಮತ್ತು ಮಾನವರ ದೃಷ್ಟಿಯಲ್ಲಿ ಸಮಾನವೆಂದಾಯಿತಲ್ಲವೆ?"

"ಮಾನವನ ದೃಷ್ಟಿಯಲ್ಲಿ ಒಂದು ಸೇವೆ ಮತ್ತೊಂದಕ್ಕಿಂತ ಶ್ರೇಷ್ಠವೆಂಬ ಪರಿಗಣನೆ ಇರಬಹುದಾದರೂ, ಭಗವಂತನ ದೃಷ್ಟಿಯಲ್ಲಿ ಎಲ್ಲಾ ಸೇವೆಗಳೂ ಸಮಾನವೇ."

ರಾಜ, ಕಳೆಗುಂದಿದ ನೋಟದಿಂದ ವಿರಾಟನನ್ನು ಸ್ವಲ್ಪಕಾಲ ದಿಟ್ಟಿಸಿದ. ಅಭಿಮಾನ ಅವನ ಅಂತರಾಳವನ್ನು ಕಲಕಿಹಾಕಿತು. ಮತ್ತೆ ವಿರಾಟನತ್ತ ನೋಡಿದ. ಪೋಷಣೆಯಿಲ್ಲದೆ ಒಣಕಲಾದ ಮುಖ, ಸುಕ್ಕಾದ ಹಣೆಯನ್ನು ಸುತ್ತಿಕೊಂಡ ಬಿಳಿಗೂದಲು. ಈ ಮುದುಕ ವಿವೇಕವನ್ನು ಕಳೆದುಕೊಂಡು ಮರುಳಾದನೋ ಎಂದು ಬಗೆದ. ಅದನ್ನೇ ಪರೀಕ್ಷಿಸಿ ನೋಡೋಣವೆಂದು:, ''ನಮ್ಮ ಬೇಟೆನಾಯಿಗಳ ಯಜಮಾನನಾಗಿ ಅರಮನೆಯಲ್ಲಿ ಸೇವೆ ಸಲ್ಲಿಸುವಯಾ?'' ಎಂದು ನುಡಿದ.

ವಿರಾಟ, ನಡುಬಗ್ಗಿಸಿ ವಂದಿಸಿದ. ಕೃತಜ್ಞತಾಭಾವದಿಂದ ಸಿಂಹಾಸನದ ಪೀಠವನ್ನು ಚುಂಬಿಸಿದ.

ಆದಿನದಿಂದ ಮೊದಲುಗೊಂಡು, ದೇಶ ಹಿಂದೊಮ್ಮೆ ಯಾರನ್ನು **'ಪ್ರಜ್ವಲಿಸುವ ಖಡ್ಗ', 'ನ್ಯಾಯದ ಚಿಲುಮೆ', 'ಹಿತಬೋಧನೆಯ ಜ್ಯೋತಿ' , 'ನಿಸ್ಸಂಗಿಯಾದ ನಕ್ಷತ್ರ'** ಎಂಬ ಸದ್ಗುಣನಾಮಚತುಷ್ಟಯದಿಂದ ವೈಭವೀಕರಿಸಿತ್ತೋ, ಆತ ಅರಮನೆಗಂಟಿದ ನಾಯಿಗಳ ದೊಡ್ಡಿಯ ರಕ್ಷಕನಾಗಿ, ಕೆಳದರ್ಜೆಯ ಸೇವಕರಿಗೆ ನಿಯುಕ್ತವಾದ ಚೌಕಿಯಲ್ಲಿ ವಾಸಿಸುತ್ತಿದ್ದ.

ಅವನ ಮಕ್ಕಳಿಗೆ ವಿರಾಟ ಇಂದು ಹೇಯವೆನಿಸಿದ. ಕಾರ್ಯನಿಮಿತ್ತವಾಗಿ, ಅವನ ಮಕ್ಕಳು ಸಾಗುವದಾರಿ ವಿರಾಟನಿದ್ದ ಸ್ಥಳಕ್ಕೆ ಸನಿಹವಾಗಿದ್ದರೆ, ಅವರು ಒಂದು ಸುತ್ತು ಮೇಲಕ್ಕೆ ಮುಂದೆ ಸಾಗಿ, ಆ ಪ್ರದೇಶಕ್ಕೆ ದೂರವಾಗಿ ನಡೆದು, ಅಕಸ್ಮಾತ್ತಾಗಿ ವಿರಾಟನನ್ನು ನೋಡಿಬಿಟ್ಟರೆ, ಬೇರೆಯವರೆದುರಲ್ಲಿ ತಾವು ಅವನ ಮಕ್ಕಳೆಂದು ತಿಳಿದುಬಂದು ಉಂಟಾಗಬಹುದಾದ ಮುಜುಗರವನ್ನು ತಪ್ಪಿಸಿಕೊಳ್ಳುತ್ತಿದ್ದರು. ಪುರೋಹಿತರು ಅವನ ದರ್ಶನ ಅಮಂಗಳವೆಂದು ಬೆನ್ನು ತಿರುಗಿಸಿದರು. ಕೆಲವು ದಿನ ನಾಗರಿಕರು ಆ ತಾಣಕ್ಕೆ ಬಂದು ನಿಂತು ದಿಟ್ಟಿಸುತ್ತಾ, ಈ ಮುದುಕ ಒಂದುಕಾಲದಲ್ಲಿ ರಾಜಪ್ರಮುಖರಲ್ಲೇ ಪ್ರಥಮನಾಗಿದ್ದವನು ಇಂದು ಹಗ್ಗ, ಸರಪಳಿಗಳನ್ನು ಹಿಡಿದು ಬೇಟೆನಾಯಿಗಳನ್ನು ನಡೆಸುತ್ತಿರುವನಲ್ಲಾ ಎಂದು ಪೇಚಾಡುತ್ತಿದ್ದರು. ಈ ವೀಕ್ಷಕರತ್ತ ವಿರಾಟನ ಗಮನವೇ ಸುಳಿಯುತ್ತಿರಲಿಲ್ಲ. ಹಾಗಾಗಿ, ನೋಡುತ್ತ ನಿಂತವರು ಅಲ್ಲಿಂದ ಮುಂದೆ ಸಾಗಿ ಅವನನ್ನು ಮರೆಯುತ್ತಿದ್ದರು.

ವಿರಾಟ ಬೆಳಗಿನಿಂದ ಸಂಜೆಯವರೆಗೆ ನಿಷ್ಠೆಯಿಂದ ದುಡಿಯುತ್ತಿದ್ದ. ಬೇಟೆನಾಯಿಗಳ ಮುಖವನ್ನು ತೊಳೆದು, ಮೈಯನ್ನು ಒರೆಸಿ, ಅವುಗಳಿಗೆ ಆಹಾರವನ್ನು ತಂದಿಟ್ಟು, ವಿಶ್ರಾಂತಿಗೆ ಅಣಿಮಾಡಿಕೊಡುತ್ತಿದ್ದ. ಸ್ವಲ್ಪದಿನ ಕಳೆಯುವದರಲ್ಲೇ ಆ ಕ್ರೂರ ಮೃಗಗಳಿಗೆ ವಿರಾಟ, ಅರಮನೆಯ ಎಲ್ಲರಿಗಿಂತಲೂ ಆಪ್ತನೆನಿಸಿ, ಆ ಭಾವ ಅವನ ಹೃದಯಕ್ಕೆ ತೃಪ್ತಿಯನ್ನು ಕೊಟ್ಟಿತು. ಆ ಪ್ರಾಣಿಗಳು ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರೆ, ಅಪರೂಪವಾಗಿ ನುಡಿಯುತ್ತಿದ್ದ, ವಿರಾಟನ ಬಾಡಿ ಸುಕ್ಕಾದ ಮುಖದಮೇಲೆ ಮುಗುಳ್ನಗೆ ಕಾಣಿಸಿಕೊಳ್ಳುತ್ತಿತ್ತು. ಹೀಗೆಯೇ ಎಷ್ಟೋ ವರ್ಷಗಳು, ಯಾವ ಪ್ರಮುಖ ಘಟನೆಗಳೂ ಇಲ್ಲದೆ ಅವನ ಜೀವನ ಕಳೆಯಿತು. ಮಹಾರಾಜ ಮೃತನಾದ. ಹೊಸಬನೊಬ್ಬ ರಾಜನಾಗಿ ಬಂದು, ಈ ವಿರಾಟನಾರೋ ತಿಳಿಯದೆ, ಅತ್ತ ಬರುತ್ತಿದ್ದಾಗ ಒಂದು ಬೇಟೆನಾಯಿ ಬೊಗಳಿ ಗದ್ದಲಮಾಡಿತು. ರಾಜ ಅಲ್ಲಿದ್ದ ದೊಣ್ಣೆಯಿಂದ ವಿರಾಟನನ್ನು ಥಳಿಸಿದ. ಕಾಲ ಸಾಗಿ, ತನ್ನವರನ್ನೆಲ್ಲಾ ಸಂಪೂರ್ಣವಾಗಿ ವಿರಾಟ ಮರೆತ ದಿನವೂ ಬಂದಿತು.

ಅವನ ಕಾಲದ ಕಥೆಯನ್ನು ಹೇಳುವಾಗ, ಎಲ್ಲವೂ ಮುಗಿದು ವಿರಾಟ ಮೃತನಾಗಿ, ಅವನ ದೇಹವನ್ನು ಸಾಮಾನ್ಯ ಸೇವಕರನ್ನು ಹೂಳವ ಸ್ಥಳದಲ್ಲಿಟ್ಟು ಮುಚ್ಚಿದ್ದರು. ಒಂದು ಕಾಲದಲ್ಲಿ ಸದ್ಗುಣನಾಮ ಚತುಷ್ಪಯದಿಂದ ಯಾವ ವ್ಯಕ್ತಿಯನ್ನು ವೈಭವೀಕರಿಸಿದ್ದರೋ, ಅವನು

ಈಗಿನವರೆಗೆ ಹೆಸರೇ ತಿಳಿಯದ ಅಪರಿಚಿತನಾಗಿ ಮಣ್ಣೊಳಗೆ ಮಲಗಿದ್ದ. ಅವನ ಮಕ್ಕಳೂ ಅತ್ತ ಸುಳಿಯಲಿಲ್ಲ. ಯಾವ ಪುರೋಹಿತನೂ ಬಂದು ಅಂತ್ಯಕ್ರಿಯೆಯ ನಿಯುಕ್ತ ಮಂತ್ರಗಳನ್ನು ಪಠಿಸಲಿಲ್ಲ. ಬೇಟೆನಾಯಿಗಳು ಮಾತ್ರ, ಎರಡು ದಿನ ಮತ್ತು ಎರಡು ರಾತ್ರಿ ಊಳಿಟ್ಟವು. ನಂತರ ಅವೂ ವಿರಾಟನನ್ನು ಮರೆತವು. ಯಾವ ಶಾಸನಗಳಲ್ಲೂ ಅವನ ಬಗೆಗೆ ಹೇಳಿಲ್ಲ. ಯಾವ ಶಾಸ್ತ್ರಗ್ರಂಥಗಳಲ್ಲಿನ ಋಷಿಪರಂಪರೆಯ ಪಟ್ಟಿಯಲ್ಲೂ ವಿರಾಟನ ಹೆಸರಿಲ್ಲ.